
ಗೌರಿ
ಲಂಕೇಶ್

06 ಸೆಪ್ಟೆಂಬರ್ 2017 ಪುಟ 16 ರೂ. 15/-

ರಂಜನೆ ▪ ಬೋಧನೆ ▪ ಪ್ರಬೋಧನೆ




ಎರಡು ಐತಿಹಾಸಿಕ ಸಮಾವೇಶಗಳು



ಶಿವರಾಮ ಕಾರಂತ ಬಡಾವಣೆಗೆಂದು ಬಿಡಿಎ ಸ್ವಾಧೀನ ಪಡಿಸಿಕೊಂಡಿದ್ದ 3546 ಎಕರೆ 12 ಗುಂಟೆ ಜಮೀನಿನ ಪೈಕಿ ಯಡ್ಡಿ ಡೀನೋಟಿಫೈ ಮಾಡಿದ್ದು 257 ಎಕರೆಗಳಷ್ಟನ್ನು. ಇದರ ಸದ್ಯದ ಮಾರುಕಟ್ಟೆ ಮೌಲ್ಯವೇ 2000 ಕೋಟಿಗೂ ಅಧಿಕ. ಅಂದಹಾಗೆ ಇದು ಯಡ್ಡಿಗೆ ಸಿದ್ದರಾಮಯ್ಯ ಕೊಟ್ಟ ಪೆಟ್ಟಲ್ಲ. ಬದಲಿಗೆ ತಾನೇ ನಿಂತು ಸಿಎಂ ಪಟ್ಟ ಕಟ್ಟಿದ್ದ ಶಿಷ್ಯ ಸದಾನಂದ ಗೌಡ ಕೊಟ್ಟ ಗುರುಕಾಣಿಕೆ!

ಮತ್ತೆ ಶುರುವಾಗಿದೆ ಜೈಲು ಭೀತಿ

ಕರಾವಳಿ




ಚೆಡ್ಡಿ ಡಾನ್ ಭಟ್ಟನ ಭಿಕ್ಷಾಂದೇಹಿ ...ಯಲಾಟ

ಚಿತ್ರದುರ್ಗ



ಜಿ.ಪಂ ಅಧ್ಯಕ್ಷೆ ನಾಟ್‌ರೀಚಬಲ್ ಸೌಭಾಗ್ಯಮ್ಮ ನಾಪತ್ತೆ.....!!

ಮೈಸೂರು



ಪೇಪರ್ ಸಿಮ್ಮ ಪ್ರತಾಪನಿಗೆ ಟ್ವಿಟ್ಟರಿಗರ ತಪರಾಕಿ

ಕೊಪ್ಪಳ



ಜಾತಿ ಕೆಮಿಸ್ಟ್ರಿಯ ಜೆಡಿಎಸ್ ಲೆಕ್ಕಚಾರ ಕೈಹಿಡಿಯುತ್ತಾ?

ಸ್ವಾತಂತ್ರ್ಯ ಚಳವಳಿಯೋತ್ತರ ಗಾಂಧಿವಾದಿಯ ಮಾದರಿ: ಸುರೇಂದ್ರ ಕೌ



ಸಾಮಾನ್ಯವಾಗಿ ಗಾಂಧಿವಾದಿಯೆಂದರೆ, ಸ್ವಾತಂತ್ರ್ಯ ಹೋರಾಟಗಾರರೆಂದೇ ತಿಳಿಯಲಾಗುತ್ತಿದ್ದ ಕಾಲದಲ್ಲಿ ಬದುಕಿದ್ದ ಸುರೇಂದ್ರ ಕೌಲಗಿಯವರು, ಈ ವರ್ಷದ 'ಸ್ವಾತಂತ್ರ್ಯದ ತಿಂಗಳಲ್ಲೇ' ಇಲ್ಲವಾದರು. ಸ್ವಾತಂತ್ರ್ಯ ಬಂದಾಗಲೂ ಸುರೇಂದ್ರ ಕೌಲಗಿಯವರಿಗೆ 13 ವರ್ಷಗಳು ಮಾತ್ರ. ಹಾಗಾಗಿ ಅವರು, ಸ್ವತಂತ್ರ ಸಂಗ್ರಾಮದಲ್ಲಿ ಪಾಲ್ಗೊಳ್ಳುವ ಸಾಧ್ಯತೆಯಿರಲಿಲ್ಲ. ಆದರೂ 'ಸ್ವಾತಂತ್ರ್ಯ ಹೋರಾಟದ ಮೌಲ್ಯ'ಗಳಿಗೆ ಬದ್ಧವಾಗಿ ಜೀವಿಸಿದರು. ನಿರಂತರವಾದ ರಚನಾತ್ಮಕ ಚಟುವಟಿಕೆಗಳ ಜೊತೆಗೆ, ಆಗಾಗ್ಗೆ ಸಮಾಜದಲ್ಲಿ ನಡೆಯುವ ಅನ್ಯಾಯದ ವಿರುದ್ಧ ದನಿಯೆತ್ತುವ ಮೂಲಕ 'ಗಾಂಧೀ ಮಾರ್ಗ'ದ ನಿಷ್ಠಾವಂತ ಅನುಯಾಯಿಯಾಗಿ ಸಾಕಷ್ಟು ಕಾಲನೆನಪಿನಲ್ಲಿ ಉಳಿಯುತ್ತಾರೆ.

ಮಂಡ್ಯದ ಪರಿಸರದಲ್ಲಿ ಹಲವರು ಅವರನ್ನು ಕೌಜಲಗಿಯೆಂದು ಕರೆಯುತ್ತಿದ್ದುದನ್ನು ಗಮನಿಸಿದ್ದೇನೆ. ಕೌಜಲಗಿ ಮತ್ತು ಕೌಲಗಿ ಎರಡೂ ಸಹಾ ಉತ್ತರ ಕರ್ನಾಟಕದ ಹೆಸರುಗಳೇ. ಅಲ್ಲಿಂದ ಬಂದು, ಮೇಲುಕೋಟೆಯವರೇ ಆಗಿಬಿಟ್ಟದ್ದು, ಇಲ್ಲಿನವರೂ ಅವರನ್ನು ಮಂಡ್ಯದ ಅವಿಭಾಜ್ಯ ಅಂಗವೆಂದು ಭಾವಿಸಿದ್ದು ಆಶ್ಚರ್ಯದ ಸಂಗತಿಯೇನಲ್ಲ, ಮಂಡ್ಯದ ಬಗೆಗಿನ 'ಹೊರಗಿನ ಭಾವನೆ'ಗೆ ವಿರುದ್ಧವಾಗಿ ಇಲ್ಲಿ ಮಂಡ್ಯೇತರರನ್ನು ಹೊರಗಿನವರು-ಒಳಗಿನವರು ವ್ಯತ್ಯಾಸಗಳಿಲ್ಲದೇ ಒಳಗೊಳ್ಳುವ ಮನೋಭಾವ ಇದೆ. ಹಾಗಾಗಿಯೇ ನಮ್ಮಂಥ ಹಲವರಿಗೆ ಮೇಲುಕೋಟೆಯನ್ನು ನೆನೆಸಿಕೊಂಡಾಗ ಅದರಲ್ಲಿ ಕೌಲಗಿಯವರು ತಪ್ಪದೇ ಮನಸ್ಸಿನಲ್ಲಿ ಹಾದುಹೋಗುತ್ತಾರೆ. ಮೇಲುಕೋಟೆಯ ವಿಚಾರ ಬಂದಾಗ ಜನಸಾಮಾನ್ಯರಿಗೆ ಚೆಲುವನಾರಾಯಣ, ವೈರಮುಡಿ, ಬೆಟ್ಟದ ಮೇಲಿನ ದೇವಸ್ಥಾನ, ಅಯ್ಯಂಗಾರರು, ಪುಳಿಯೋಗರೆ ನೆನಪಿಗೆ ಬರುವ ಹಾಗೆಯೇ, ಇನ್ನೂ ಹಲವರಿಗೆ ಖಾದ್ರಿ ಶಾಮಣ್ಣ, ಪು.ತಿ.ನ., ಸುರೇಂದ್ರ ಕೌಲಗಿಯವರು ನೆನಪಿಗೆ ಬರುತ್ತಾರೆ.

ಧಾರ್ಮಿಕ ವ್ಯಕ್ತಿಯಾಗಿದ್ದೂ ಸೆಕ್ಯುಲರ್ ಆಗಿರಬಲ್ಲ ಈ ನಾಡಿನ ವಿಶಿಷ್ಟ ಸಾಂಸ್ಕೃತಿಕ ವ್ಯಕ್ತಿಗಳಲ್ಲಿ ಪು.ತಿ.ನ ಒಬ್ಬರು. ಪರಮನಾಸ್ತಿಕರಾಗಿದ್ದ ಶಿವರಾಮ ಕಾರಂತರು ಬಾಬ್ರಿ ಮಸೀದಿ ಧ್ವಂಸವನ್ನು ಸಮರ್ಥಿಸಿದ್ದರೆ, ಗೋಕುಲ ನಿರ್ಗಮನವನ್ನು ಬರೆದ ಪು.ತಿ.ನ ಅವರು ಅದನ್ನೆಂದೂ ಒಪ್ಪಲಿಲ್ಲ. ಕೌಲಗಿಯವರದ್ದು ಇನ್ನೊಂದು ಮಾದರಿ. ಅವರು ಅಧಾರ್ಮಿಕ ವ್ಯಕ್ತಿಯೆಂದು ಯಾರೂ ಹೇಳಲಾರರು. ಹಾಗೆಂದು ಪರಮ ಧಾರ್ಮಿಕರೆಂದೂ ಭಾವಿಸಲಾಗದು. ಆದರೆ ಸೆಕ್ಯುಲರ್: ಗಾಂಧಿಯವರ ರೀತಿಯಲ್ಲಿ 'ಹಿಂದೂ' ವಾಗಿದ್ದುಕೊಂಡು ಏಸುವನ್ನೂ, ರಹಿಮನನ್ನೂ ಭಜನೆಯಲ್ಲಿ ಅವರು ನೆನೆಯಬಲ್ಲರು. ಅವರ ಹೊಸಜೀವನ ದಾರಿಯಲ್ಲಿ ಸಂತೋಷ್ ಕೌಲಗಿಯವರು ಅಲ್ಲಿನ ನಿತ್ಯದ ರೂಢಿಯಂತೆ ಸರ್ವಧರ್ಮ ಪ್ರಾರ್ಥನೆ 'ಓಂ ತತ್ಸತ್ ಶ್ರೀ ನಾರಾಯಣ ನೀ' ಹೇಳಿಕೊಟ್ಟಾಗ ನಮಗೆ ಮುಜುಗರ ವಾಗಿತ್ತು. ಕೋಟಿಗಟ್ಟಲೆ ಧಾರ್ಮಿಕ ಜನರನ್ನು ನಾಡಕಟ್ಟುವ ಕಾಯಕದಲ್ಲಿ ಒಳಗೊಳ್ಳುವ ಸಹಜ ಚಟುವಟಿಕೆಗಳಾಗಿ ಅದು ಅಲ್ಲಿ ನೆಲೆಗೊಂಡಿತ್ತು. ಆ ಪರಿಸರದಲ್ಲಿ ಮಾಂಸಾಹಾರ ನಿಷಿದ್ಧವಾಗಿದ್ದರೂ, 'ನೀವು ಮಾಂಸಾಹಾರ ಬಿಡಬೇಕು' ಎಂಬ ಪರೋಕ್ಷ ಸಂದೇಶವನ್ನು ರವಾನಿಸುವ 'ಮೇಲರಿಮೆಯ ಬ್ರಾಹ್ಮಣ್ಯ' ಕಾಣುವುದಿಲ್ಲ. ಸೆಕ್ಯುಲರ್ ಆಗಿರುವ ಈ ಮಾದರಿಯ ಪ್ರತೀಕವಾಗಿ ಬದುಕಿದ, ಬದುಕುತ್ತಿರುವ ಕೌಲಗಿಗಳು ಇಲ್ಲೇ ಮೇಲುಕೋಟೆಯಲ್ಲೇ ಇದ್ದಾರೆ.

ಕೆಲವು ಊರುಗಳೂ ವಿಚಿತ್ರ. ಮೇಲ್ನೋಟಕ್ಕೆ ಪರಸ್ಪರ ಬೇರೆಯೇ ಎನ್ನಿಸುವ ವಿಚಾರಗಳು/ಚಟುವಟಿಕೆಗಳೆರಡೂ ಅಲ್ಲಿ ನಡೆಯುತ್ತಿರುತ್ತವೆ. ಶೃಂಗೇರಿಯಲ್ಲಿ ಅಲ್ಲಿನ ಮಠದ ಕಾರ್ಯಾಚರಣೆ ಹಾಗೂ ಕಲ್ಕುಳಿ ವಿಠಲ ಹೆಗ್ಡೆಯವರು ಮತ್ತು ಇನ್ನಿತರರ ಕಟು ವೈಚಾರಿಕ ಚಟುವಟಿಕೆಗಳು. ಉಡುಪಿಯಲ್ಲಿ ಕೋಮು ಸೌಹಾರ್ದ ವೇದಿಕೆಯ ಚಟುವಟಿಕೆಗಳು ಹಾಗೂ ಅಷ್ಟಮಠಗಳ ಕಾರ್ಯಾಚರಣೆ. ಮೇಲುಕೋಟೆಯ ವೈದಿಕ ಪರಂಪರೆ ಇವೆರಡಕ್ಕಿಂತ ಭಿನ್ನ. ಮೇಲಿನ ಉದಾಹರಣೆಗಳು ಅದ್ವೈತ, ದ್ವೈತ ಪರಂಪರೆಯ ಕರ್ಮಠ ಪೀಠಗಳು. ಇವತ್ತಿಗೂ ಪ್ರತಿಗಾಮಿ ರಾಜಕೀಯ, ಸಾಮಾಜಿಕ ಹುನ್ನಾರಗಳಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಭಾಗಿಯಾಗುತ್ತಿರುವ ಮಠಗಳು. ಅವಕ್ಕಿಂತ ಭಿನ್ನವಾಗಿ ಎಲ್ಲಾ ಜಾತಿ ಜನರಿಗೂ ದೀಕ್ಷೆ ಕೊಟ್ಟು ಹೊಸ ಮಾರ್ಗವನ್ನು ಹುಟ್ಟು ಹಾಕಿದ ರಾಮಾನುಜಾಚಾರ್ಯರ ಕರ್ಮಭೂಮಿ ಮೇಲುಕೋಟೆ. ಇವರಿಗೆ ಇಂದಿನ ಸಾಮಾಜಿಕ ರಾಜಕೀಯ ವಲಯಗಳಲ್ಲಿ ಅಂತಹ ದೊಡ್ಡ ಪ್ರಭಾವವೇನೂ ಇಲ್ಲ. ಈ ಪಂಥ ಆರಂಭವಾದ ಕಾಲಕ್ಕಿಂತ ಭಿನ್ನವಾಗಿ ಬ್ರಾಹ್ಮಣ್ಯದ ಎಲ್ಲಾ ತಾರತಮ್ಯದ ಗುಣಗಳನ್ನು ನಂತರ ಸಾಕಷ್ಟು ಮೈಗೂಡಿಸಿಕೊಂಡಿತು. ಕರ್ನಾಟಕದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಈ ಪಂಥದ ಜನ ಅಷ್ಟು ಆಕ್ರಮಣಕಾರಿಯಾಗಿಲ್ಲದೇ ಇರುವುದರಿಂದಲೋ ಏನೋ, ಅದೇ ಜಾಗದಲ್ಲಿ ಭಿನ್ನ ರೀತಿಯ ಸಾಮಾಜಿಕ, ಸಾಂಸ್ಕೃತಿಕ ನೆಲೆಗಳನ್ನು ಕಂಡುಕೊಂಡವರೂ ಮೃದುವಾಗಿಯೇ ಇದ್ದಿರಬಹುದು.

ಆದರೆ, ಮಂಡ್ಯ ಜಿಲ್ಲೆಯಲ್ಲಿ ಬಿಎಂಐಸಿ ಯೋಜನೆಯ ವಿರುದ್ಧ ಜನಜಾಗೃತಿ ಮೂಡಿಸುವ ಮೂಲಕ ಆರಂಭವಾದ ನಮ್ಮ ಚಟುವಟಿಕೆಗಳಲ್ಲಿ ಕೌಲಗಿಯವರು ಸಕ್ರಿಯವಾಗಿ ಪಾಲ್ಗೊಂಡರು. ಗಾಂಧಿವಾದಿಗಳೆಲ್ಲರಿಗೆ ಜಾಗತೀಕರಣ ಯುಗದ ಯೋಜನೆಗಳು ಬಹುದೊಡ್ಡ ಅಪಾಯವಾಗಿ ಕಂಡಿತು. ಹಾಗಾಗಿಯೇ ಬೆಂಗಳೂರಿನಲ್ಲಿ ಎಚ್.ಎಸ್. ದೊರೆಸ್ವಾಮಿ ಯವರು ಮತ್ತು ಮಂಡ್ಯದಲ್ಲಿ ಡಾ.ಸಿ.ಬಂದೀ ಗೌಡರಂತಹ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಆ ಹೋರಾಟದ ಮುಂಚೂಣಿಯಲ್ಲಿದ್ದರು. ಅಂತಹ ಇನ್ನೂ



ಹಲವು ಚಟುವಟಿಕೆಗಳಲ್ಲಿ ಕೌಲಗಿಯವರು ನಮ್ಮೊಡನಿದ್ದರು. ಆಗಾಗ್ಗೆ ಬರುವ ಇಂತಹ 'ಇಶ್ಯೂ' ಆಧಾರಿತ ಹೋರಾಟ ಗಾರರಾಗಿ ಕೆಲವರ ಜೀವನ ಮುಗಿದುಹೋಗಿಬಿಡುತ್ತದೆ. ಆ ಹೊತ್ತಿಗೆ ದೂರದಿಂದಷ್ಟೇ ಕೌಲಗಿಯವರನ್ನು ನೋಡಿದ್ದ ನಮ್ಮಂಥವರಿಗೆ, ಇವರೂ ಒಬ್ಬ ಸಜ್ಜನ ಹಿರಿಯ ವ್ಯಕ್ತಿಯಾಗಷ್ಟೇ ಆರಂಭದಲ್ಲಿ ಕಂಡಿದ್ದರು. ಈ ಒಡನಾಟದ ಫಲವಾಗಿ ಮೇಲುಕೋಟೆಗೆ ಭೇಟಿ ಕೊಟ್ಟಾಗ, ಅಲ್ಲಿನ ಅವರ ಚಟುವಟಿಕೆಗಳ ವಿಸ್ತಾರದ ಅರಿವಾಗಿದ್ದು.

ಗಾಂಧಿ ಮಾದರಿಯ ರಚನಾತ್ಮಕ ಚಟುವಟಿಕೆಗಳ ಕೆಲವು ಮಾಡೆಲ್‌ಗಳನ್ನು ಅವರು ಅಲ್ಲಿ ಕಟ್ಟಲೆತ್ನಿಸಿದ್ದು ನಮಗೆ ಕಂಡಿತು. ನಾವು ನೋಡುವ ಹೊತ್ತಿಗೆ ಅವರು ಕೆಲವು ಹಳೆಯ ಪ್ರಯತ್ನಗಳನ್ನು ನಿಲ್ಲಿಸಿದ್ದರು; ಹೊಸವನ್ನು ಕೈಗೆತ್ತಿಕೊಂಡಿದ್ದರು. ಅವರ ಮಗ ಸಂತೋಷ್ ಕೌಲಗಿಯವರು ಹೆಚ್ಚಿನ ಜವಾಬ್ದಾರಿ ಹೊತ್ತುಕೊಂಡಿದ್ದ ಕಾಲವಿದಾಗಿತ್ತು, ಇದರಲ್ಲೂ ವಿಶೇಷತೆಯಿತ್ತು. ಕೆ.ಪಿ.ಸುರೇಶ್ ಅವರು ಹೇಳಿರುವಂತೆ ಸುರೇಂದ್ರ ಕೌಲಗಿಯವರು ಸ್ವಾತಂತ್ರ್ಯ ಹೋರಾಟದ ಆದರ್ಶಗಳನ್ನು ಕಣಕಣದಲ್ಲೂ ತುಂಬಿಕೊಂಡ ಒಂದು ತಲೆಮಾರಿನ ಪ್ರತಿನಿಧಿ. ಇಂತಹ ಆದರ್ಶವಂತರಲ್ಲಿ ಹಲವರು ತಮ್ಮ ಮಕ್ಕಳನ್ನು 'ಚೆನ್ನಾಗಿ ಸೆಟ್ಲ್' ಆಗಲಿ ಎಂದು ಬಯಸುತ್ತಾರೆಯೇ ಹೊರತು, ಆದರ್ಶಗಳನ್ನು ಮುಂದುವರೆಸಲಿ ಎಂದಲ್ಲ. ಅದಕ್ಕಿಂತ ಭಿನ್ನವಾಗಿ ಇಂಜಿನಿಯರಿಂಗ್ ಓದಿಕೊಂಡಿದ್ದೂ ಹಳ್ಳಿಗೆ ಬಂದು ಗಾಂಧಿ ಆದರ್ಶಗಳನ್ನು ಮುಂದುವರೆಸುವ ರೀತಿ ಕೌಲಗಿಯವರು ಮಕ್ಕಳನ್ನು ತರಬೇತು ಮಾಡಿದ್ದರು. ಎರಡನೆಯದಾಗಿ, ಅವರ ಮಕ್ಕಳು ಈ ಚಿಂತನೆಗಳನ್ನು ಇನ್ನೊಂದಷ್ಟು ಮುಂದಕ್ಕೆ ತೆಗೆದುಕೊಂಡು ಹೋಗಬೇಕೇ ಹೊರತು, ಹಳೆಯ ಮಾದರಿಗಳಿಗೆ ಯಥಾವತ್ ಗಂಟು ಬೀಳುವುದಲ್ಲ ಎಂಬ ನಿಲುವು ಮತ್ತು ಧೋರಣೆಯಲ್ಲಿ ಅವರುಗಳಿದ್ದಾರೆ. ನಿಜಾರ್ಥದಲ್ಲಿ ಇದು ಸ್ವಾತಂತ್ರ್ಯೋತ್ತರ ಕಾಲದ ಗಾಂಧಿವಾದಿಯ 'ಮುಂದುವರಿಕೆ'ಯಾಗಿದೆ. ಅವರ ಮಕ್ಕಳು 21ನೇ ಶತಮಾನದ ಮುಂದುವರಿಕೆಯಾಗಿ ಬೆಳೆಯುತ್ತಿರುವುದೂ ವಿಶಿಷ್ಟವಾಗಿದೆ. ನಮಗೆ ನೇರವಾಗಿ 'ಅಮ್ಮ' ಗಿರಿಜಮ್ಮನವರ ಜೊತೆ ಅಷ್ಟು ಒಡನಾ[...]

ಆದರೆ, ಮೇಲುಕೋಟೆಯನ್ನೇ ನೆಲೆಯಾಗಿ[...] ಕೌಲಗಿಯವರು ನಡೆಸಿದ ಚಟುವಟಿಕೆಗಳಲ್ಲಿ ಗಿರಿ[...] ಪಾಲು ಒಂದು ಕೈ ಹೆಚ್ಚೇ ಇದ್ದಂತೆ ತೋರು[...] ಮೊಮ್ಮಕ್ಕಳು 'ಗಾಂಧಿವಾದ'ವನ್ನು ಇನ್ನೂ ಒ[...] ಮುಂದಕ್ಕೊಯ್ಯಲು ತರಬೇತಾಗುತ್ತಿರುವುದು[...] ವಿಶೇಷವಾಗಿದೆ. ಗಾಂಧಿ ಚಿಂತನೆ ಹಾಗೂ ಕ್ರಿ[...] ಯನ್ನು ಒಪ್ಪಿಕೊಂಡಿದ್ದ ಹಿರಿಯ ಕೌಲಗಿಯವ[...] ಕಾಲಕ್ಕೆ ಅಪ್‌ಡೇಟ್ ಆದಂತೆ ಅನ್ನಿಸ[...] 'ಮೇಲುಕೋಟೆಯು ಮಂಡ್ಯ ನಗರಕ್ಕೆ ದೂರವಾ[...] ನಿರಂತರ ಒಡನಾಟ ಸಾಧ್ಯವಾಗಲಿಲ್ಲ. ಹಾಗ[...] ಕುರಿತು ಹೀಗೇನೇ ಎಂದು ಹೇಳುವುದು [...] ನಮ್ಮ ಚಿಂತನೆ-ಚಟುವಟಿಕೆಗಳ ಕುರಿತು ಒಂದು[...] ತಮ್ಮದೇ ಶೈಲಿಯ ನಗೆಯೊಂದಿಗೆ ಭಿನ್ನ [...] ವ್ಯಕ್ತಪಡಿಸುತ್ತಿದ್ದುದರ ಆಚೆಗೆ, ತನ್ನ ಅನಿಸಿಕೆಯ[...] ಮೇಲೆ ಹೇರಿದಂತೆ ಎಂದೂ ಅನ್ನಿಸಿಲ್ಲ. ಹಲ[...] ಸಾಮಾಜಿಕ ಚಟುವಟಿಕೆಗಳಿಗೆ ನಮಗೆ ನೈತಿಕ ಬ[...] ನೆರವನ್ನು ನೀಡುವವರಲ್ಲಿ ರೈತಸಂಘ ಮತ್ತು[...] ಹಿರಿಯರ ಜೊತೆಗೆ, ಪ್ರೊ.ಎಚ್ಚೆಲ್ಕೆ, ಡಾ.ಸಿ.[...] ಮತ್ತು ಸುರೇಂದ್ರ ಕೌಲಗಿಯವರ ಭಾಗೀದ[...] ನಾವು ಯಾವಾಗಲೂ ನೆಚ್ಚಿಕೊಳ್ಳಬಹುದಿತ್ತು. ಎ[...] ಬೇಕೆಂದಾಗಲೆಲ್ಲಾ ಮಂಡ್ಯದಲ್ಲಿ ಸಿಗುತ್ತಿದ್ದರು. [...] ಸಂದರ್ಭಗಳಲ್ಲಿ ಮಾತ್ರ ಇನ್ನಿಬ್ಬರನ್ನು ಸಂಪರ್ಕ[...] ಸಂಘಟನೆಗಳ ಭಾಗವಾಗಿರುವ ಇತರ ಹಿರಿಯ[...] ನಂತರದ ತಲೆಮಾರಿನ ನಾವೆಲ್ಲರೂ ಇದ್ದೇ[...] ಹೇಳಲಾದ ಹಿರಿಯರು ಮೂವರೂ ಈಗಿಲ್ಲ[...]

ನಮಗಿಂತ ಬಹಳ ಹಿರಿಯರಾದ, ಭಿನ್ನವಾದ[...] ನೆಲೆಯಿಂದ ಹಾಗೂ ಸಮೃದ್ಧ ಜೀವನಾನುಭವದ[...] ನೆರವೂ ನೀಡಬಲ್ಲ ಜೊತೆಜೊತೆಗೇ 'ಬುದ್ಧಿ'ಯ[...] ಬಹುದಾಗಿದ್ದವರು ಕಣ್ಮರೆಯಾದಂತೆ, ಉಳಿದವರ[...] ಹೆಚ್ಚಾಗುತ್ತದೆ. ಅಂತಹ ಜವಾಬ್ದಾರಿಯನ್ನು ಉ[...] ನಾವೆಲ್ಲರೂ ಒಟ್ಟಾಗಿ ಹೊರಬೇಕಿದೆ ಅಷ್ಟೇ.

ಹದಿಯಾಳ ಮದುವೆ, ತ್ರಿವಳಿ ತಲಾಖ್: ಯಾಕಿಷ್ಟು ಭೇದಭಾವ?

ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com



ಈ ಅಂಕಣ ಬರೆಯುತ್ತಿರುವಾಗಲೇ ಸರ್ವೋಚ್ಚ ನ್ಯಾಯಾಲಯವನ್ನು ದೇಶದಾದ್ಯಂತ ಜನರೆಲ್ಲ ಕೊಂಡಾಡುತ್ತಿದ್ದಾರೆ. ಅದಕ್ಕೆ ಕಾರಣ ಇವತ್ತು ಬೆಳಗ್ಗೆ ಸರ್ವೋಚ್ಚ ನ್ಯಾಯಾಲಯದ ಸಾಂವಿಧಾನಿಕ ಪೀಠವು ತ್ರಿವಳಿ ತಲಾಖ್ ಪದ್ಧತಿಯನ್ನು ರದ್ದು ಮಾಡಿರುವುದು. ಇಸ್ಲಾಮ್ ಧರ್ಮದಲ್ಲೇ ಇರದ ಈ ತ್ರಿವಳಿ ತಲಾಖ್ ಪದ್ಧತಿಯನ್ನು ಆ ಸಮುದಾಯದ ಪುರುಷರು ಸೃಷ್ಟಿಸಿದ್ದು ಅದು ಮಹಿಳೆಯರ ದಮನಕ್ಕೆ ದೊಡ್ಡ ಅಸ್ತ್ರವಾಗಿತ್ತು. ಒಂದೇ ಉಸಿರಿನಲ್ಲೋ, ಎಸ್‌ಎಮ್‌ಎಸ್ ಮೂಲಕವೋ, ಇನ್ನೂ ಹೇಗೆಹೇಗೋ ಗಂಡನೊಬ್ಬ ಮೂರು ಬಾರಿ ತಲಾಖ್ ಅಂದರೆ ಸಾಕು ಆತ ತನ್ನ ಪತ್ನಿಯಿಂದ ವಿಚ್ಛೇದನ ಪಡೆಯುತ್ತಿದ್ದ. ಹೀಗೆ ...ರದ ಮಹಿಳೆಗೆ ನ್ಯಾಯ ಎಂಬುದು ಮರೀಚಿಕೆ ಆಗಿತ್ತು. ಆದ್ದರಿಂದ ಈ ತ್ರಿವಳಿ ತಲಾಖ್ ವಿರುದ್ಧ ಹಲವು ಮಹಿಳೆಯರು ಮತ್ತು ಮಹಿಳಾ ಸಂಘಟನೆಗಳು ನ್ಯಾಯಾಲಯದ ಮೆಟ್ಟಿಲೇರಿದ್ದರು. ಅವರ ಅಹವಾಲನ್ನು ಆಲಿಸಿದ ಪೀಠವು ಇಂದು ಸ್ವಾಗತಾರ್ಹ ತೀರ್ಪನ್ನು ನೀಡಿದೆ. ಅಂದಹಾಗೆ ಈ ತೀರ್ಪನ್ನು ನೀಡಿದ ಪೀಠದಲ್ಲಿ ಇದ್ದವರು ಮುಖ್ಯ ನ್ಯಾಯಮೂರ್ತಿಗಳಾದ ಜೆ.ಎಸ್.ಖೇಹರ್.


ಆದರೆ ಕಳೆದ ವಾರ ಇದೇ ನ್ಯಾ. ಖೇಹರ್ ಅವರಿದ್ದ ಇನ್ನೊಂದು ಪೀಠವು ಮಹಿಳೆಯರಿಗೆ ಆಘಾತಕಾರಿಯಾದಂತಹ ತೀರ್ಪನ್ನು ನೀಡಿದೆಯಲ್ಲದೆ, ಹಿಂದೂತ್ವವಾದಿಗಳ ಕಪೋಲಕಲ್ಪಿತ 'ಲವ್ ಜಿಹಾದ್'ಗೆ ಪುಷ್ಟಿಕೊಟ್ಟಿದೆ. ಜೊತೆಗೆ ಲವ್ ಜಿಹಾದ್ ಎಂಬ ಪ್ರಯೋಗ ಅಸ್ತಿತ್ವದಲ್ಲಿ ಇದೆಯೋ ಇಲ್ಲವೋ ಎಂದು ತನಿಖೆ ಮಾಡಬೇಕೆಂದು ರಾಷ್ಟ್ರೀಯ ತನಿಖಾ ತಂಡಕ್ಕೆ ಆದೇಶಿಸಿದೆ.

ಈ ಕುರಿತು ಸಿಪಿಐ-ಎಂಎಲ್ ಪಕ್ಷದ ಹಿರಿಯ ನಾಯಕಿ ಕವಿತಾ ಕೃಷ್ಣನ್ ಅವರು ಸುದೀರ್ಘವಾದ ಲೇಖನವನ್ನು ಬರೆದಿದ್ದಾರೆ. ಅದರ ಸಾರಾಂಶವನ್ನು ಇಲ್ಲಿ ನೀಡುತ್ತಿದ್ದೇನೆ.

ಕೇರಳದಲ್ಲಿ 24 ವರ್ಷ ವಯಸ್ಸಿನ ಅಖಿಲಾ ಎಂಬ ಹಿಂದೂ ಯುವತಿ ಜಸೀನಾ ಎಂಬ ಮುಸಲ್ಮಾನ ಯುವತಿಯ ಗೆಳತಿಯಾಗಿದ್ದಳು. ಕೆಲ ಸಮಯದ ನಂತರ ಅಖಿಲಾ ಜಸೀನಾಳ ಕುಟುಂಬದವರಿಗೂ ಹತ್ತಿರವಾದಳು. ಅವರೊಂದಿಗೆ ಆಕೆಯ ಸ್ನೇಹ ಹೆಚ್ಚಾದಾಗ ಆಕೆ ಇಸ್ಲಾಮ್



ಶಫಿನ್ ಮತ್ತು ಹದಿಯಾ



ಧರ್ಮಕ್ಕೆ ಮತಾಂತರಗೊಂಡು ತನ್ನ ಹೆಸರನ್ನು ಹದಿಯಾ ಎಂದು ಬದಲಾಯಿಸಿಕೊಂಡಳು. ಆಗ ಆಕೆಯ ತಂದೆ ತನ್ನ ಮಗಳನ್ನು ಬಲವಂತವಾಗಿ ಇಸ್ಲಾಮ್ ಧರ್ಮಕ್ಕೆ ಮತಾಂತರ ಮಾಡಲಾಗಿದೆ ಎಂದು ಎರಡು ಬಾರಿ ನ್ಯಾಯಾಲಯದ ಮುಂದೆ ದೂರು ಸಲ್ಲಿಸಿದರು. ಆದರೆ ಎರಡು ಬಾರಿಯೂ ನ್ಯಾಯಾಲಯವು ಪ್ರಾಪ್ತ ವಯಸ್ಕಳಾದ ಆಕೆ ಆರೋಗ್ಯವಾದ ಮನಸ್ಸನ್ನು ಹೊಂದಿದ್ದು ಸ್ವಂತ ನಿರ್ಧಾರ ತೆಗೆದುಕೊಳ್ಳಬಲ್ಲವಳಾಗಿದ್ದಾಳೆ ಎಂದು ತೀರ್ಪು ನೀಡುವ ಮೂಲಕ ತಂದೆಯ ದೂರನ್ನು ತಿರಸ್ಕರಿಸಿತ್ತು. ಆದರೂ ಆಕೆಯ ತಂದೆ ಕೇರಳ ಹೈಕೋರ್ಟಿನ ಮತ್ತೊಂದು ಪೀಠದ ಮುಂದೆ ಮೂರನೆ ಬಾರಿಗೆ ದೂರು ಸಲ್ಲಿಸಿದರು.

ಈ ದೂರನ್ನು ಕೋರ್ಟ್ ಆಲಿಸುತ್ತಿರುವಾಗಲೇ ಹದಿಯಾ ಮ್ಯಾಟ್ರಿಮೋನಿಯಲ್ ವೆಬ್‌ಸೈಟೊಂದರಲ್ಲಿ ಸೂಕ್ತ ವರನಿಗಾಗಿ ಅರ್ಜಿ ಸಲ್ಲಿಸಿದಳು. ಆಕೆಗೆ ಬಂದ ಹಲವಾರು ಅರ್ಜಿಗಳಲ್ಲಿ ಆಕೆ ಮಸ್ಕಟ್‌ನಲ್ಲಿ ಕೆಲಸ ಮಾಡುತ್ತಿರುವ ಮತ್ತು ಎಸ್‌ಡಿಪಿಐ ಸಂಘಟನೆಯ ಸದಸ್ಯನೂ ಆಗಿರುವ ಶಫಿನ್ ಜಹಾನ್ ಎಂಬುವವನನ್ನು ಆಯ್ಕೆ ಮಾಡಿಕೊಂಡು ಮದುವೆಯೂ ಆದಳು. ಆದರೆ ಕೇರಳ ಹೈಕೋರ್ಟ್ ಆಕೆಯ ತಂದೆಯ ಅರ್ಜಿಯನ್ನು ಎತ್ತಿಹಿಡಿದು ಆಕೆಯ ವಿವಾಹವನ್ನು ರದ್ದು ಮಾಡಿತಲ್ಲದೆ 24ರ ಪ್ರಾಯದ ಆಕೆಯನ್ನು ತನ್ನ ತಂದೆಯ ವಶಕ್ಕೆ ನೀಡಿತು. ಅಷ್ಟೇ ಅಲ್ಲ, ಹೈಕೋರ್ಟ್ ತನ್ನ ತೀರ್ಪಿನಲ್ಲಿ ತಂದೆತಾಯಂದಿರ ನಿಲುವಿನ ವಿರುದ್ಧ ಹಿಂದೂ ಮಹಿಳೆಯರನ್ನು ಇಸ್ಲಾಮ್ ಧರ್ಮಕ್ಕೆ ಮತಾಂತರಗೊಳಿಸಲಾಗುತ್ತಿದೆ, ಆನಂತರ ಅವರನ್ನು ಸಿರಿಯಾದಂತಹ ದೇಶಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಭಯೋತ್ಪಾದಕ ಸಂಘಟನೆಗಳಿಗೆ ಸೇರಿಸಲಾಗುತ್ತಿದೆ ಎಂದೂ ಹೇಳಿತ್ತು.

ಈ ತೀರ್ಪಿನ ವಿರುದ್ಧ ಹದಿಯಾಳ ಗಂಡ ಶಫಿನ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ. ತನ್ನ ವಿವಾಹವನ್ನು ರದ್ದುಗೊಳಿಸಿರುವ ಆದೇಶವು ಅಸಿಂಧು ಎಂದು ಹೇಳಬೇಕೆಂದು ಮನವಿ ಮಾಡಿದ. ತಂದೆಯ ಆರೋಪ, ಪತಿಯ ಅಹವಾಲು... ಇವುಗಳ ಹಿನ್ನೆಲೆಯಲ್ಲಿ ಸತ್ಯಾಸತ್ಯತೆ ಅರಿಯಲು ಹದಿಯಾಳನ್ನು ಕೇಳುವ ಬದಲು ಖೇಹರ್ ಅವರಿದ್ದ ಪೀಠವು "ಹಿಂದೂ ಯುವತಿಯರನ್ನು ಇಸ್ಲಾಮ್ ಧರ್ಮಕ್ಕೆ ಮತಾಂತರಗೊಳಿಸಿ ಅವರನ್ನು ಭಯೋತ್ಪಾದಕರನ್ನಾಗಿ ಪರಿವರ್ತಿಸಲಾಗುತ್ತಿದೆಯೇ ಎಂದು ವಿಚಾರಿಸಿ" ಎಂದು ರಾಷ್ಟ್ರೀಯ ತನಿಖಾ ತಂಡಕ್ಕೆ ಆದೇಶಿಸಿದೆ. ಹಾಗೆ ಮಾಡುವ ಮೂಲಕ ಸಂವಿಧಾನವು ಪ್ರಾಪ್ತ ಮಹಿಳೆಯರಿಗೆ ಕೊಟ್ಟಿರುವ ಆಯ್ಕೆಯ ಹಕ್ಕನ್ನು ಕೇರಳ ಹೈಕೋರ್ಟ್ ಮತ್ತು ಸರ್ವೋಚ್ಚ ನ್ಯಾಯಾಲಯ ಕಡಿತಗೊಳಿಸಿವೆ.

ಅದರಲ್ಲೂ ಕೇರಳ ಹೈಕೋರ್ಟ್ ತನ್ನ ತೀರ್ಪಿನಲ್ಲಿ "ತಂದೆಯಾದವನಿಗೆ ತನ್ನ ಮಗಳನ್ನು ಸೂಕ್ತ ವರನಿಗೆ ಕೊಟ್ಟು ಮದುವೆ ಮಾಡುವ ಹಕ್ಕು ಇರುತ್ತದೆ" ಎಂದಿದೆಯೇ ಹೊರತು ಪ್ರಾಪ್ತ ಮಹಿಳೆಗೆ ತಾನು ಯಾರನ್ನು ಮದುವೆ ಆಗಬೇಕೆಂಬ ಆಯ್ಕೆಯ ಹಕ್ಕು ಇದೆ ಎಂದು ಪ್ರಸ್ತಾಪಿಸಿಯೇ ಇಲ್ಲ. ಹದಿಯಾಳ ವಕೀಲ ಆಕೆಗೆ ತನ್ನ ಬದುಕಿನ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಹಕ್ಕು ಇದೆ ಎಂದು ಎಷ್ಟೇ ವಾದಿಸಿದರೂ ನ್ಯಾಯಾಲಯವು "ಆಕೆ ಇನ್ನೂ 20ರ ಹರೆಯದಲ್ಲಿ ಇರುವ ಮಾನಸಿಕವಾಗಿ ಪಕ್ವಾಗದಿರುವ ಹುಡುಗಿ. ಭಾರತೀಯ ಸಂಸ್ಕೃತಿಯ ಪ್ರಕಾರ, ಇನ್ನೂ ಮದುವೆ ಆಗಿರದ ಹುಡುಗಿ ಆಕೆಯ ಹೆತ್ತವರೊಂದಿಗೆ ಮದುವೆ ಆಗುವವರೆಗೂ ಇರಬೇಕು. ಆದ್ದರಿಂದ ಇಂತಹ ವ್ಯಕ್ತಿಯು ಹೆಚ್ಚು ಅಪಾಯಗಳಿಗೆ ತುತ್ತಾಗದಂತೆ ನೋಡಿಕೊಳ್ಳಲು ಆಕೆಯನ್ನು ಆಕೆಯ ಹೆತ್ತವರಿಗೆ ವಹಿಸುವುದು ನಮ್ಮ ಕರ್ತವ್ಯ ಎಂದು ಭಾವಿಸಿದ್ದೇವೆ" ಎಂದಿದೆ. ಅಷ್ಟು ಮಾತ್ರವಲ್ಲ, 24 ವರ್ಷ ವಯಸ್ಸಾಗಿರುವ ಹದಿಯಾಳನ್ನು ನ್ಯಾಯಮೂರ್ತಿಗಳು 'ಯುವತಿ' ಎಂದು ಕರೆಯುವ ಬದಲಾಗಿ 'ಹುಡುಗಿ' ಎಂದೇ ತಮ್ಮ ತೀರ್ಪಿನಲ್ಲಿ ಕರೆದಿದ್ದಾರಲ್ಲದೆ, ಆಕೆ ಆಯ್ಕೆ ಮಾಡಿಕೊಂಡಿರುವ ಹದಿಯಾ ಹೆಸರಿನ ಬದಲಾಗಿ ಆಕೆಯನ್ನು ಅಖಿಲಾ ಎಂದೇ ಕರೆದಿದ್ದಾರೆ.

ಖಾಪ್ ಪಂಚಾಯತ್‌ಗಳು ಮಾತ್ರವಲ್ಲ, ಅದೆಷ್ಟೋ ತಂದೆ ಮತ್ತು ಸಹೋದರರು/ಸಂಬಂಧಿಕರು ಬೇರೆ ಜಾತಿಯ ಅಥವಾ ಧರ್ಮದ ಯುವಕನನ್ನು ಪ್ರೀತಿಸಿ ಮದುವೆಯಾಗಿದ್ದಕ್ಕೆ ಹೆಣ್ಣುಮಕ್ಕಳನ್ನು ಬರ್ಬರವಾಗಿ ಕೊಂದುಹಾಕಿದ ಉದಾಹರಣೆಗಳು ನಮ್ಮ ಮುಂದಿವೆ. ಹಾಗಿದ್ದೂ ಹದಿಯಾ ಎಂಬ ಪ್ರಾಪ್ತ ಯುವತಿ ತನಗೆ ಇಷ್ಟ ಬಂದವನನ್ನು ಮದುವೆಯಾಗಿದ್ದು ಭಾರತೀಯ ಸಂಸ್ಕೃತಿಯ ಪ್ರಕಾರ ಸರಿ ಇಲ್ಲ ಎಂದು ಆಕೆಯನ್ನು ಮತ್ತೆ ತನ್ನ ಹೆತ್ತವರಿಗೆ ನ್ಯಾಯಾಲಯ ಕೊಟ್ಟಿದ್ದು ಎಷ್ಟು ಸರಿ?

ಹೈಕೋರ್ಟ್ ತನ್ನ ತೀರ್ಪಿನಲ್ಲಿ "ಪ್ರಕೃತಿಯಲ್ಲೂ ಅದೆಷ್ಟೋ ಪ್ರಾಣಿಗಳು ತಮ್ಮ ಮಕ್ಕಳನ್ನು ರಕ್ಷಿಸುತ್ತವೆ, ಅವುಗಳನ್ನು ಕಾಪಾಡಲು ತಮ್ಮ ಪ್ರಾಣವನ್ನೇ ಕೊಡುತ್ತವೆ. ಇದಕ್ಕೆ ಮಾನವ ಹೊರತಾಗಿಲ್ಲ" ಎಂದಿದೆ. ಧರ್ಮ, ಜಾತಿ, ಲಿಂಗ ತರಹದ ಗಡಿಗಳನ್ನು ದಾಟಿ ತಮಗೆ ಇಷ್ಟ ಬಂದವರನ್ನು ಮದುವೆಯಾಗಿದ್ದಕ್ಕೆ ಮಾನವ ಮಾತ್ರ ತನ್ನ ಹೆತ್ತಮಕ್ಕಳನ್ನು ಕೊಲ್ಲಬಲ್ಲವನಾಗಿದ್ದಾನೆ ಎಂದು ನ್ಯಾಯಮೂರ್ತಿಗಳಿಗೆ ತಿಳಿಸುವ ಅಗತ್ಯತೆ ಇದೆ. ಉದಾಹರಣೆಗೆ 2010ರಲ್ಲಿ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ್ದ ನಿರುಪಮಾ ಎಂಬ ಯುವ ಪತ್ರಕರ್ತೆ ಅಬ್ರಾಹ್ಮಣ ಜಾತಿಯವನನ್ನು ಪ್ರೀತಿಸಿದಳು ಎಂಬ ಕಾರಣಕ್ಕೆ ಆಕೆಯ ತಂದೆ ಮತ್ತು ತಾಯಿಯೇ ದೆಹಲಿಯಲ್ಲಿ ನಿರುಪಮಾಳನ್ನು ಕೊಂದು ಹಾಕಿದ್ದರು.

ಹದಿಯಾ ಎಂಬ ಪ್ರಾಪ್ತ ಯುವತಿಯೊಬ್ಬಳನ್ನು ನ್ಯಾಯಾಲಯ ಆಕೆಯ ಇಚ್ಛೆಯ ವಿರುದ್ಧ ಆಕೆಯ ತಂದೆ ತಾಯಿಗೆ ವಹಿಸುತ್ತದೆ. ಈಗ ಆಕೆ ತನ್ನ ತಂದೆಯ ಮನೆಯಲ್ಲಿ ಬಂಧಿ ಆಗಿದ್ದಾಳೆ. ಪೊಲೀಸರು ಮಾತ್ರವಲ್ಲ, ಆರೆಸ್ಸೆಸ್ ಸದಸ್ಯರೂ ಮನೆಯನ್ನು ಸುತ್ತುವರೆದಿದ್ದು ಆಕೆ ಯಾರನ್ನೂ ಭೇಟಿ ಆಗದಂತೆ ನೋಡಿಕೊಳ್ಳಲಾಗುತ್ತಿದೆ. ಇದು ಪ್ರಾಪ್ತ ಮಹಿಳೆಯೊಬ್ಬಳ ಹಕ್ಕುಗಳ ದಮನವಲ್ಲದೆ ಮತ್ತಿನ್ನೇನು?

ಇದೆಲ್ಲ ಮೀರತ್ ನಗರದಲ್ಲಿ ನಡೆದ 'ಲವ್ ಜಿಹಾದ್' ಪ್ರಕರಣವನ್ನು ನೆನಪಿಸುತ್ತದೆ. 2014ರಲ್ಲಿ ಶಾಲು ಎಂಬ 20ರ ಹರೆಯದ ಹಿಂದೂ ಯುವತಿ ಮದರಸಾ ಒಂದರಲ್ಲಿ ಶಿಕ್ಷಕಿ ಆಗಿದ್ದಳು. ಆಗ ಆಕೆ ತನ್ನನ್ನು ಯಾರೋ ಅಪಹರಿಸಿದ್ದರೆಂದೂ, ತನ್ನ ಮೇಲೆ ಸಾಮೂಹಿಕ ಅತ್ಯಾಚಾರ ನಡೆಯಿತೆಂದೂ, ತನ್ನನ್ನು ಬಲವಂತವಾಗಿ ಇಸ್ಲಾಮ್ ಧರ್ಮಕ್ಕೆ ಮತಾಂತರಿಸಲಾಗಿದೆ ಎಂದೂ ಕ್ಯಾಮೆರಾ ಮುಂದೆ ಹೇಳಿದ್ದಳು. ಜೊತೆಗೆ ತನ್ನಂತೆ ಇತರೆ ಹಿಂದೂ ಮಹಿಳೆಯರ ಮೇಲೂ ಅತ್ಯಾಚಾರ, ಬಲಾತ್ಕಾರದ ಮತಾಂತರ ನಡೆಯುತ್ತಿರುವುದು ಒಂದು ದೊಡ್ಡ ಸಂಚಿನ ಭಾಗ ಎಂದಿದ್ದಳು. ಆಕೆಯ ಆರೋಪವನ್ನು ಆಧರಿಸಿ ಕಲೀಮ್ ಎಂಬ ಮುಸಲ್ಮಾನನನ್ನು ಮತ್ತು ಆತನ ಸಂಬಂಧಿಕರನ್ನು ಪೊಲೀಸರು ಬಂಧಿಸಿದ್ದರು. ಆಕೆಯ ಹೇಳಿಕೆ ವೈರಲ್ ಆಗುವಂತೆ ಸಂಘಿಗಳು ನೋಡಿಕೊಂಡಿದ್ದರು.

ಆದರೆ ಕೆಲ ದಿನಗಳ ನಂತರ ತನ್ನನ್ನು ಬಂಧನದಲ್ಲಿಟ್ಟಿದ್ದ ತಂದೆಯ ಮನೆಯಿಂದ ತಪ್ಪಿಸಿಕೊಂಡ ಶಾಲು ಪೊಲೀಸರ ಮುಂದೆ ತಾನು ಕಲೀಮನನ್ನು ಪ್ರೀತಿಸುತ್ತಿರುವುದಾಗಿಯೂ, ತನ್ನನ್ನು ತನ್ನ ಹೆತ್ತವರು ಬಲಾತ್ಕಾರದಿಂದ ಬಂಧಿಸಿದ್ದರೆಂದೂ, ತಾನು ಕಲೀಂ ವಿರುದ್ಧ ಹೇಳಿಕೆ ಕೊಡಬೇಕೆಂದು ಒತ್ತಡ ತಂದಿದ್ದರೆಂದೂ ಹೇಳಿದ್ದಳು. ತಾನು ಹಾಗೆ ಹೇಳಿಕೆ ಕೊಡದಿದ್ದರೆ ತನ್ನನ್ನು 'ಮರ್ಯಾದೆ ಹತ್ಯೆ'ಗೆ ಗುರಿ ಮಾಡುತ್ತಾರೆಂದು ಬೆದರಿದ್ದರಿಂದ ಅಂತಹ ಹೇಳಿಕೆ ಕೊಟ್ಟಿದ್ದೆ ಎಂಬ ಸತ್ಯವನ್ನು ಹೊರಚೆಲ್ಲಿದ್ದಳು. ಈಗ ಶಾಲು ಮತ್ತು ಕಲೀಂ ಮದುವೆಯಾಗಿದ್ದಾರೆ.

ಇದಾದ ಮರುವರ್ಷ ಇನ್ನೊಂದು ಸತ್ಯಸಂಗತಿ ಹೊರಬಿತ್ತು. ಕೋಬ್ರಾಪೋಸ್ಟ್ ಎಂಬ ತನಿಖಾ ತಂಡ ನಡೆಸಿದ ಸ್ಟಿಂಗ್ ಆಪರೇಷನ್‌ನಲ್ಲಿ ಬಿಜೆಪಿ ಮತ್ತು ಆರೆಸ್ಸೆಸ್ ನಾಯಕರು "ಇಲ್ಲಿಯತನಕ ಒಂದೇ ಒಂದು ಲವ್ ಜಿಹಾದ್ ಪ್ರಕರಣ ನಡೆದಿಲ್ಲ" ಎಂದೂ, "ಆದರೆ ಅದನ್ನು ಅಸ್ತ್ರವಾಗಿ ಉಪಯೋಗಿಸಿಕೊಂಡು ಬೇರೆ ಧರ್ಮೀಯರನ್ನು ಹಿಂದೂ ಮಹಿಳೆಯರು ಮದುವೆಯಾಗದಂತೆ ಬಲವಂತವಾಗಿ ತಡೆಯುತ್ತಿರುವುದಾಗಿಯೂ" ಕೊಚ್ಚಿಕೊಂಡಿದ್ದನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯಲಾಗಿತ್ತು.

ಮುಜಾಫರ್‌ನಗರದಲ್ಲಿ ಮುನಿಸಿಪಲ್ ಚುನಾವಣೆಯಲ್ಲಿ ಬಿಜೆಪಿಯ ಅಭ್ಯರ್ಥಿ ಆಗಿದ್ದ ಸಂಜಯ್ ಅಗರ್ವಾಲ್ ಎಂಬಾತ 'ಲವ್ ಜಿಹಾದ್' ಮತ್ತು 'ಗೋ ಹತ್ಯೆ' ಎಂಬ ವಿಚಾರಗಳನ್ನು ಎತ್ತಿಕೊಂಡು ಹೇಗೆ ಮೋದಿಯ ಜನಪ್ರಿಯತೆ ಹೆಚ್ಚಾಗುವಂತೆ ಮಾಡುತ್ತೇವೆ ಎಂದು ಹೇಳಿದ್ದ. "ಹಿಂದೂ ಮಹಿಳೆಯರು ನಮ್ಮ ಮಾತು ಕೇಳಲಿಲ್ಲ ಅಂದರೆ ಅವರನ್ನು ಥಳಿಸುತ್ತೇವೆ. ಅವಮಾನ ಮಾಡುತ್ತೇವೆ" ಎಂದಿದ್ದ ಓಂಕಾರ್ ಸಿಂಗ್ ಎಂಬ ಆರೆಸ್ಸೆಸ್ ನಾಯಕ ಮುಸಲ್ಮಾನರ ಹಿಡಿತದಲ್ಲಿದ್ದ 125 ಹಿಂದೂ ಮಹಿಳೆಯರನ್ನು ರಕ್ಷಿಸಿರುವುದಾಗಿ ಹೇಳಿದ್ದ. "ಮೊದಲು ಮಹಿಳೆಯರ ಮನಪರಿವರ್ತನೆಗೆ ಪ್ರಯತ್ನಿಸುತ್ತೇವೆ. ಅವರು ಆಗಲೂ ಒಪ್ಪಲಿಲ್ಲ ಎಂದರೆ ಅವರು ಮದುವೆಯಾಗಿರುವ ಮುಸಲ್ಮಾನರ ಮೇಲೆ ಸುಳ್ಳುಸುಳ್ಳೇ ಅತ್ಯಾಚಾರದ ಪ್ರಕರಣವನ್ನು ದಾಖಲಿಸುತ್ತೇವೆ" ಎಂದಿದ್ದ. ಬಿಜೆಪಿ ಶಾಸಕ ಸುರೇಶ್ ರಾಣಾ ಎಂಬಾತ ತಾನು ಹೇಗೆ ಓರ್ವ ಹುಡುಗಿ ಮೂವರು ಮುಸಲ್ಮಾನ ಹುಡುಗರ ವಿರುದ್ಧ ಅತ್ಯಾಚಾರದ ಪ್ರಕರಣ ದಾಖಲಾಗುವಂತೆ ನೋಡಿಕೊಂಡೆ ಎಂದು ವಿವರಿಸಿದ್ದ. "ನಾನು ಈಗ ಸತ್ಯ ಹೇಳುತ್ತೇನೆ. ನಾವು ಅವರ ವಿರುದ್ಧ ರೇಪ್‌ಕೇಸ್ ಹಾಕಿಸಿದೆವು. ಆದರೆ ಅದು ರೇಪ್ ಆಗಿರಲಿಲ್ಲ, ಬದಲಾಗಿ ಅದು ಒಮ್ಮತದ ಕೂಡಿಕೆ ಆಗಿತ್ತು. ಅವರ ವಿರುದ್ಧ ದೂರು ನೀಡಲು ಹುಡುಗಿ ತಯಾರಿರಲಿಲ್ಲ, ಆಗ ಅವರೆಲ್ಲರಿಗೆ ಪಾಠ ಕಲಿಸಲು ರೇಪ್ ಕೇಸ್ ಹಾಕಿಸಿದ್ದೆವು" ಎಂದು ಕ್ಯಾಮೆರಾ ಮುಂದೆ ಒಪ್ಪಿಕೊಂಡಿದ್ದ.

ಇಂತಹ ಕೃತ್ಯಗಳಲ್ಲಿ ಹೇಗೆ ನ್ಯಾಯಾಲಯಗಳು, ವಕೀಲರು ಮತ್ತು ಪೊಲೀಸರು ತಮಗೆ ನೆರವಾಗುತ್ತಾರೆ ಎಂದು ಸಂಜಯ್ ಅಗರ್ವಾಲ್ ವಿವರಿಸಿದ್ದ. "ಬಹಳಷ್ಟು ವಕೀಲರು ನಮ್ಮ ಸ್ವಯಂಸೇವಕರು. ಮ್ಯಾಜಿಸ್ಟ್ರೇಟ್ ಮತ್ತು ಇತರ ಕಚೇರಿಗಳಲ್ಲಿ ಯಾವ ಹಿಂದೂ ಯುವತಿ ಮುಸಲ್ಮಾನ ಯುವಕನನ್ನು ಮದುವೆಯಾಗಲು ತನ್ನ ಹೆಸರನ್ನು ದಾಖಲಿಸುತ್ತಾಳೆ ಎಂಬುದರ ಮೇಲೆ ಅವರೆಲ್ಲ ನಿಗಾ ಇಟ್ಟಿರುತ್ತಾರೆ. ಅಂತಹ ಪ್ರಕರಣಗಳು ಅವರ ಗಮನಕ್ಕೆ ಬಂದಾಗ ನಮಗೆ ತಿಳಿಸುತ್ತಾರೆ. ನಾವು ಅಲ್ಲಿಗೆ ದೊಡ್ಡ ಗುಂಪಿನಲ್ಲಿ ಹೋಗುತ್ತೇವೆ. ಆ ಯುವತಿ ಮದುವೆಯಾಗಲು ನ್ಯಾಯಾಲಯದ ಮುಂದೆ ಹಾಜರಾಗದಂತೆ ತಡೆಯುತ್ತೇವೆ. ಇದರಲ್ಲಿ ಪೊಲೀಸರು ಮತ್ತು ನ್ಯಾಯಮೂರ್ತಿಗಳು ನಮ್ಮೊಂದಿಗೆ ಸಹಕರಿಸುತ್ತಾರೆ. ಒಮ್ಮೆ ಆಕೆಯನ್ನು ಆಕೆಯ ಹೆತ್ತವರಿಗೆ ಕೋರ್ಟು ಕೊಟ್ಟರೆ ಸಾಕು. ಮೂರು ದಿನಗಳಲ್ಲಿ ಅವಳನ್ನು ಬೇರೆಯವರಿಗೆ ಕೊಟ್ಟು ಮದುವೆ ಮಾಡಿಬಿಡುತ್ತೇವೆ" ಎಂದಿದ್ದ ಅಗರ್ವಾಲ್.

ದೆಹಲಿ ಜಿಲ್ಲಾ ನ್ಯಾಯಾಲಯಗಳ ಮುಂದೆ 2013ರಲ್ಲಿ ಆರು ತಿಂಗಳ ಅವಧಿಯಲ್ಲಿ ದಾಖಲಾದ ಅತ್ಯಾಚಾರ ಪ್ರಕರಣಗಳನ್ನು ಪರಿಶೀಲಿಸಿದಾಗ ಗೊತ್ತಾಗಿದ್ದೇನೆಂದರೆ ಅವುಗಳಲ್ಲಿ ಶೇ. 40 ರೇಪ್‌ಕೇಸ್ ಆಗಿರಲೇ ಇಲ್ಲ, ಬದಲಾಗಿ ಇತರೆ ಜಾತಿ ಅಥವಾ ಧರ್ಮದವನನ್ನು ಪ್ರೀತಿಸಿದ್ದಕ್ಕೆ ಅಥವಾ ಮದುವೆಯಾಗಿದ್ದಕ್ಕೆ ಆ ಯುವತಿಯ ಹೆತ್ತವರು ಯುವಕನ ವಿರುದ್ಧ ಕೊಡಿಸಿದ್ದ ಸುಳ್ಳು ದೂರುಗಳಾಗಿದ್ದವು.

ಪರಿಸ್ಥಿತಿ ಹೀಗಿರುವಾಗ, ಕೇರಳ ಹೈಕೋರ್ಟ್ ತೀರ್ಪನ್ನು ತಿರಸ್ಕರಿಸಬೇಕಿದ್ದ ಸರ್ವೋಚ್ಚ ನ್ಯಾಯಾಲಯ ಅದನ್ನು ಮಾಡದೆ 'ಲವ್ ಜಿಹಾದ್' ಬಗ್ಗೆ ತನಿಖೆ ಮಾಡಲು ರಾಷ್ಟ್ರೀಯ ತನಿಖಾ ತಂಡಕ್ಕೆ ಆದೇಶಿಸುವ ಮೂಲಕ ಪ್ರಾಪ್ತ ಮಹಿಳೆಯರ ಹಕ್ಕುಗಳನ್ನು ಕಸಿದುಕೊಂಡಿದೆ.

ಇರಲಿ, ಇವತ್ತು ತ್ರಿವಳಿ ತಲಾಖ್ ಬಗ್ಗೆ ಟ್ವಿಟರ್‌ನಲ್ಲಿ ವ್ಯಕ್ತವಾಗಿರುವ ಹಲವು ಅಭಿಪ್ರಾಯಗಳನ್ನು ಇಲ್ಲಿ ಹಂಚಿಕೊಳ್ಳುತ್ತೇನೆ.

ಸಾಗರಿಕಾ ಘೋಷ್: ಹಿಂದೂ ಮಹಿಳೆಯರು ತ್ರಿವಳಿ ತಲಾಖ್ ವಿರುದ್ಧ ಹೋರಾಡಿದ ಮುಸಲ್ಮಾನ ಮಹಿಳೆಯರನ್ನು ಅನುಸರಿಸಿ ಸಾಂಪ್ರದಾಯಿಕ ಪುರುಷಪ್ರಧಾನ ದಬ್ಬಾಳಿಕೆಗಳಿಂದ ಮುಕ್ತಿ ಪಡೆಯಬೇಕು.

ಪ್ರೇರಣಾ ಬಕ್ಷಿ: ಸದಾ ಮಹಿಳೆಯರಿಗೆ ಅತ್ಯಾಚಾರದ ಬೆದರಿಕೆ ಒಡ್ಡುವ 'ಭಕ್ತರು' ಇವತ್ತು ತ್ರಿವಳಿ ತಲಾಖ್‌ಗೆ ಸಂಬಂಧಪಟ್ಟಂತೆ 'ಮಹಿಳೆಯರ ಸಬಲೀಕರಣಕ್ಕೆ' ಸಂತೋಷ ವ್ಯಕ್ತಪಡಿಸುತ್ತಿರುವುದು ಮಜಬೂತಾಗಿದೆ.


ಶೇಜಾದ್ ಪೂನಾವಾಲಾ: ತ್ರಿವಳಿ ತಲಾಖ್ ಕುರಿತಂತೆ ಸುಪ್ರೀಮ್ ಕೋರ್ಟ್ ತೀರ್ಪು ಸ್ವಾಗತಾರ್ಹ. ಆದರೆ ಈಗ ಮೋದಿ ಖಾಪ್ ಪಂಚಾಯತ್‌ಗಳ ವಿರುದ್ಧವೂ ಕಠಿಣ ನಿಲುವನ್ನು ತೆಗೆದುಕೊಳ್ಳುತ್ತಾರೆಯೇ?

ಶೆಹ್ಲಾ ರಶೀದ್: ತ್ರಿವಳಿ ತಲಾಖ್ ಕುರಿತಂತೆ ಸುಪ್ರೀಮ್ ಕೋರ್ಟಿಗೆ ಶುಭಾಶಯಗಳು. ಈಗ ಸೆಕ್ಷನ್ 377, ದಾಂಪತ್ಯದಲ್ಲಿ ಆಗುವ ಅತ್ಯಾಚಾರ, ಆಧಾರ್ ಕಾರ್ಡ್, ಬೀಫ್ ಬ್ಯಾನ್‌ಗಳನ್ನೂ ರದ್ದು ಮಾಡುವಂತಾಗಲಿ.

ಅಂಬೇಡ್ಕರ್ ಕ್ಯಾರವನ್: ಅದೆಷ್ಟೋ ಮಾಂಗ್ಲಿಕ್ ಹಿಂದೂ ಹೆಣ್ಣುಮಕ್ಕಳನ್ನು ಬಲವಂತವಾಗಿ ಮರಕ್ಕೆ, ನಾಯಿಗೆ ಅಥವಾ ಬೆಕ್ಕಿಗೆ ಕೊಟ್ಟು ಮದುವೆ ಮಾಡುತ್ತಾರೆ. ಇಂತಹ ಬ್ರಾಹ್ಮಣೀಯ ಆಚರಣೆಗಳು ಅಮಾನವೀಯವಲ್ಲವೆ?

ಕೊನೆಯದಾಗಿ 'ಯೇ ಲೋಗ್!' ಎಂಬಾತನ ಕಾಮೆಂಟ್: ಸರಿ, ಇವತ್ತು ನ್ಯಾಯಾಲಯವು ನಿರಂಕುಶಾಧಾರಿತ ಆಧಾರದ ಮೇಲೆ ವಿಚ್ಛೇದನ ಪಡೆಯುವುದು ಸರಿ ಅಲ್ಲ ಎಂದಿದೆ. ಆದರೆ ಇದೇ ನ್ಯಾಯಾಲಯ ಕಳೆದ ವಾರ ಹದಿಯಾ ಎಂಬಾಕೆಯ ಮದುವೆಯನ್ನು "ಆಕೆಗೆ ತನಗೆ ಏನು ಬೇಕೆಂಬುದು ಗೊತ್ತಿಲ್ಲ" ಎಂದು ರದ್ದು ಗೊಳಿಸಿ ರಾಷ್ಟ್ರೀಯ ತನಿಖಾ ತಂಡಕ್ಕೆ ವಹಿಸಿದೆ. ■

ಚೆಡ್ಡಿ ಡಾನ್ ಭಟ್ಟನ ಭಿಕ್ಷಾಂದೇಹಿ ಬಯಲಾಟ


ಕಲ್ಲಡ್ಕ ಪ್ರಭಾಕರ ಭಟ್ಟ


ಕಲ್ಲಡ್ಕದ ಶ್ರೀರಾಮ ಶಾಲೆ

ಕರಾವಳಿಯ ಹಿಂದೂತ್ವದ ಖತರ್‌ನಾಕ್ ಹಿಕಮತ್ತುದಾರ ಕಲ್ಲಡ್ಕ ಪ್ರಭಾಕರ ಭಟ್ಟ ಚೆಡ್ಡಿಯಲ್ಲಿ ಇರುವೆ ಹೊಕ್ಕಂತೆ ಒಂದೇಸಮನೆ ಚಡಪಡಿಸುತ್ತಿದ್ದಾನೆ! ಆತನ ಸಹಚಾರಿಣಿ ಕೂಗುಮಾರಿ ಬೇಬಿಯಕ್ಕ ಯಾನೆ ಶೋಭಾ ಕರಂದ್ಲಾಜೆ ಗುರು ದೇವರಿಗೆ ಒದಗಿಬಂದಿರುವ ದುಸ್ಥಿತಿ ಕಂಡು ಸಹಿಸಲಾಗದೆ ಬಾಯಿ ಬೊಂಬಾಯಿ ಮಾಡಿಕೊಂಡು ನೆಗೆನೆಗೆದು ಬೀಳುತ್ತಿದ್ದಾರೆ. ಮತಾಂಧ ಭಾಷಣ ಪಾಷಾಣದಿಂದ ಕಲ್ಲಡ್ಕ-ಬಂಟ್ವಾಳ ಬದಿಯ ಬಿಲ್ಲವ-ಬಂಟ-ಗೌಡರೇ ಮುಂತಾದ ಶೂದ್ರ ಸಂಕುಲದ ಅಮಾಯಕ ಯುವಕ-ಯುವತಿಯರ ತಲೆ ತೊಳೆದು ತನ್ನ ವಾಣಿಜ್ಯೀಕೃತ ಜನಿವಾರ ಸಾಮ್ರಾಜ್ಯ ವಿಸ್ತರಣೆ ಮಾಡುತ್ತಿರುವ ಕಲ್ಲಡ್ಕ ಭಟ್ಟನ ಬೇಳೆ ಈ ಬಾರಿ ಬಂಟ್ವಾಳಕ್ಕೆ ಬಿದ್ದಿದ್ದ ಕೋಮು ಬೆಂಕಿಯಲ್ಲಿ ಬೇಯಲೇ ಇಲ್ಲ.


ಕಲ್ಲಡ್ಕದಲ್ಲಿ ಸಂಘ ಪರಿವಾರ ನಾಜೂಕಾಗಿ ಹೊತ್ತಿಸಿದ್ದ ಕಮ್ಯುನಲ್ ಕಿಚ್ಚನ್ನು ವ್ಯವಸ್ಥಿತವಾಗಿ ಇಡೀ ದಕ್ಷಿಣ ಕನ್ನಡಕ್ಕೆ, ಅಲ್ಲಿಂದ ಪಕ್ಕದ ಉಡುಪಿ ಜಿಲ್ಲೆಗೂ ಹಬ್ಬಿಸಿ ಮುಂಬರುವ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಭರ್ಜರಿ ಕೇಸರಿ ಕೊಯ್ಲು ನಡೆಸುವ ಯೋಜನೆ ಭಟ್ಟನ ಬಳಗದ್ದಾಗಿತ್ತು. ಆದರೆ ಸಿದ್ದು ಸರ್ಕಾರದ ಬಿಗಿ ಕಾನೂನುಕ್ರಮ ಮತ್ತು ಕರಾವಳಿಗರ ಪ್ರಜ್ಞಾವಂತಿಕೆಯಿಂದಾಗಿ ಭಟ್ಟ ಬಗೆದಂಥ ಭೀಕರ ಭಾನ್ಗಡಿಗಳು ಸಂಭವಿಸಲು ಆಸ್ಪದವೇ ಆಗಲಿಲ್ಲ. ಕರ್ಮಗೇಡಿ ಸಂಸದೆ ಶೋಭಕ್ಕಳಿಂದ ಸಾಕ್ಷಾತ್ ಸಿಎಂ ಸಿದ್ದು ಮತ್ತಾತನ ಕರಾವಳಿ ಮಂತ್ರಿಗಳಾದ ರಮಾನಾಥ ರೈ-ಖಾದರ್‌ಗಳೇ ಚಾಕು-ಚೂರಿ-ತಲವಾರು ಹಿಡಿದುಕೊಂಡು ಹಿಂದೂಗಳ ರುಂಡ ಚೆಂಡಾಡುತ್ತಿದ್ದಾರೆಂಬಂತ ಭಯಂಕರ ಪತ್ರ ಕೇಂದ್ರ ಗೃಹ ಇಲಾಖೆಗೆ ಬರೆಸಿದರೂ ಭಂಡ ಭಟ್ಟನಿಗೆ ನಿರೀಕ್ಷಿತ ಅನುಕೂಲವೇನೂ ಆಗಲಿಲ್ಲ. ಹೀಗಾಗಿ ಭಟ್ಟ ಈಗ ವರಸೆ ಬದಲಿಸಿ ಭಿಕ್ಷಾಂದೇಹಿ ನಾಟಕ ಶುರು ಹಚ್ಚಿಕೊಂಡಿದ್ದಾನೆ.


ದೇವರು-ಧರ್ಮದ ಸೋಗಲಾಡಿ ಸಬೂಬು ಹೇಳುತ್ತ ದುಡ್ಡು ಮಾಡುವ ಕುಕಲೆ ಕಲ್ಲಡ್ಕ ಭಟ್ಟ ಸಿದ್ಧಿಸಿಕೊಂಡಿದ್ದಾನೆ; ಸರ್ಕಾರಿ ಅನುದಾನ, ಸಾರ್ವಜನಿಕ ದೇಣಿಗೆ ಹೊಡೆಯುತ್ತ ತನ್ನ ಧರ್ಮೋದ್ಯಮ ಮತ್ತು ಶಿಕ್ಷಣೋದ್ಯಮ ಜಬರ್ದಸ್ತಾಗಿ ಸ್ಥಾಪಿಸಿಕೊಂಡಿದ್ದಾನೆ! ಗುಂ ಕಾಲದಲ್ಲಿ ಶಾಲೆಗೆಂದು ಈತ ಮಂಜೂರು ಮಾಡಿಸಿಕೊಂಡ ಜಾಗದಲ್ಲೀಗ ವಾಣಿಜ್ಯ ಮಳಿಗೆ, ತರಹೇವಾರಿ ಕಟ್ಟಡಗಳು ತಲೆ ಎತ್ತಿದೆ. ಕಲ್ಲಡ್ಕದಲ್ಲಿನ ಭಟ್ಟನ ಬೃಹತ್ ಬಿಲ್ಡಿಂಗ್ ಹಲವು ಕೋಟಿಗಳ ವಹೂನದು!! ಸಂತ ಸಮ್ಮೇಳನದ ಹೆಸರಲ್ಲಿ ಭಟ್ಟ ಸರಿಸುಮಾರು 50 ಕೋಟಿಯಷ್ಟು ಸಂಗ್ರಹಿಸಿದ್ದಾನೆಂಬ ಪ್ರತೀತಿ ಸಂಘ ಬಿಡಾರದಲ್ಲಿ ಬಿರುಸಾಗಿ ಮೊಳಗುತ್ತಲೇ ಇದೆ. ಈಗ ತಲೆ ಎತ್ತುತ್ತಿರುವ 'ರಾಮ ಮಂದಿರ' ಎಂಬ ಬಿಸ್ನೆಸ್ ಸೆಂಟರ್ ಮೌಲ್ಯ ನಾಲ್ಕೈದು ಕೋಟಿ ಎಂಬ ಅಂದಾಜು ನುರಿತ ಬಿಲ್ಡರ್‌ಗಳೇ ಹಾಕುತ್ತಿದ್ದಾರೆ!

ಭಟ್ಟನ ಧರ್ಮಕಾರಣದ ಕಾರ್ಯಾಚರಣೆಗಾಗಲೀ, ಕೇಸರೀಕೃತ ಶಿಕ್ಷಣ ವಹಿವಾಟಿನ ಚಟುವಟಿಕೆಗಾಗಲಿ ದುಡ್ಡಿನ ಕೊರತೆ ಬರಲು ಸಾಧ್ಯವೇ ಇಲ್ಲ. ಅಷ್ಟು ಯೋಜನಾಬದ್ಧವಾದ ಆರ್ಥಿಕ ಮೂಲದ ಒರತೆ ಆತ ಕಂಡುಕೊಂಡಿದ್ದಾನೆ. ಈತ ನಡೆಸುವ ಶ್ರೀರಾಮ ವಿದ್ಯಾಕೇಂದ್ರ, ಶ್ರೀದೇವಿ ವಿದ್ಯಾಕೇಂದ್ರಕ್ಕೆ ಹಿಂದೂತ್ವದ ಮನಸ್ಥಿತಿಯ ಹಣವಂತರು ದಂಡಿಯಾಗಿ ಕಣ್ಮುಚ್ಚಿ ರೊಕ್ಕ ಹರಿಸುತ್ತಿದ್ದಾರೆ. ಬಿಜೆಪಿಯ ಕರಾವಳಿ ಶಾಸಕರು ಭಟ್ಟನ ಶ್ರೀರಾಮ ಶಾಲೆಗೆ ಅನೂಚಾನವಾಗಿ ದೇಣಿಗೆ ಕೊಡಲೇಬೇಕು. ಇಲ್ಲದಿದ್ದರೆ ಕಾಫಿರ್ ಅನ್ನಿಸಿಕೊಳ್ಳುತ್ತಾರೆ. ಪುತ್ತೂರಿನ ಬಿಜೆಪಿ ಶಾಸಕಿಯಾಗಿದ್ದ (ಈಗಿನ ಕಾಂಗ್ರೆಸ್ ಶಾಸಕಿ- ಸರ್ಕಾರದ ಸಂಸದೀಯ ಕಾರ್ಯದರ್ಶಿಣಿ) ಶಕುಂತಲಾ ಶೆಟ್ಟಿ ಹಫ್ತಾ ಗೌರವಾದರದಿಂದ ಕೊಡಲಿಲ್ಲ ಎಂಬ ಕಾರಣಕ್ಕೆ ಕಲ್ಲಡ್ಕ ತಿರುಗಿಬಿದ್ದು ಕಾಡಿದ್ದು; ಆಕೆಯನ್ನು ಭಟ್ಟ ಅದ್ಯಾವ ಪರಿ ಸತಾಯಿಸಿದನೆಂದರೆ, ಶಕು ಅಕ್ಕ ತನ್ನ ರಕ್ತಗತ ಹಿಂದೂತ್ವ ಸಿದ್ಧಾಂತಕ್ಕೆ 'ಅಪಚಾರ' ಮಾಡಿ ಕಾಂಗ್ರೆಸ್ ಪಾಲಾಗುವಂತಾಯ್ತು. ಅಡ್ಡ ದಾರಿಯಲ್ಲಿ ದುಡ್ಡು ತನ್ನ ಚೆಡ್ಡಿ ಸಂಘ-ಸಂಸ್ಥೆಗಳಿಗೆ ಹರಿದುಬಂದರೂ ಸರ್ಕಾರಿ ಹಣಕ್ಕೆ ನಾಲಿಗೆಯೊಡ್ಡುವ ಚಟ ಭಟ್ಟನಿಗೆ ಹತ್ತಿಕೊಂಡಿದೆ.

ಕಲ್ಲಡ್ಕ ಭಟ್ಟ ತನ್ನ ಶಾಲೆಗಳಿಗೆ ಸರ್ಕಾರದ ಹಣ ಕೋಟಿ-ಕೋಟಿ ಪಡೆದಿರುವುದು ಸಂಘಿಗಳ ಗಂಟುಕಳ್ಳ ಅವತಾರ ಅನಾವರಣ ಮಾಡಿಬಿಟ್ಟಿದೆ! ಭಟ್ಟನ ಯಜಮಾನಿಕೆಯಲ್ಲಿ ನಡೆಯುತ್ತಿರುವ ಕಲ್ಲಡ್ಕದ ಶ್ರೀರಾಮ ಪೌಢಶಾಲೆ ಹಾಗು ಪುಣಚ ಶ್ರೀದೇವಿ ವಿದ್ಯಾಕೇಂದ್ರ ಹಿಂದೂತ್ವದ ಗರಡಿ ಮನೆಗಳೆಂದೇ ಸುಪ್ರಸಿದ್ಧವಾಗಿದೆ. ಸದ್ರಿ ಶಾಲೆಗಳಲ್ಲಿ ಚೆಡ್ಡಿ ಗಣವೇಷ ಹಾಕಿಕೊಂಡು ಲಾಠಿ ಬೀಸುವುದರಿಂದ ಹಿಡಿದು ಮುಸ್ಲಿಮ್-ಕ್ರಿಶ್ಚಿಯನ್ ಸಮುದಾಯವನ್ನು ಸುಖಾಸುಮ್ಮನೆ ದ್ವೇಷಿಸುವ ತನಕದ ಹಲವು ಅನಾಹುತಕಾರಿ ಆರ್‌ಎಸ್‌ಎಸ್ ಸಿದ್ಧಾಂತ ಮುಗ್ಧ ಮಕ್ಕಳ ತಲೆಯಲ್ಲಿ ತುಂಬಲಾಗುತ್ತಿದೆ. ಕಲ್ಲಡ್ಕ ಭಟ್ಟ ಸದ್ರಿ ಶಾಲೆಯಲ್ಲಿನ ಸರಿಸುಮಾರು ಮೂರು ಸಾವಿರ ಮಕ್ಕಳನ್ನು ತನ್ನ ಹಿಂದೂತ್ವದ ಹಿಡನ್ ಹಿಕಮತ್ತಿಗಾಗಿ ಬೀದಿಗಿಳಿಸಿದ ಅಕ್ರಮ-ಅನೈತಿಕ-ಧರ್ಮಬಾಹಿರ ಭಾನ್ಗಡಿಗಳು ನಡೆದದ್ದೂ ಇದೆ. ಈ ಶಾಲೆಯಲ್ಲಿ ವಿದ್ಯಾಭ್ಯಾಸಕ್ಕಿಂತ ಹೆಚ್ಚು ಮಹತ್ವ ವೈದಿಕವಾದಿಗಳ ಹಿಂದೂತ್ವದ ಹೋರಾಟಕ್ಕೆ ಶೂದ್ರ ಮಕ್ಕಳನ್ನು ಕಾಲಾಳುಗಳಾಗಿ ತಯಾರು ಮಾಡುವುದಕ್ಕೆ. ಈ ಎರಡೂ ಶಾಲೆಗಳು ಪಕ್ಕಾ ಸರ್ಕಾರಿ ಅನುದಾನಿತ ವಿದ್ಯಾಕೇಂದ್ರಗಳು. ಆದರೆ ಕಲಿಸುವುದು ಸಂವಿಧಾನ ಧರ್ಮಕ್ಕೆ ವಿರುದ್ಧವಾದ ನೀತಿ-ನಿಯಮ, ರೀತಿ-ರಿವಾಜು!

ಕಲ್ಲಡ್ಕ ಭಟ್ಟನ ಈ 'ಚೆಡ್ಡಿ ಶಾಖೆ'ಗಳು ಸರ್ಕಾರದ ಬಿಸಿಯೂಟ, ಸಮವಸ್ತ್ರ ವೈದ್ಯಕೀಯ ಸೌಲಭ್ಯ ಮುಂತಾದ ಸವಲತ್ತುಗಳಿಗೆ ಅರ್ಹತೆ ಹೊಂದಿದೆ. ಶಿಕ್ಷಕರಿಗೆ ಸಂಬಳ ಕೊಡುವುದು ಸರ್ಕಾರವೇ. ಆದರೆ ಬೂಟಾಟಿಕೆ ಭಟ್ಟ ತಾನು ಸರ್ಕಾರದ ಹಂಗಿಲ್ಲದೆ ಎರಡೆರಡು ಶಾಲೆ ನಡೆಸುತ್ತೇನೆಂದು ಒಣಪ್ರತಿಷ್ಠೆ ಪ್ರದರ್ಶಿಸುತ್ತಿದ್ದಾನೆ. ಸರ್ಕಾರದ ಸೌಲಭ್ಯ ತಿರಸ್ಕರಿಸಿ ಪತ್ರ ಗೀಚಿದ್ದೂ ಇದೆ. ಈ 'ಉದಾತ್ತತೆ' ಹಿಂದೆ ಎರಡು ಕರಾಮತ್ತುಗಳು ಅಡಗಿದೆ. ಒಂದು, ಸರ್ಕಾರಿ ಸೌಲತ್ತುಗಳಿಲ್ಲದೆ ಶಾಲೆ ನಡೆಸುವ ಹಿಂದೂ ಧೀರನೆಂಬ ಹೊಗಳಿಕೆ ಮುಗ್ಧ ಜನರಿಂದ ಪಡೆದು ಶಿಕ್ಷಣೋದ್ಯಮ ನಡೆಸೋದು. ಮತ್ತೊಂದು, ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ತನ್ನ ಶಾಲೆಗಳನ್ನು ದತ್ತು ಕೊಟ್ಟು ಅಗತ್ಯಕ್ಕಿಂತಲೂ ಹೆಚ್ಚು ಹಣ ಹೊಡೆಯೋದು. ಕುಮ್ಮಿ-ಯಡ್ಡಿ 'ಕೋಜಾ' ಸರ್ಕಾರ ಅಧಿಕಾರಕ್ಕೆ ಬಂದಾಗ ಭಟ್ಟ ಮಾಡಿಸಿಕೊಂಡ ಮೊದಲ ಸರ್ಕಾರಿ ಕೆಲಸವೆಂದರೆ, ಕೊಲ್ಲೂರು ಮೂಕಾಂಬಿಕಾ ದೇವಳದ ಹುಂಡಿಯಿಂದ ತನ್ನ ಶಾಲೆಯ ಮಕ್ಕಳ ಮಧ್ಯಾಹ್ನದ ಊಟ, ಸಮವಸ್ತ್ರ, ಪುಸ್ತಕ ಮತ್ತು ಔಷಧ ವೆಚ್ಚಕ್ಕೆಂದು ಲಕ್ಷಗಳ ಲೆಕ್ಕದಲ್ಲೇ ಅನುದಾನ ಪಡೆದದ್ದು!!


ಮಂತ್ರಿ ರಮಾನಾಥ ರೈ


ಸಿಎಂ

ಆಗ ಮುಜರಾಯಿ ಮಂತ್ರಿಯಾಗಿದ್ದಾತ, ಬೇರ್‍ಯಾರೂ ಅಲ್ಲ, ಕಲ್ಲಡ್ಕ ಭಟ್ಟನ ಧರ್ಮಕಾರಣದ ಕರ್ಮಕಾಂಡ ಬೆಟಾಲಿಯನ್‌ನ ಪಾಲಿಟಿಕಲ್ ಲೆಫ್ಟಿನೆಂಟ್ ಆಗಿದ್ದ ವಿ.ಎಸ್. ಆಚಾರ್ಯ! ಅಂದು ಈ ಇಬ್ಬರು ಉಗ್ರವಾದಿ ಚೆಡ್ಡಿಗಳು ಕರಾವಳಿ ಬಿಜೆಪಿಯ ಪ್ರಶ್ನಾತೀತ ನಾಯಕಾಗ್ರೇಸರಾಗಿದ್ದರು. ಆತ್ಮೀಯ ಮಿತ್ರ ಕಲ್ಲಡ್ಕ ಭಟ್ಟ ತಾನು ಮೂಕಾಂಬಿಕೆಯ ಭಂಡಾರಕ್ಕೆ ಕೈಹಾಕಿ ಒಂದಿಷ್ಟು ಕಾಸು ಪಡೆಯುತ್ತೇನೆಂದು ಹೇಳಿದಾಗ ನಾಜೂಕಯ್ಯನಂತಿದ್ದ ಡಾ. ವೇದವ್ಯಾಸ ಆಚಾರ್ಯರಿಗೆ 'ಇಲ್ಲ' ಎಂದು ಗೋಣಾಡಿಸುವುದು ... ಸಾಧ್ಯವಾದೀತು? ಆ ಸಂದರ್ಭದಲ್ಲಿ ಕೊ... ಮೂಕಾಂಬಿಕಾ ದೇವಸ್ಥಾನದ ಧರ್ಮದರ್ಶಿ ಮಂ... ಚೆಡ್ಡಿಗಳ ಕೈವಶವಾಗಿತ್ತು.

ಕಲ್ಲಡ್ಕ ಭಟ್ಟನೇ ಮುತುವರ್ಜಿ ವಹಿಸಿ ತನ್ನ ... ಗುಲಾಮ ಕೃಷ್ಣಪ್ರಸಾದ ಆಡ್ಯಂತಾಯನನ್ನು ಧ... ಮಂಡಳಿಯ ಅಧ್ಯಕ್ಷನಾಗಿ ಪ್ರತಿಷ್ಠಾಪಿಸಿದ್ದ. ಈ... ಹೇಳಿದಂತೆಲ್ಲ ಮೂಕಾಂಬಿಕೆಯ ಸಂಪತ್ತು ಮೊಗೆ-... ಯಾರ್‍ಯಾರಿಗೋ ಕೊಟ್ಟಿದ್ದಾನೆ. ಕಳಪೆ-ಸುಳ್ಳು ... ಹೆಸರಲ್ಲಿ ತಾನೂ ದುಂಡಗಾಗಿದ್ದಾನೆ. ಸಿಗಡಿ ಕೃ... ಕಳಕೊಂಡ ಕಾಸು ಈತ ದೇವಳದ ಹುಂಡಿಯಿಂ... ಮಾಡಿಕೊಂಡನೆಂಬ ಕತೆಗಳು ಈಗಲೂ ಕು... ಉಡುಪಿ, ಮಂಗಳೂರಿನ ಚೆಡ್ಡಿ ವಲಯದಲ್ಲಿ ಲಯ... ಬಿತ್ತರವಾಗುತ್ತಲೇ ಇದೆ. ತಿರಬೋಕಿಯಂತೆ ಕು... ಬಂದಿದ್ದ ಆಡ್ಯಂತಾಯ ಈಗ ರಿಯಲ್ ಎಸ್ಟೇಟ್... ಇದು ಕಲ್ಲಡ್ಕ ಭಟ್ಟ ಮೂಕಾಂಬಿಕಾ ದೇವಳದ... ಮಹಿಮೆ ಬಳಸಿ ಮಾಡಿದ ಜಾದೂ!!

ಕಲ್ಲಡ್ಕ ಭಟ್ಟ ಕಳೆದ ಹತ್ತು ವರ್ಷದಿಂದ ನಿರ... ಕೊಲ್ಲೂರು ದೇವಳದ ಹಣವನ್ನು ಅಕ್ರಮವಾ... ಎರಡು 'ಕೇಸರಿ ಪಾಠಶಾಲೆ'ಗಳಿಗೆ ನಿರಾತಂಕವಾಗಿ ... ಬಂದಿದ್ದಾನೆ. ಮುಜರಾಯಿ ಇಲಾಖೆ ಅಥವಾ... ಇಲಾಖೆಯ ನಿಯಮದಂತೆ ಖಾಸಗಿ ಶಾಲೆಗಳಿಗೆ ... ಹಣ ಅನುದಾನವಾಗಿ ಪಡೆಯಲು ಬರಲಾರದು... ನಿಯಮ ಬುದ್ಧಿಪೂರ್ವಕವಾಗೇ ಧಿಕ್ಕರಿಸಿ... ಆಚಾರ್ಯಪಾತಕ ಮಾಡಿತ್ತು, ಅದು ಸೋಕಾಲ್ಡ್ ... ಕಾಂಗ್ರೆಸಿಗರ ಸರ್ಕಾರದ ಅವಧಿಯಲ್ಲೂ ಮುಂದು... ಬಂಟ್ವಾಳದ ಶಾಸಕನೂ ಮಂತ್ರಿಯೂ ಆಗಿರುವ ರ...

▶▶5


ಶೋಭಾ ಕರಂದ್ಲಾಜೆ-ಜೋಳಿಗೆ ಹಿಡಿದು ಅಕ್ಕಿ ಬೇಡುತ್ತಿರುವುದು


ಭಟ್ಟನ ಶಾಲಾ ವಿದ್ಯಾರ್ಥಿಗಳ ಭಿಕ್ಷೆ ಬೇಡುವ ದೃಶ್ಯ....


ಚಿತ್ರದುರ್ಗ ಜಿ.ಪಂ: ನಾಟ್‌ರೀಚಬಲ್ ಸೌಭಾಗ್ಯಮ್ಮ ನಾಪತ್ತೆ!

ಚಿತ್ರದುರ್ಗ ಜಿಲ್ಲಾ ಪಂಚಾಯತಿ ಆವರಣದಲ್ಲಿ ಈಗ ಒಂದೇ ಪ್ರಶ್ನೆ. ಅಧ್ಯಕ್ಷೆ ಸೌಭಾಗ್ಯಳನ್ನು ಹೇಗೆ ಹುಡುಕೋದು? ಅನ್ನೋದು. ಸಾಮಾನ್ಯ ಜನರ ಮಾತು ಹಾಗಿರಲಿ ಸ್ವಂತ ಪಕ್ಷದ ಜಿಲ್ಲಾ ಪಂಚಾಯ್ತಿ ಸದಸ್ಯರು, ಪಾರ್ಟಿಯ ಶಾಸಕರು, ಕೊನೆಗೆ ಜಿಲ್ಲಾ ಉಸ್ತುವಾರಿ ಮಂತ್ರಿ ಆಂಜನೇಯ ಕೈಗೂ ಸಿಗದೆ ಸೌಭಾಗ್ಯ ಬಸವರಾಜನ್ ಕಣ್ಣಾಮುಚ್ಚಾಲೆ ಆಡುತ್ತಿರೋದು ಕೈ ಪಾಳೆಯದೊಳಗೆ ಗುದಿಯನ್ನು ತಂದಿಟ್ಟಿದೆ. ಇಷ್ಟಕ್ಕೆಲ್ಲ ಕಾರಣವಾಗಿರೋದು ಜಿಲ್ಲಾ ಪಂಚಾಯ್ತಿ ಅಧ್ಯಕ್ಷಗಾದಿ ಕುರ್ಚಿ!

ಹೊಸ ಪಂಚಾಯತ್ ಕಾಯ್ದೆ ಪ್ರಕಾರ ಒಮ್ಮೆ ಜಿಪಂ ಅಧ್ಯಕ್ಷರಾಗಿ ಆಯ್ಕೆಯಾದರೆ ಅವರ ಅಧಿಕಾರಾವಧಿ ಐದು ವರ್ಷಗಳ ಕಾಲ ಇರುತ್ತೆ. ಹಾಗಂತ ಒಬ್ಬರನ್ನೇ ಐದು ವರ್ಷ ಕೂರಿಸಿದರೆ ಉಳಿದ ಆಕಾಂಕ್ಷಿಗಳು ಸಿಟ್ಟಿಗೇಳಬಹುದು ಎಂಬ ಕಾರಣಕ್ಕೆ ರಾಜಕೀಯ ಪಾರ್ಟಿಗಳು ಆ ನಿಯಮಕ್ಕೆ ಒಂದು ಒಳದಾರಿ ಕಂಡುಕೊಂಡಿವೆ. ಅದರಂತೆ ಅಧ್ಯಕ್ಷಗಾದಿಯ ಆಕಾಂಕ್ಷಿಗಳ ಸಂಖ್ಯೆಗೆ ಅನುಗುಣವಾಗಿ ಐದು ವರ್ಷದ (60 ತಿಂಗಳು) ಅವಧಿಯನ್ನು ಹರಿದು ಹಂಚೋದೆ ಆ ಐಡಿಯಾ. ಚಿತ್ರದುರ್ಗ ಜಿಲ್ಲಾ ಪಂಚಾಯ್ತಿ ಎಲೆಕ್ಷನ್‌ನಲ್ಲಿ ಪ್ರಚಂಡ ಗೆಲುವು ಸಾಧಿಸಿದ್ದ ಕಾಂಗ್ರೆಸ್ ಕೂಡಾ ಇಂತದ್ದೇ ಸೂತ್ರವನ್ನು ಅಳವಡಿಸಿಕೊಂಡಿತ್ತು. ಅದರ ಪ್ರಕಾರ ಎಲ್ಲಾ ನಾಲ್ಕು ಆಕಾಂಕ್ಷಿಗಳ ನಡುವೆ ತಲಾ 15 ತಿಂಗಳಿಗೆ ಅಧಿಕಾರವನ್ನು ಹಂಚುವ ಗುಪ್ತ ಒಪ್ಪಂದವೇರ್ಪಟ್ಟಿತ್ತು.

ಮೊದಲ ಅವಧಿಗೆ ಅಧ್ಯಕ್ಷೆಯಾಗಿ ಕುರ್ಚಿಯಲ್ಲಿ ಕೂತದ್ದು ಪಕ್ಷಾಂತರಿ ರಾಜಕಾರಣದ ಡಾಕ್ಟರೇಟ್ ಪದವೀಧರೆ ಸೌಭಾಗ್ಯ ಬಸವರಾಜನ್. ಒಪ್ಪಂದದಂತೆ ಆಯಮ್ಮನ ಅಧಿಕಾರ ಇದೇ ಆಗಸ್ಟ್ 4ಕ್ಕೆ ಮುಕ್ತಾಯವಾಗಬೇಕಿತ್ತು, ಆಕೆ ರಾಜೀನಾಮೆ ಕೊಟ್ಟು ಬೇರೊಬ್ಬರಿಗೆ ಅಧಿಕಾರ ಬಿಟ್ಟುಕೊಡಬೇಕಿತ್ತು. ಆದರೆ ಕಾಯ್ದೆಯ ಐದು ವರ್ಷದ ನಿಯಮವನ್ನೇ ನೆಪವಾಗಿಟ್ಟುಕೊಂಡಿರುವ ಆಕೆ ಸುತಾರಾಂ ಅಧ್ಯಕ್ಷಗಾದಿ ಬಿಟ್ಟುಕೊಡಲ್ಲ ಅಂತ ತಕರಾರು ತೆಗೆದಿದ್ದಾಳೆ. ಅಲ್ಲದೇ ತನ್ನನ್ನು ನಿಯಮಬಾಹಿರವಾಗಿ ಕೆಳಗಿಳಿಸಬಾರದು ಅಂತ ಹೈಕೋರ್ಟ್‌ಗೆ ಅರ್ಜಿ ಗುಜರಾಯಿಸಿ ಕೂತಿದ್ದಾಳೆ. ಅದರ ವಿಚಾರಣೆ ನಡೆಯುತ್ತಿದ್ದು ಮಧ್ಯಂತರ ಆದೇಶ ಶೀಘ್ರದಲ್ಲೇ ಹೊರಬೀಳುವ ಸಾಧ್ಯತೆ ಇರೋದ್ರಿಂದ ಅಷ್ಟರೊಳಗೆ ಯಾರ ಕೈಗೂ ಸಿಗಬಾರದು ಅಂತ ತಲೆ ತಪ್ಪಿಸಿಕೊಂಡು ಓಡಾಡುತ್ತಿದ್ದಾಳೆ. ಫೋನ್‌ಗೆ ಪ್ರಯತ್ನಿಸಿ ದರೆ 'ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದಾರೆ' ಎಂಬ ಸಿದ್ಧ ಉತ್ತರ ಸಿಕ್ಕುತ್ತದೆ.

ಹಾಗೆ ನೋಡಿದರೆ, ಸೌಭಾಗ್ಯಳನ್ನು ಮೊದಲ ಅವಧಿಗೆ ಅಧ್ಯಕ್ಷಗಾದಿಯಲ್ಲಿ ಕೂರಿಸಲು ಕಾಂಗ್ರೆಸ್ ಶಾಸಕರಾದ ರಘುಮೂರ್ತಿ, ಗೋವಿಂದಪ್ಪ, ಸುಧಾಕರ್ ಇವರ್‍ಯಾರಿಗೂ ಇಷ್ಟವಿರಲಿಲ್ಲ. ಇವರಿಗೆ ತಮ್ಮದೇ ಆದ ಕ್ಯಾಂಡಿಡೇಟುಗಳಿದ್ದರು. ಅಧ್ಯಕ್ಷಗಾದಿಗೆ ಚಳ್ಳಕೆರೆ ಶಾಸಕ ರಘುಮೂರ್ತಿ ಕೌಸಲ್ಯ ತಿಪ್ಪೇಸ್ವಾಮಿಯನ್ನು ಬೆಂಬಲಿಸಿದರೆ, ಹೊಸದುರ್ಗ ಶಾಸಕ ಗೋವಿಂದಪ್ಪ ವಿಶಾಲಾಕ್ಷಿ ನಟರಾಜನ್ ಹೆಸರು ಶಿಫಾರಸ್ಸು ಮಾಡಿದ್ದರು. ಇನ್ನು ಹಿರಿಯೂರು ಶಾಸಕ ಸುಧಾಕರ, ಸುರೇಶ್ ಬಾಬುವನ್ನು ಅಧ್ಯಕ್ಷನನ್ನಾಗಿಸಲು ಒಲವು ಹೊಂದಿದ್ದರು. ಇದಕ್ಕಿಂತಲೂ ಮುಖ್ಯವಾಗಿ ಈ ಮೂವರು ಶಾಸಕರು ಸೌಭಾಗ್ಯಳನ್ನು ವಿರೋಧಿಸುವುದಕ್ಕೆ ಇನ್ನೂ ಒಂದು ಕಾರಣವಿತ್ತು, ಅದೇನೆಂದರೆ, ಈಕೆ 2000ರಲ್ಲಿ ಇದೇ ಕಾಂಗ್ರೆಸ್‌ನಿಂದ ಜಿಲ್ಲಾ ಪಂಚಾಯತ್ ಅಧ್ಯಕ್ಷೆಯಾಗಿ ಅಧಿಕಾರದ ರುಚಿ ನೋಡಿದ್ದಳು. ಆಗಲೂ ಸಹ ಇಂತಿಷ್ಟು ತಿಂಗಳ ನಂತರ ಬೇರೆಯವರಿಗೆ ಅಧಿಕಾರ ಬಿಟ್ಟುಕೊಡಬೇಕು ಎಂಬ ಒಪ್ಪಂದವಾಗಿತ್ತು, ಆದರೆ ತನ್ನ ಅವಧಿ ಮುಗಿದ ಬಳಿಕ ರಾಜೀನಾಮೆ ಕೊಡದೆ ಪಕ್ಷವನ್ನು ವಿಪರೀತ ಸತಾಯಿಸಿದ್ದಳು.









ಅಷ್ಟಲ್ಲದೇ ತನ್ನ ಅಧಿಕಾರ ಮುಗಿದಬಳಿಕ ಗಂಡ ಬಸವರಾಜನ್‌ನ ಜೊತೆಗೂಡಿ ಕಾಂಗ್ರೆಸ್ ಪಕ್ಷಕ್ಕೇ ಗುಡ್‌ಬೈ ಹೇಳಿ ಜೆಡಿಎಸ್ ಸೇರಿಕೊಂಡು ರಾಜಕಾರಣ ಮಾಡಿದ್ದಳು. ಚಿತ್ರದುರ್ಗ ಅಸೆಂಬ್ಲಿಯ ಜೆಡಿಎಸ್ ಅಭ್ಯರ್ಥಿಯಾಗಿದ್ದ ಗಂಡ ಬಸವರಾಜನ್‌ನನ್ನು ಗೆಲ್ಲಿಸಲು ತಾನು ಅಧಿಕಾರ ಅನುಭವಿಸಿ ಬಂದಿದ್ದ ಕಾಂಗ್ರೆಸ್ ವಿರುದ್ಧವೇ ಯುದ್ಧ ಸಾರಿದ್ದಳು. ಯಾವಾಗ ಸಾಲುಸಾಲು ಸೋಲುಗಳು ಹೈರಾಣಾಗಿಸಿ, ಮುರುಘಾ ಮಠವನ್ನು ಮುಂಡಾಯಿಸಿ ಗಂಡ ಸಂಪಾದಿಸಿದ್ದ ಆಸ್ತಿಯೆಲ್ಲ ಕರಗಲು ಶುರು ಮಾಡಿತೊ ಆಗ ಹಳೇ ಗಂಡನ ಪಾದವೇ ಗತಿಯೆಂಬಂತೆ ಕಾಂಗ್ರೆಸ್ ಬಾಗಿಲನ್ನು ಎಡತಾಕಿದ್ದಳು.

ಅದು 2014ರ ಲೋಕಸಭಾ ಎಲೆಕ್ಷನ್ ಸಮಯ. ಮಾಜಿ ಶಾಸಕ ಮತ್ತವನ ಹೆಂಡತಿ ಮಾಜಿ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಪಕ್ಷ ಸೇರುತ್ತೇನೆ ಅಂತ ಬಂದಾಗ ಇಲ್ಲ ಅಂತ ಹೇಳಿ ಕಳಿಸಲು ಜಿಲ್ಲಾ ಉಸ್ತುವಾರಿ ಮಂತ್ರಿ ಆಂಜನೇಯರ ಮನಸ್ಸು ಒಪ್ಪಲಿಲ್ಲ. ಪಕ್ಷಕ್ಕೆ ಲಾಭ ಆಗುವುದಾದರೆ ಆಗಲಿಬಿಡಿ ಅಂತ ಕಿಲಾಡಿಜೋಡಿಯನ್ನು ಪಕ್ಷಕ್ಕೆ ಮತ್ತೆ ಬರಮಾಡಿಕೊಂಡರು. ಹಾಗೆ ಬರುವಾಗ ಮುಂಬರುವ ಝಡ್‌ಪಿ ಎಲೆಕ್ಷನ್‌ನಲ್ಲಿ ಟಿಕೆಟ್ ಕೊಡಬೇಕು, ಗೆದ್ದರೆ ಅಧ್ಯಕ್ಷೆ ಮಾಡಬೇಕು, 2018ರಲ್ಲಿ ಚಿತ್ರದುರ್ಗ ಕ್ಷೇತ್ರದಿಂದ ಟಿಕೆಟ್ ಕೊಡಬೇಕು ಎಂಬೆಲ್ಲ ಬೇಡಿಕೆ ಇಟ್ಟೇ ಬಂದಿದ್ದರು. ಲೋಕಸಭಾ ಕದನ ಗೆಲ್ಲಬೇಕೆಂಬ ಜರೂರಿನಲ್ಲಿದ್ದ ಮಂತ್ರಿ ಸಾಹೇಬರೂ ಅದಕ್ಕೆಲ್ಲ ತಲೆದೂಗಿದ್ದರು.

ಹಾಗಾಗಿಯೇ ಮೂವರು ಸ್ಥಳೀಯ ಶಾಸಕರ ವಿರೋಧ ಇದ್ದಾಗ್ಯೂ ಸೌಭಾಗ್ಯ ಬಸವರಾಜನ್ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆಯಾಗಿ ಅಧಿಕಾರ ಚಲಾಯಿಸಲು ಸಾಧ್ಯವಾದದ್ದು. ಆದರೆ ಈಗ ಮತ್ತದೇ ಹಳೇ ಚಾಳಿ ಮುಂದುವರೆಸಿ ಅಧಿಕಾರ ಬಿಟ್ಟುಕೊಡಲು ಪಕ್ಷವನ್ನು ಸಿಕ್ಕಾಪಟ್ಟೆ ಸತಾಯಿಸಲು ಶುರು ಮಾಡಿದ್ದಾಳೆ. ಎಷ್ಟರಮಟ್ಟಿಗೆ ಎಂದರೆ, ಯಾವ ಆಂಜನೇಯರು ಆಕೆಯನ್ನು ಪಕ್ಷಕ್ಕೆ ಸ್ವಾಗತಿಸಿದ್ದರೋ ಅವರೇ ಇದೀಗ ಆಕೆಯ ವಿರುದ್ಧ ಸಿಟ್ಟಿಗೆದ್ದಿದ್ದಾರೆ. ಕಾಲದ್ದಕ್ಕೆ ಶತಾಯುಗತಾಯ ಅವಳನ್ನು ಹಿಡಿದು, ಮನವೊಲಿಸಿ ರಾಜೀನಾಮೆ ಪಡೆದುಕೊಂಡು ಬನ್ನಿ ಅಂತ ಪ್ರಕಾಶಮೂರ್ತಿ, ನಾಗೇಂದ್ರನಾಯ್ಕ ಮತ್ತು ಎಮ್ಮೇಹಟ್ಟಿ ಕೃಷ್ಣ ಎಂಬ ಮೂವರು ಸ್ಥಾಯಿ ಸಮಿತಿ ಸದಸ್ಯರ ಹೆಗಲಿಗೆ ಗುತ್ತಿಗೆ ಕೊಟ್ಟು ಕಳಿಸಿದ್ದಾರೆ. ಆಕೆ ಅವರಿಗೂ ಸಿಗುತ್ತಿಲ್ಲ. ಆಫೀಸ್‌ನ ಹೊರಗಡೆ ಸೌಭಾಗ್ಯಳ ಗೂಟದ ಕಾರು ನಿಂತಿದ್ದರೂ ಒಳಗೆ ಆಕೆಯ ಅಡ್ರೆಸ್ಸೇ ಇರೋಲ್ಲ. ಸದಸ್ಯರ್‍ಯಾರೂ ಇರದ ಸಂದರ್ಭ ನೋಡಿ ಕಚೇರಿಗೆ ಹೋಗಿ ಮಾಡಬೇಕಾದ ಕಡತಗಳಿಗೆ ಸಹಿ ಮಾಡಿ ಅವಸರದಲ್ಲೇ ಅಲ್ಲಿಂದ ಜಾಗ ಖಾಲಿ ಮಾಡುತ್ತಿದ್ದಾಳೆ. ಇನ್ನು ಕೆ.ಡಿ.ಪಿ. ಮೀಟಿಂಗು ನಡೆಯುವಾಗ ಅರ್ಧಕ್ಕೆ ಎದ್ದೋಗಿ ನಾಪತ್ತೆಯಾಗುತ್ತಿದ್ದಾಳೆ.

ಇತ್ತ ಆಕೆಯ ಗಂಡ ಬಸವರಾಜನ್ ಹೆಂಡತಿಯ ಕಣ್ಣಾಮುಚ್ಚಾಲೆ ಆಟಕ್ಕೂ, ತನಗೂ ಸಂಬಂಧವೇ ಇಲ್ಲವೆನ್ನುವಂತೆ ಮುಗುಮ್ಮಾಗಿದ್ದಾನೆ. ಈ ಮೊದಲು ಆಕೆಯನ್ನೇ ಚಿತ್ರದುರ್ಗ ಅಸೆಂಬ್ಲಿಯಿಂದ ಕೈ ಅಭ್ಯರ್ಥಿಯನ್ನಾಗಿಸಬೇಕು ಎನ್ನುವ ಮಾತುಗಳು ಕೇಳಿಬಂದಿದ್ದವು. ಅಂತಹ ಒಪ್ಪಂದವೂ ಆಗಿದೆ ಎನ್ನಲಾಗಿತ್ತು. ಆದರೆ ಜಿಪಂ ಅಧ್ಯಕ್ಷೆಯಾದ ನಂತರ ಆಕೆಯ ಕಾರ್ಯವೈಖರಿಯಿಂದ ಸೌಭಾಗ್ಯಳ ವರ್ಚಸ್ಸು ಕುಸಿದುಹೋಗಿದೆ. ಹಾಗಾಗಿ ಬಿಜೆಪಿಯ ತಿಪ್ಪಾರೆಡ್ಡಿಯ ವಿರುದ್ಧ ಸ್ಪರ್ಧಿಸಲು ಆಕೆಯ ಗಂಡ ಬಸವರಾಜನ್ ತಯಾರಾಗುತ್ತಿದ್ದಾನೆ ಎಂಬ ಮಾತು ಕೇಳಿಬರುತ್ತಿದೆ.

ಒಟ್ಟಿನಲ್ಲಿ ಚಿತ್ರದುರ್ಗದ ಕಾಂಗ್ರೆಸ್ ಪರಿಸ್ಥಿತಿ ಹಗಲು ಕಂಡ ಬಾವಿಗೆ ರಾತ್ರಿ ಬಿದ್ದಂತಾಗಿದೆ. ತಮ್ಮ ಬೆಂಬಲಿಗರಿಗೆ ಸ್ವಲ್ಪ ದಿನದ ಮಟ್ಟಿಗಾದರು ಅಧಿಕಾರ ಕೊಡಿಸಿ ಮುಂಬರುವ ಎಲೆಕ್ಷನ್‌ನಲ್ಲಿ ತಮ್ಮತಮ್ಮ ಕ್ಷೇತ್ರದಲ್ಲಿ ಜಾತಿ ಲಾಭದ ಕೆಮಿಸ್ಟ್ರಿ ವರ್ಕೌಟ್ ಮಾಡಿಕೊಳ್ಳಬೇಕು ಅಂತ ಲೆಕ್ಕಹಾಕಿದ್ದ ಶಾಸಕರು ಕೈಕೈ ಹಿಸುಕಿಕೊಳ್ಳುವಂತಾಗಿದೆ. ಇತ್ತ ಆರಂಭದಲ್ಲಿ ಸೌಭಾಗ್ಯಳ ಪರ ವಿಪರೀತ ವಕಾಲತ್ತು ವಹಿಸುತ್ತಿದ್ದ ಆಂಜನೇಯರ ಪಾಲಿಗೆ ಆಕೆ ನುಂಗಲಾರದ ಬಿಸಿ ತುಪ್ಪದಂತಾಗಿದ್ದಾಳೆ.

■ಟಿ.ಎನ್. ಷಣ್ಮುಖ

---

04 ◄◄

ಇವೆಲ್ಲ ಕಂಡೂಕಾಣದಂತಿದ್ದರು. ಭಟ್ಟನ ಕೆಣಕಿದರೆ ಕೋಮುಗಳು ತಿರುಗಿಬಿದ್ದಾರೆಂಬ ಆತಂಕದಿಂದ ರೈ ಹಾಗೇ ಸುಮ್ಮನೆ ಇದ್ದರು. ಆದರೆ ಈಚೆಗೆ ಕಲ್ಲಡ್ಕ ಬಂಟ್ವಾಳದಲ್ಲಿ ನಡೆದ ಕೋಮುಗಲಭೆ ಹೊತ್ತಲ್ಲಿ ಚಡ್ಡಿ ಪಡೆಯ ಕಲ್ಲಡ್ಕ ಭಟ್ಟ, ಸೋಭಕ್ಕ, ಕುಟೀಲು ನಳಿನ್, ಯಡ್ಡಿ.... ವಗೈರೆಗಳು ಮಂತ್ರಿ ರೈ ಬುಡಕ್ಕೇ ಬತ್ತಿಯಿಟ್ಟಿದ್ದರು. ಇದು ಭಟ್ಟನ ಶಿಕ್ಷಣೋದ್ಯಮದ ಗ್ರಹಚಾರ ಕೆಡಿಸಿಬಿಟ್ಟಿತು!!

ಈಗ ಸರ್ಕಾರದ ಮುಜರಾಯಿ ಇಲಾಖೆ ಭಟ್ಟನ ಎರಡು ಖಾಸಗಿ ಶಾಲೆಗಳ ದತ್ತು ಸ್ವೀಕಾರವನ್ನು ಹಿಂಪಡೆದು ಆದೇಶ ಹೊರಡಿಸಿದೆ. ಮುಜರಾಯಿ ಇಲಾಖೆಯ ಅಧೀನ ಕಾರ್ಯದರ್ಶಿ ನಾಗರತ್ನಮ್ಮ- "ದೇವಸ್ಥಾನದ ಹಣ ಶಾಲೆಗೆ ವ್ಯಯಿಸುವಂತಿಲ್ಲ" ಎಂಬ ಷರಾಬರೊಂದಿಗೆ ಬೇಕಾಬಿಟ್ಟಿ ಅನುದಾನ ನೀಡಿಕೆ ನಿಲ್ಲಿಸಿದ್ದಾರೆ. ಶ್ರೀರಾಮ ಶಾಲೆಗೆ ಬರೋಬ್ಬರಿ 2.32 ಕೋಟಿ ಮತ್ತು ಶ್ರೀದೇವಿ ಶಾಲೆಗೆ 50.72 ಲಕ್ಷ ರೂಪಾಯಿ ಕೊಲ್ಲೂರು ದೇವಳದ ಹುಂಡಿಯಿಂದ ಈವರೆಗೆ ಸಂದಾಯವಾಗಿದೆ. ಇದರಲ್ಲಿ ಕಲ್ಲಡ್ಕ ಬರೀ ರಾಮನ ಲೆಕ್ಕವಷ್ಟೇ ತೋರಿಸಿಲ್ಲ; ಕೃಷ್ಣ ಲೆಕ್ಕ ಕರಾರುವಾಕ್ಕಾಗಿ ಬರೆದಿದ್ದಾನೆ. ಯಾವಾಗ ಸಿದ್ದು ಸರ್ಕಾರ ಸರಿಯಾದ ಕ್ರಮ ಕೈಗೊಂಡಿತೋ ಆಗ ಮೊದಲು ಉರಿದು ಬಿದ್ದಿದ್ದು ಸಂಸದೆ ಕುಂದಾಪುರ ಶೋಭಕ್ಕ! ಕಲ್ಲಡ್ಕದ ಕೋಮು ಗಲಭೆಯನ್ನು ಮರೆಮಾಡಿಕೊಂಡು ರುದ್ರಭೀಕರ ಬೀದಿ ನಾಟಕ ಮಾಡಿದ್ದ ಸೋಭಕ್ಕ ಚಡ್ಡಿ ದೊರೆಯನ್ನು ಸಂಪ್ರೀತಗೊಳಿಸುವ ಎರಡನೇ ಹಂತದ ಆಟ ಆರಂಭಿಸಿದ್ದಾರೆ.

ಬಂಟ್ವಾಳದ ಸರಣಿ ರಕ್ತಪಾತ, ದೊಂಬಿಗಳ ಹೊತ್ತಲ್ಲಿ ಬಂಟ್ವಾಳ-ಮಂಗಳೂರಿಗೆ ಮೇಲಿಂದ ಮೇಲೆ ವಕ್ಕರಿಸಿದ್ದ ಸೋಭಕ್ಕ "ದಕ್ಷಿಣ ಕನ್ನಡಿಗರು ಷಂಡರಾ...?" ಎಂದು ಪುರುಷತ್ವ ಪ್ರದರ್ಶನ ಮಾಡಿದ್ದರು! ಈಗ ಭಟ್ಟರ ಶಾಲೆಯ ಮಕ್ಕಳಿಗಾಗಿ ಬೀದಿಯಲ್ಲಿ ಜೋಳಿಗೆ ಹಾಕಿಕೊಂಡು ಅಕ್ಕಿ-ಹಣ ಬೇಡುತ್ತಿದ್ದಾರೆ. ಹೇಗಾದರೂ ಮಾಡಿ ಅಸೆಂಬ್ಲಿ ಟಿಕೆಟ್ ಕಮಿಟಿಯ ಯಕ್ಷಿಣಿಗಾರ ಕಲ್ಲಡ್ಕ ಭಟ್ಟನ ಒಲಿಸಿಕೊಳ್ಳಬೇಕೆಂಬ ಹಠಕ್ಕೆ ಬಿದ್ದಿರುವ ಸೋಭಕ್ಕ "ಭಿಕ್ಷಾಂದೇಹಿ... ಭಿಕ್ಷಾಂದೇಹಿ... ಭಿಕ್ಷಾಂದೇಹಿ...." ಎನ್ನುತ್ತ ಮಂಗಳೂರಿನ ಗಲ್ಲಿ-ಗಟಾರದಲ್ಲಿ ಅಲೆಯುತ್ತಿರುವುದು ಮೋಜಾಗಿದೆ. ತನ್ನ ಸೇವೆಗೆ ಚಡ್ಡಿ ದೇವರು ಒಲಿದು ಪುತ್ತೂರಿನ ಅಸೆಂಬ್ಲಿ ಟಿಕೆಟ್ ದಯಪಾಲಿಸುತ್ತಾನೆಂಬ ಒಳ ಆಸೆ ಸೋಭಕ್ಕನನ್ನು ಬಫೂನ್‌ಳಂತೆ ಕುಣಿಸುತ್ತಿರುವುದೇ ಕರಾವಳಿಗರಿಗೆ ತಮಾಷೆಯಾಗಿ ಕಾಣಿಸುತ್ತಿದೆ.

ಬೇಬಿಯಕ್ಕ ಬೀದಿಯಲ್ಲಿ ಮುಷ್ಠಿ ಅಕ್ಕಿಗಾಗಿ ಸೆರಗೊಡ್ಡುತ್ತಿದ್ದರೆ, ಅತ್ತ ಮುಂಬೈನ ಬಂಟರ ಭೂಪರಿಬ್ಬರು ಸಾಮಾಜಿಕ ಜಾಲತಾಣ ಬಳಸಿಕೊಂಡು ಕಲ್ಲಡ್ಕ ಭಟ್ಟನೆಂಬ ಅಪಾತ್ರನಿಗಾಗಿ ಸಾರ್ವಜನಿಕವಾಗಿ ದಾನ ಕೇಳುತ್ತಿದ್ದಾರೆ. ಈಗಾಗಲೇ ಲಕ್ಷಾಂತರ ಹಣ, ಟನ್‌ಗಟ್ಟಲೆ ಅಕ್ಕಿ ಭಟ್ಟನ ಶಾಲೆಗೆಂದು ಸಂಗ್ರಹಿಸಿರುವ ಈ ಶೂದ್ರರಿಗೆ ಆತನ ಧಗಾ-ದಗಲುಬಾಜಿ-ಹಿಂದುಳಿದವರ ಬಗೆಗಿನ ಅಸಡ್ಡೆ ಅರ್ಥವೇ ಆಗುತ್ತಿಲ್ಲ. ಸಂಘ ಸರದಾರ ಭಟ್ಟನ ಖಾಸಗಿ ಶಾಲೆಗೆ ಹಣ ಒಟ್ಟು ಮಾಡಿಸಿಕೊಟ್ಟರೆ ಮುಂದೊಂದು ದಿನ ಬಿಜೆಪಿಯಿಂದ ಅಧಿಕಾರದ ತೆವಲು ತೀರಿಸಿಕೊಳ್ಳಬಹುದೆಂಬ ದೂ(ದು)ರಾಲೋಚನೆ ಈ ಬಂಟರ ಭಂಡರು ಹಾಕಿದ್ದಾರೆಂಬ ತರ್ಕವೂ ಇದೆ! ಇದೆಲ್ಲಕ್ಕಿಂತಲೂ ಘೋರ ದುರಂತವೆಂದರೆ, ಸಾಕ್ಷಾತ್ ಕಲ್ಲಡ್ಕ ಭಟ್ಟ ಮಾಡಿರುವ ನೀಚಾತಿನೀಚ ಭಿಕ್ಷಾಟನೆ ಪ್ರಹಸನ!!


ಖಾಲಿ ತಟ್ಟೆ ತನ್ನ ಶಾಲೆಯ ಮಕ್ಕಳ ಕೈಗೆ ಕೊಟ್ಟು ಬಂಟ್ವಾಳದ ಬೀದಿಯಲ್ಲಿ ಭಿಕ್ಷೆ ಬೇಡಲು ಭಟ್ಟ ಕಳಿಸಿದ್ದಾನೆ! ಕಾಂಗ್ರೆಸ್ ಸರ್ಕಾರದ ವಿರುದ್ಧ, ಮಂತ್ರಿ ರೈ ವಿರುದ್ಧ ಭಾಷಣ ವಿದ್ಯಾರ್ಥಿಗಳಿಗೆ ಬರೆದುಕೊಟ್ಟು ಉರುಹೊಡೆಸಿ ಹೇಳಿಸಿದ್ದಾನೆ. ಪ್ರತಿಭಟನಾ ಸಭೆ-ಮಾಧ್ಯಮದವರ ಎದುರು ಭಟ್ಟನ ಮೋಸ-ವಂಚನೆ-ಬೂಟಾಟಿಕೆ ಗೊತ್ತಿಲ್ಲದ ಪಾಪದ ವಿದ್ಯಾರ್ಥಿಗಳು ಸರ್ಕಾರ ತಮ್ಮ ತುತ್ತು ಕಸಿದುಕೊಂಡಿದೆ ಎಂಬಂತೆ ಕರುಣಾಜನಕವಾಗಿ ಭಾಷಣ ಮಾಡಿವೆ! ಆದರೆ ವಾಸ್ತವವೇ ಬೇರೆ. ಕಲ್ಲಡ್ಕ ಭಟ್ಟ, ಸೋಭಕ್ಕನಂತ ಸಂಘಿಗಳ ಒಣಪ್ರತಿಷ್ಠೆ, ಹಿಂದುತ್ವ ಹಿಕಮತ್ತಿನಿಂದಾಗಿಯೇ ವಿದ್ಯಾರ್ಥಿಗಳು ಉಪವಾಸ ಬೀಳುವಂತಾಗಿದೆಯೇ ಹೊರತು ಸಿದ್ದು ಸರ್ಕಾರ ಅನ್ಯಾಯವೇನೂ ಮಾಡಿಲ್ಲ.

ಈ ಎರಡೂ ಶಾಲೆಗಳು ಇವತ್ತಿಗೂ ಸರ್ಕಾರದ ಬಿಸಿ ಊಟದ ಯೋಜನೆ ಪಡೆಯಬಹುದಾಗಿದೆ. ಇತರ ಅನುದಾನಿತ ಹೈಸ್ಕೂಲು-ಶಾಲೆಗಳಿಗೆ ಇರುವ ಸೌಲಭ್ಯ-ಸೌಕರ್ಯ ಪಡೆವ ಹಕ್ಕು ಕಲ್ಲಡ್ಕ ಮತ್ತು ಪುಣಚದ ಹಿಂದೂತ್ವದ ಟ್ರೇಡ್‌ಮಾರ್ಕ್ ಶಾಲೆಗಳಿಗೂ ಇದೆ. ಹಾಗಾಗಿ ಸೋಭಕ್ಕ-ಕಲ್ಲಡ್ಕ ಭಟ್ಟ ತಮ್ಮ ವಿದ್ಯಾರ್ಥಿಗಳು ಉಪವಾಸ-ವನವಾಸ ಬಿದ್ದಿದ್ದಾರೆಂದು ಬೊಬ್ಬಿರಿಯುವುದೇ ವ್ಯರ್ಥ ಕಸರತ್ತು; ಸಾರ್ವಜನಿಕ ಸಿಂಪಥಿ ಪಡೆದು ಸರ್ಕಾರದ ಹೆಸರು ಕೆಡಿಸಿ ಧರ್ಮಕಾರಣದ ಲಾಭ ಗಿಟ್ಟಿಸುವ ಹುನ್ನಾರವಷ್ಟೇ!!

ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯೆ ಕೊಡುವೆನೆಂದು ಹಿಂದೂತ್ವದ ಪುಂಡಾಟ ಕಲಿಸುವ, ಅನ್ನ ಕೊಡುವೆನೆಂದು ಹೇಳಿ ಭಿಕ್ಷೆ ಎತ್ತಲು ಕಳಿಸುವ ಚಡ್ಡಿ ಚಾಂಡಾಲ ಕಲ್ಲಡ್ಕ ಭಟ್ಟನ ಭಂಡಾಟಕ್ಕೆ ಕೊನೆಯುಂಟಾ? ಭಟ್ಟನೇಕೆ ಖಾಲಿ ತಟ್ಟೆ ಹಿಡಿದುಕೊಂಡು ಭಿಕ್ಷಾಟನೆ ಮಾಡುವುದಿಲ್ಲ? ನಿಷೇಧಾಜ್ಞೆ ಉಲ್ಲಂಘಿಸಿ ಬಿಜೆಪಿ ಸಂಸದರು, ಶಾಸಕರು ಅರೆಸ್ಟಾದರೂ ಭಟ್ಟನೇಕೆ ಪಲಾಯನ ಮಾಡುತ್ತಾನೆ? ಕಂಡವರ ಮಕ್ಕಳ ಬಾವಿಗೆ ನೂಕಿ ಆಳ-ಅಗಲ ಲೆಕ್ಕ ಹಾಕುವ ಕ್ರಿಮಿನಲ್ ಕಲ್ಲಡ್ಕ ಭಟ್ಟನಿಗೆ ಬುದ್ಧಿ ಕಲಿಸಲು ಕರಾವಳಿಗರು ರೆಡಿಯಾಗೋದು ಯಾವಾಗ?

■ವರದಿಗಾರ

ಕುವೆಂಪು ಕವುನನೆ ಹೋಯ್ತಾ ಅದೆ ಗೊತ್ತೆ!



"ಅಂತೂ ಮಳಿಯೇನೋ ಹುಯ್ತು, ಹುತ್ತು ಬಿತ್ನೆ ಮಾದಕ್ಕೆ ದನಗಳೇ ಇಲವಲ್ಲ ಹೇಳು" ಎಂದ ಕಾಳಮಾವ.

"ದನಿಲ್ದೆಯಿದ್ರುವೆ ಟ್ರ್ಯಾಗುಟ್ರಿಗಳು ಹಗಲುರಾತ್ರಿ ಉಳುತಾ ಅವೆ ತಗೊ" ಎಂದ ಸೀರ.

"ಯಂಗೆ ಮಾಡ್ತವುನೆ ರೇಟಾ?"

"ಒಂದು ಗಂಟಗೆ ಆರುನೂರುಪಾಯಿ ಕಣ ಮಾವ" ಎಂದ ಉಗ್ರಿ.

"ಬಿತ್ನೆ ಮಾದಕ್ಕೇನೋ ಟ್ರ್ಯಾಗುಟ್ರಿ. ಆದ್ರೆ ಅರ್ಥೆ ವಡಿಯಕ್ಕೆ, ಕುಂಟೆ ವಡಿಯಕ್ಕೆ ದನಬೇಕಲವೆ? ಅದಂಗೆ ಮಾಡ್ತರೂ."

"ಅದೇನಂತ ಕಷ್ಟದ ಕ್ಯಲಸಲ್ಲ, ದನ ಇರೋರ ಮನಿಂದ ಹಿಡಕಂಡು ಬಂದ್ರೆ ಒಂದೇ ದಿನಕ್ಕೆ ಅರ್ಥೆ ಕ್ಯರಕಬವುದು. ಆದ್ರು ನಿನ್ನ ಕಾಲದ ಬ್ಯಾಸಾಯ ಹೋಯ್ತು ಕಣಮಾವ" ಎಂದ ಉಗ್ರಿ.

"ಯಲ್ಲ ಹೋಯ್ತು ಬುಡು. ದನಗಳ ಜಾಗಕ್ಕೆ ಟ್ರ್ಯಾಗುಟ್ರಿ ಬಂದಾಗ್ಲೆ ಸಗಣಿ, ಗಂಜಲ, ಗ್ವಬ್ಬರ, ಒಟ್ಟು ಬ್ಯಾಸಾಯವೆ ಯಕ್ಕುಟ್ಟಿ ಹೋಯ್ತು" ಎಂದು ಕಾಳಮಾವ ಹೇಳುವಾಗ ಕಾಣಿಸಿಕೊಂಡ ವಾಟಿಸ್ನೆ,

"ಅದಿರ್ಲಿ ದೊಡಪ್ಪ, ಕುವೆಂಪುದೊಂದು ಕವನನೆ ಹೋಯ್ತಾ ಅದಲ್ಲ ಹೇಳು" ಎಂದ. ಇದರ ತಳಬುಡ ಅರ್ಥವಾಗದ ಕಾಳಮಾವ,

"ಅದೇನು ಸರಿಯಾಗೇಳ್ಕ" ಎಂದ.

"ನೀನು ಹ್ವಲ ಉಳದ ನೋಡಿ ಕುವೆಂಪು ಒಂದು ಕವನ ಬರದಿದ್ರು. ಕವನ ಅಂದ್ರೆ ಪದ. ಅದರೆಸರೇನಪ್ಪಾ ಅಂದ್ರೆ ನೇಗಿಲ ಯೋಗಿ ಅಂತ."

"ಕಾಳಮಾವ ವಲ ಹುಳದ ಕುಯೆಂಪು ಯಾವಾಗ ನೋಡಿದ್ರೊ" ಎಂದು ಉಗ್ರಿ ಕುತೂಹಲಗೊಂಡ.

"ಮಿಷ್ಟರ್ ಉಗ್ರಿ, ಕುವೆಂಪು ಕಾಳದೊಡಪ್ಪನ್ನೆ ನೋಡಬೇಕಿಲ್ಲ, ಅವುರು ಕವನ ಬರಿಯೋ ಕಾಲಕೆ ಕಾಳದೊಡಪ್ಪ ವಳ್ಳೆ ಹುಕ್ಕೆ ಹ್ವಡಿಯೋ ಎತ್ತಿನಂಗಿದ್ದ. ಇಡೀ ನಾಡಿನ ತುಂಬ ಅವುರೆ ಇದ್ರು. ಅಂಥ ಯಾರ ನೋಡಿದ್ರು ನಮ್ಮ ದೊಡಪ್ಪನ್ನ ನೋಡಿದಂಗೆ ಆಗದು. ರೈತ ಕತ್ತು ಬಗ್ಗಿಸಿಕೊಂಡು ವಲ ಹುಳದ ನೋಡಿದ ಕುವೆಂಪು, 'ಉಳುವಾ ಯೋಗಿಯ ನೋಡಲ್ಲಿ' ಅಂತ ಬರದ್ರು.

"ಆ ಪದ ನನಿಗೂ ಬತ್ತದೆ ಕಂಡ್ಯ" ಎಂದಳು ಜುಮ್ಮಿ.

"ಬರಲೇಬೇಕು ಕಣಕ್ಕ, ಮಾಜಿ ರೈತನ ಹೆಂಡತಿ ಅಲವೆ ನೀನು."

"ಮಾಜಿ ಯಾಕಾದನ್ನ, ಈಗ್ಲು ನಿಮ್ಮಾವ ಯಲ್ಲಾನು ಮಾಡ್ತನೆ."

"ವಳ್ಳೆದು. ಕುವೆಂಪು ವಲ ಹುಳೋ ರೈತನ್ನ ನೋಡಿ 'ಹುಳುವಾ ಯೋಗಿಯ ನೋಡಲ್ಲಿ' ಅಂತ ಬರದ್ರು. ಆದ್ರಿವತು ಹುಳುವಾ ಡ್ರೈವರ್ ನೋಡಲ್ಲಿ ಅಂತ ಚೇಂಜ್ ಮಾಡಿ ಕಳಂಗಾಗ್ಯದೆ."

"ಅವುನು ರೈತಲವೆ?"

"ಇಲ್ಲ, ಅವುರನ್ನ ಟ್ರ್ಯಾಕ್ಟರ್ ಡ್ರೈವರ್ ಅನ್ನಬೇಕಾಯ್ತದೆ. ಯಾಕಂದ್ರೆ ಕುವೆಂಪು ನೋಡಿದ ರೈತ ಹುಕ್ಕೆ ಗೆರೆನೇ ನೋಡಿಕಂಡು ಉಳಬೇಕಾಗಿತ್ತು, ಅತ್ಲಗಿತ್ಲಗಿ ನೋಡಿದ್ರೆ ನೇಗಲು ಹುಕ್ಕೆಗೆ ರೆವಳಿಕೆ ನುಗ್ಗದು. ಆದ್ರಿಂದ ತಲೆ ಎತ್ತದೆ ಆರುಮುಗಿಯಗಂಟ ಎತ್ತಿನ ಜೊತೆ ಎತ್ತಾಗಿ ಭೂಮಿ ಉಳತಿದ್ದ ರೈತನ್ನ ನೋಡಿದ ಕುವೆಂಪು, 'ನೇಗಿಲ ಯೋಗಿ' ಕವನ ಬರದ್ರು. ಆದ್ರಿವತ್ತು ಆ ಕವನ ಹೋಯ್ತಾ ಅದೆ" ಎಂದ. ಆಗ ಉಗ್ರಿ,

"ಒಂದು ಸಾಲೋದ್ರೇನು ಉಳದದ್ದೆಲ್ಲಾ ಉಳಕಂಡದಲ್ದೊ" ಎಂದ.

"ಉಳಕಂಡ್ರೆ ಯೋಗಿ ತಗದು ರೈತನ ನೋಡಲ್ಲಿ ಅಂತ ಸೇರಿಸಿದ್ರಾಯ್ತು ಬುಡು."

"ಅಂಗೆ ಸೇರಸಕ್ಕೆ ಬರದಿಲ್ಲ ಕಣೋ."

"ಯಾಕೆ ಬರೊದಿಲವ್ವೊ? ಆಗ ಪೇಜಾವರ ಶ್ರೀ ಯಷ್ಟೊ ಕಿಷ್ಟನ ಮನಿಗೋಗಿ ಜೈಭಾರತ ಜನನಿಯ ತನುಜಾತೆ ಕವನದೊಳಿಕೆ ಮಧ್ವಾಚಾರಿ ಸೇರಿಕಳಂಗೆ ಮಾಡಲಿಲವೆ?"

"ಅವುರಿಗೇನೋ ಉಸಾರಿಲವಂತಲ್ಲಾ?" ಎಂದಳು ಜುಮ್ಮಿ.

"ಹರ್ನಿಯ ಆಪರೇಷನ್ ಕಣಕ್ಕ"

"ಅಂಗಂದ್ರೇನು?"

"ನಿನಿಗ್ಯಂಗವ್ವ ಹೇಳದು. ಕಿಬ್ಬೊಟ್ಟೆ ಕೆಳಗಡಿಂದ ಬೀಜದ ಚೀಲದೊಳಿಕೆ ಸಣ್ಣ ಕರಳು, ದಬ್ಬಳ ಬುಟ್ಟಂಗೆ ಇಳುದುಬುಡತದೆ. ಆಗ ನಮಿಗಾಗದೊರ್‍ಯಾರೊ ಬೀಜ ಹಿಸಿಗಿದಂಗೆ ಪೈನಾಯ್ತದೆ."

"ನಿನಿಗಂಗಾಗಿತ್ತೆ?"

"ಆದೋರನುಭವ ಹೇಳ್ತಾಯಿದ್ದಿನಿ. ದಾಗುಟ್ರು ಆ ಜಾಗವ ಇಂಡಿಯಾ, ಪಾಕಿಸ್ತಾನದ ಗಡಿ ಬಂದ್ ಮಾಡಿದಂಗೆ ಆಪರೇಶನ್ ಮಾಡಿಬುಡ್ತರೆ. ಅಂತೆದ ಮಾಡಿಸಿಗಂಡವುರೆ ಪೇಜಾವರ" ಎಂದ ವಾಟಿಸ್ನೆ.


"ಆಟೊಂತರ ಕಿಷ್ಟನ ಪೂಜೆ ಮಾಡೋರಿಗೂ ಅಂಗಾಯ್ತೆ" ಎಂದ ಕಾಳಮಾವ.

"ಕಿಷ್ಟನ ಪೂಜೆಗೂ ಹರ್ನಿಯಾಕ್ಕೂ ಸಮಂಧ ಇಲ್ಲ ದೊಡಪ್ಪ, ಅಂಗೇನಾದ್ರು ಉಷಾರಾಗಿದ್ರೆ 'ಡಾ. ಕೃಷ್ಣ ಹರ್ನಿಯಾ ಸರ್ಜನ್' ಅಂತ ಬೋರ್ಡ್ ಪೇಜಾವರನೇ ಹಾಕಿಬುಡೋರು."

"ಈ ನನ ಮಗನ ಮಾತನೋಡು" ಎಂದಳು ಜುಮ್ಮಿ.

"ನೋಡಕ್ಕ, ನೀನು ಯತ್ತಮುಂದಾಗಿ ಯೋಚನೆ ಮಾಡಿದ್ರೂ, ಮನುಸುರಿಗೆ ಬರೊ ಕಾಯಲೆಗೂ, ದೇವರಗಳಿಗೂ ಯಾವ ಸಮಂಧನೂ ಇಲ್ಲ, ಆಕಸ್ಮಾತ್ ಇದ್ದಿದ್ರೆ ದೇವುಸ್ಥಾನಗಳ್ಯಲ್ಲ ಆಸುಪತ್ರೆ ಆಯ್ತಿದ್ವೊ."

"ದ್ಯಾವೇಗೌಡ್ರಿಗೂ ಅಂತದೇ ಆಪಳೇಸನ್ ಆಗಿತ್ತೇನಪ್ಪ" ಎಂದ ಸೀರ.



• ಬಿ.ಚಂದ್ರೇ...

ಕಟ್ಟೆಪುರಾ...

"ಆಪಳೇಸನ್ ಮಾಡಿಸಿಗಳೊ ಸರೀಳಲ್ಲ ಕಂಡ್ಯ" ಎಂದ ಕಾಳಮಾವ.

"ಅದೇನೋ ನಿಜ ದೊಡಪ್ಪ. ವಯಸ್ಸಿನೋರಾಗಿದ್ರೂ ಉತ್ತರ ಕರ್ನಾಟಕ ತಿರಗಕ್ಯೊ... ಗೊತ್ತೆ."

"ಆ ಕಡೆಯಲ್ಲ ಅವುರು ಜೋರಾಗಿರಬೇಕು."

"ಜೋರಾಗಿದ್ರುವೆ ಈಗಾಗ್ಲೆ ಸಮೀಕ್ಷೆ ಬಂದುಬ... ದೊಡಪ್ಪ, ಕಾಂಗ್ರೆಸ್ ಮುಂದದಂತೆ."

"ಇರಬವುದು ಬುಡು."

"ಅದ್ಕೆ ದೊಡಪ್ಪ ಬಿಜೆಪಿಗಳು ಸಿದ್ದರಾಮ... ಸರಕಾರದ ವಿರುದ್ಧ ಮಾಡಬಾರದ್ನೆ ಮಾಡಕ್ಕೆ ಹ್ವಂಟ..."

"ಅದೇನು ಮಾಡಕ್ಕೆ ವಂಟಿದ್ದರ್ಲ?" ಎಂದಳು ಜು...

"ನೋಡಕ್ಕ, ಆಗ ಅವುಳ್ಯಾರೊ ವಬ್ಬಳು ಮೇಟಿ ಇದ್ದಾಗ ಮೊಬೈಲಿಗೆ ಸಿಕ್ಕಿಬಿದ್ದಿದ್ಲು ನೋಡು, ಇಷ್ಟು ದಿನಾದ ಮ್ಯಾಲೆ ಈ ಬಿಜೆಪಿಗಳು ಹುಡುಕಿ ಟಿವಿ ಮುಂದೆ ಕುಂಡ್ರಿಸ್ಯವುರೆ.

"ನಾನು ನೋಡಿದೆ ಕಂಡ್ಯ. ಅವುಳು ಜಯಲಕ್ಷ್ಮಿಯಂಗವ್ಳೆ."

"ನೋಡು, ಎಡೂರಪ್ಪನ ಕಾಲ್ದಲ್ಲಿ ಜಯಲಕ್ಷ್ಮಿ... ಮಾಡಿದ್ಲು, ಸಿದ್ದರಾಮಯ್ಯನ ಕಾಲ್ದಲ್ಲಿ ಇವುಳು ಸಿಕ್ಕಿ... ಆದ್ರು ಸರಕಾರ ಮೇಟಿ ರಾಜೀನಾಮೆ ತಗಂಡು ಯ... ಮಾನ ಉಳಿಸಿಗುಂಡಿರುವಾಗ ಬಿಜೆಪಿಗಳು ಅವುಳ ಹಿಡ... ಸೀರೆ ಉಡಿಸಿ, ಹೂ ಮುಡಿಸಿ, ಲಿಪ್ಟಿಕ್ ಹಚ್ಚಿ ಟಿವಿ ವಳಿಕೆ ಕೂರಿಸ್ಯವೆ. ಇದಕ್ಕೇನೇಳ್ತೀ?"

"ಆ ಹರತಾಳ ಹಾಲಪ್ಪ ಗೆದ್ದುಬಿಟ್ಟನಂತಲ್ಲಾ?"

"ಊ ಕಣಕ್ಕ, ಅವುನಿಗೆ ಪನಿಷ್‌ಮೆಂಟಾಗದ ಯ... ನನ್ನ ಮನಸು ಒಪ್ತಿತ್ತಿರಲಿಲ್ಲ, ಅಂತೂ ಬಚಾವಾದ..."

"ನಿರಪರಾಧಿ ಅನ್ನು" ಎಂದ ಉಗ್ರಿ.

"ಕೋರ್ಟು ತೀರ್ಪು ಬಂದಿರದ್ರಿಂದ ನಾವು ಮಾ... ಕಂಟೆಂಪ್ಟಾಪ್ ಕೋರ್ಟಾಯ್ತದೆ. ಆದ್ರು ಒಂ... ಮ್ಯಾಟ್ರೇಳ್ತಿನಿ. ಆ ಹಾಲಪ್ಪ ಅವುಳ ಮ್ಯಾಲೆ ಮನಿ... ಗೊತ್ತಾಗಲಿಲವಂತೆ. ಯಲ್ಲಮುಗದ ಮ್ಯಾಲೆ ಇವುನ... ಗಂಡಲ್ಲ ಅಂತ ಗೊತ್ತಾಯ್ತಂತೆ. ಇದ್ಯಂಗಕ್ಕ ನಂಬ..."

"ಸುಳ್ಳು ಬುಡು. ಯಾವೆಂಗಸಿಗೂ ಕೈಯಾಕಿ... ಗೊತ್ತಾಯ್ತದೆ. ಅವುರೇನು ಸತ್ತು ಮನಿಗಿರ್ತರ್ಲ?"


"ಎಜ್ಜಾಕ್ಟಿ ಕರಟ್ ಕಣಕ್ಕ."


ಕೊಪ್ಪಳ: ಜಾತಿ ಕೆಮಿಸ್ಟ್ರಿಯ ಜೆಡಿಎಸ್ ಲೆಕ್ಕಾಚಾರಗಳು


ಕೊಪ್ಪಳ ಜಿಲ್ಲೆಯಲ್ಲಿ ಜೆಡಿಎಸ್ ಮುಂಬರುವ ಚುನಾವಣೆಗೆ ಸಣ್ಣದಾಗಿ ತನ್ನ ಕದಲಿಕೆಗಳನ್ನು ತೋರ್ಪಡಿಸುತ್ತಿದೆ. ಜಿಲ್ಲೆಯಲ್ಲಿ ಪ್ರಬಲ ಹಿಡಿತ ಸಾಧಿಸಿರುವ ಕಾಂಗ್ರೆಸ್-ಬಿಜೆಪಿ ಪಕ್ಷಗಳೆದುರು ಪೈಪೋಟಿ ನೀಡಬೇಕೆಂದರೆ ಜಾತಿ ಕೆಮಿಸ್ಟ್ರಿ ಬಹಳ ಮುಖ್ಯ ಎಂಬುದನ್ನು ಅರ್ಥಮಾಡಿ ಕೊಂಡಿರೋ ಜೆಡಿಎಸ್ ಇತ್ತೀಚೆಗಷ್ಟೆ ಅಳೆದುತೂಗಿ ತನ್ನ ಜಿಲ್ಲಾ ಪದಾಧಿಕಾರಿ ಪಟ್ಟಿಯನ್ನು ಬಿಡುಗಡೆ ಮಾಡಿದೆ. ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಮುತುವರ್ಜಿ ವಹಿಸಿ ತಮ್ಮ ನಂಬಿಗಸ್ಥ ಭಂಟರಾದ ತುಮಕೂರಿನ ಎಮ್‌ಎಲ್‌ಸಿ ಕಾಂತರಾಜು ಮತ್ತು ಜೆಡಿಎಸ್ ರಾಜ್ಯ ಮಹಾಪ್ರಧಾನ ಕಾರ್ಯದರ್ಶಿ ಸಿ.ಎಮ್.ನಾಗರಾಜರನ್ನು ಕೊಪ್ಪಳ ಜಿಲ್ಲೆಯ ಉಸ್ತುವಾರಿಗೆ ಬಿಟ್ಟಿದ್ದಾರೆ. ಕಳೆದ ತಿಂಗಳಿಂದ ಕೊಪ್ಪಳದಲ್ಲೆ ಬಿಡಾರ ಹೂಡಿರುವ ಅವರಿಬ್ಬರು ಇಲ್ಲಿನ ರಾಜಕೀಯ ವಿದ್ಯಮಾನಗಳನ್ನೆಲ್ಲ ಅಳೆದುತೂಗಿ ಸಲ್ಲಿಸಿದ ವರದಿ ಆಧರಿಸಿಯೇ ಈ ಪದಾಧಿಕಾರಿಗಳ ಪಟ್ಟಿ ಸಿದ್ಧವಾಗಿದೆ.


ಕೊಪ್ಪಳ ಜೆಡಿಎಸ್‌ಗೆ ಕುಷ್ಟಗಿಯ ಮಾಜಿ ಶಾಸಕ ಕೆ.ಶರಣಪ್ಪ ಪಾಟೀಲರು ಒಂದು ಶಕ್ತಿಯಂತಿದ್ದರು. ತಮ್ಮ ಮೂವತ್ತು ವರ್ಷದ ರಾಜಕೀಯ ಬದುಕಿನಲ್ಲಿ ಆರು ಬಾರಿ ಜನತಾ ಪರಿವಾರದ ಹುರಿಯಾಳಾಗಿ ಸ್ಪರ್ಧಿಸಿದ್ದ ಅವರು 1994ರಲ್ಲಿ ಗೆದ್ದಿದ್ದು ಬಿಟ್ಟರೆ ಇನ್ನುಳಿದಂತೆ ಸೋಲಿನ ಸುಳಿಯಲ್ಲೇ ಒದ್ದಾಡಿದಂತವರು. ಆದರೂ ಅವರು ಜಿಲ್ಲೆಯ ಪ್ರಭಾವಿ ಪಂಚಮಸಾಲಿ ಜಾತಿಗೆ ಸೇರಿದವರಾಗಿದ್ದುದೇ ಜನತಾ ಪರಿವಾರಕ್ಕೆ ಒಂದು ಪ್ಲಸ್ ಪಾಯಿಂಟ್ ಆಗಿತ್ತು, ಅಂತವರು ಇತ್ತೀಚೆಗಷ್ಟೆ ಯಡ್ಡಿಯ ಸಮ್ಮುಖದಲ್ಲಿ ಬಿಜೆಪಿ ತೆಕ್ಕೆಗೆ ಜಿಗಿದನಂತರ ಜೆಡಿಎಸ್



ವಿರೂಪಾಕ್ಷಗೌಡ


ನಾಗಪ್ಪ


ಶ್ರೀಪಾದಪ್ಪ


ಸಿಎಂ ಹಿರೇಮಠ


ಪ್ರವೀಣ್ ಗೌಡ



ಕೊಡತಗೇರಿ

ಕೊಂಚ ಮಟ್ಟಿಗೆ ಕಳೆಗುಂದಿದಂತಿತ್ತು, ಅದನ್ನು ಬ್ಯಾಲೆನ್ಸ್ ಮಾಡಲೋಸುಗ ದೇವೇಗೌಡರ ನಿಕಟವರ್ತಿಯಾಗಿದ್ದ ಬೀಳಗಿ ನಾಗನಗೌಡರ ಪರವಾಗಿ ದುಡಿದಿದ್ದ, ಅದೇ ಪಂಚಮಸಾಲಿ ಕೋಟಾದ ನಾಗಪ್ಪ ಸೂಡಿಯನ್ನು ಜಿಲ್ಲಾ ಜೆಡಿಎಸ್ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ನಾಗಪ್ಪ ಸೂಡಿ ಕುಷ್ಟಗಿಯ ಜೆಡಿಎಸ್ ಕ್ಯಾಂಡಿಡೇಟಾಗಲು ಸರ್ವಪ್ರಯತ್ನ ನಡೆಸಿದ್ದಾರೆ. ಆದರೆ ಜಂಗಮ ಸಮಾಜಕ್ಕೆ ಸೇರಿದ ಕುಷ್ಟಗಿ ತಾಲ್ಲೂಕು ಅಧ್ಯಕ್ಷರೂ ಆಗಿರುವ ನಿವೃತ್ತ ತಹಸೀಲ್ದಾರ್ ಸಿ.ಎಂ.ಹಿರೇಮಠ್ ಟಿಕೆಟ್ ಮೇಲೆ ಕಣ್ಣಿಟ್ಟಿದ್ದು ಇಬ್ಬರ ನಡುವೆ ಪೈಪೋಟಿ ನಡೆಯುತ್ತಿದೆ.


ಇನ್ನು ಯಲಬುರ್ಗದಲ್ಲಿ ರಾಜ್ಯ ವೀರಶೈವ ಪಂಚಮಸಾಲಿ ಸಮಾಜದ ಉಪಾಧ್ಯಕ್ಷರಾದ ಶ್ರೀಪಾದಪ್ಪ ಅಧಿಕಾರಿಯನ್ನು ಜೆಡಿಎಸ್ ತಾಲ್ಲೂಕು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. 2013ರಲ್ಲಿ ಕುಮಾರಸ್ವಾಮಿ ಟಿಕೆಟ್ ಕೊಡುವುದಾಗಿ ನಂಬಿಸಿ ಕೈಕೊಟ್ಟದ್ದರಿಂದ, ಅಜಮಾಸು ಹತ್ತು ವರ್ಷ ಜೆಡಿಎಸ್‌ನ ತೆನೆಹೊತ್ತು ಪಕ್ಷ ಸಂಘಟಿಸಿದ್ದ ಸಿ.ಎಚ್.ಪಾಟೀಲರು ಜೆಡಿಎಸ್‌ಗೆ ಗುಡ್‌ಬೈ ಹೇ... ಬಿಜೆಪಿ ಹೊಕ್ಕ ನಂತರ ಇಲ್ಲಿ ಜೆಡಿಎಸ್ ಬಲ ಕುಂದಿತ್ತು, ಬಂಗಾರಪ್ಪನ ಕ್ರಾಂತಿರಂಗದ ಹುರಿಯ... ಪಕ್ಷ ರಾಜಕಾರಣದ ರಂಗಪ್ರವೇಶ ಮಾಡುವುದಕ್ಕ... ಮುನ್ನ ಪಕ್ಷೇತರನಾಗಿ ಸ್ಪರ್ಧಿಸಿದ ಸುದೀರ್ಘ ಅನ... ಇರುವ ಅಧಿಕಾರಿ ಈಗ ಜೆಡಿಎಸ್ ಹುರಿಯಾಳಾ... ನಿರೀಕ್ಷೆಯಲ್ಲಿದ್ದಾರೆ. ಆದರೆ ಜಿಲ್ಲಾ ಜೆಡಿಎಸ್‌ಗೆ ಮತ್ತೋರ್ವ ಉಪಾಧ್ಯಕ್ಷನಾಗಿರುವ ಮಾಜಿ ಶಾಸಕ... ಲಿಂಗರಾಜ ದೇಸಾಯಿಯವರ ಮಗ ಶಿವಶಂಕರ ದೇಸಾಯಿ ಕೂಡಾ ಯಲಬುರ್ಗದ ಟಿಕೆಟ್ ಆಕಾಂಕ್ಷಿಯಾಗಿರೋದು ಅಧಿಕಾರಿಗೆ ತಲೆನೋವಾ... ಪರಿಣಮಿಸಿದೆ.

ಕೊಪ್ಪಳ ವಿಧಾನಸಭಾ ಕ್ಷೇತ್ರದ ಮಟ್ಟಿಗೆ ಪ್ರ... ರಾಜಕಾರಣದ ಕುಟುಂಬ ಎನಿಸಿಕೊಂಡ ಎಸ್... ಮಹಾಂತಯ್ಯ ಮಠರ ಕುಟುಂಬಕ್ಕೂ ಜೆಡಿಎಸ್ ಮಣೆಹಾಕಿ ನಾಜೂಕಿನ ಹೆಜ್ಜೆ ಇಟ್ಟಿದೆ. ಮಹಾಂ... ಮಠ 2004ರಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ ಸೋತಿದ್ದರೂ ಈ ಕುಟುಂಬಕ್ಕೆ ಕ್ಷೇತ್ರದ ರಾಜಕಾ... ಮೇಲೆ ತಕ್ಕಮಟ್ಟಿನ ಹಿಡಿತವಿದೆ. ಅದನ್ನು ಅರ್ಥಮಾಡಿಕೊಂಡಿರುವ ಪಕ್ಷ ಮಹಾಂತಯ್ಯ ಮಠರವರ ಸಹೋದರನ ಮಗ ಎಂ.ಎಸ್.ಮಹಾಂತಯ್ಯ ಮಠನನ್ನು ಜಿಲ್ಲಾ ಜೆಡಿ... ಕಾರ್ಯಾಧ್ಯಕ್ಷರನ್ನಾಗಿ ನೇಮಕ ಮಾಡಿದೆ. ಅಲ್ಲದೇ ಕುರುಬ ಸಮುದಾಯಕ್ಕೆ ಸೇರಿದ ಶಿವು ಮೊರನಾಳನನ್ನು ಕೊಪ್ಪಳ ತಾಲ್ಲೂಕು ಜೆಡಿಎಸ್ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿರುವ ಪಕ್ಷ ಅಲ್ಲೂ...





ಎರಡು ಐತಿಹಾಸಿಕ ಸಮಾವೇಶಗಳು





ಕಳೆದ ಎರಡು ವಾರಗಳಲ್ಲಿ ಕರ್ನಾಟಕದ ನೆಲದಲ್ಲಿ ಎರಡು ಐತಿಹಾಸಿಕ ಘಟನೆಗಳು ಸಂಭವಿಸಿವೆ. ಮೊದಲನೆಯದು ಬೆಂಗಳೂರಿನಲ್ಲಿ ನಡೆದ ಅಂಬೇಡ್ಕರ್ ಬಗೆಗಿನ ಅಂತಾರಾಷ್ಟ್ರೀಯ ಸೆಮಿನಾರು. ಎರಡನೆಯದು ವಿಜಯಪುರದಲ್ಲಿ ಬರಮುಕ್ತ ಭಾರತಕ್ಕಾಗಿ ಜಲರಾಷ್ಟ್ರೀಯ ದಿವಸ ಎಂಬ ರಾಷ್ಟ್ರೀಯ ಜಲ ಸಮಾವೇಶ. ಆದರೆ ಇವೆರಡೂ ಘಟನೆಗಳು ಜನವಿರೋಧಿ ನಿಲುವಿನ ಮಾಧ್ಯಮಗಳ ಉದ್ದೇಶಪೂರ್ವಕ ನಿರ್ಲಕ್ಷ್ಯದಿಂದ ಅಷ್ಟು ಸುದ್ದಿಯಾಗಲಿಲ್ಲ. ಅವುಗಳಿಗೆ ಕರ್ನಾಟಕಕ್ಕೆ ಬಂದುಹೋದ ಅಮಿತ್ ಶಾ ವರದಿಗಳೇ ಮುಖ್ಯವಾಗಿದ್ದವು. ದೃಶ್ಯ ಮಾಧ್ಯಮಗಳಂತೂ ಹುಚ್ಚಾಸ್ಪತ್ರೆಯ ವಿಸ್ತರಣೆ ಭಾಗಗಳಾಗಿ ಹೋಗಿವೆ. ಅವುಗಳ ಬಗ್ಗೆ ಮಾತನಾಡುವಂತೆಯೇ ಇಲ್ಲ.

ಅಂಬೇಡ್ಕರ್ ವಿಚಾರಸಂಕಿರಣದ ಬಗ್ಗೆ ಹೇಳುವುದಾದರೆ, ಅವರು ಬದುಕಿದ್ದಾಗ ಹೇಗೆ ಮಾಧ್ಯಮಗಳು ನಡೆದುಕೊಂಡವೊ ಇವತ್ತಿಗೂ ಹಾಗೆ ನಡೆದುಕೊಳ್ಳುತ್ತಿವೆ. ಮಾಧ್ಯಮಗಳು ಹೋಗಲಿ, ಕನ್ನಡದ ಸಂಸ್ಕೃತಿ ಚಿಂತಕರು ಮತ್ತು ಗಾಂಧಿ-ಅಂಬೇಡ್ಕರ್-ಲೋಹಿಯಾ ಬಗ್ಗೆ ಆಳವಾದ ಅಧ್ಯಯನ ಮಾಡಿರುವ ಡಿ.ಎಸ್. ನಾಗಭೂಷಣ್‌ರಂಥವರೇ ಅಂಬೇಡ್ಕರ್ ಸೆಮಿನಾರಿನ ಬಗ್ಗೆ ಯಾರೋ ದಾರಿಹೋಕ ಸಿನಿಕನನ್ನು ಕೇಳಿ ಅವನು ಹೇಳಿದ್ದೇ ಸತ್ಯವೆಂದು ಗ್ರಹಿಸಿ ಪ್ರಜಾವಾಣಿಗೆ ಪತ್ರ ಬರೆದು ತಮ್ಮ ಅಸಹನೆ ಹೊರಹಾಕಿದ್ದಾರೆ. ಜೊತೆಗೆ ಕನ್ನಡದ ಪ್ರಜ್ಞಾವಂತರ ಕನಿಕರಕ್ಕೂ ತುತ್ತಾಗಿದ್ದಾರೆ.

ಕನಿಕರ ಏಕೆಂದರೆ, ಅಂಬೇಡ್ಕರ್ ಸೆಮಿನಾರಿಗೆ ನಾಗಭೂಷಣ ಬಂದಿರಲಿಲ್ಲ, ಕರೆಯದಿದ್ದರೂ ಬರುವಂತ ಸೆಮಿನಾರದು. ಇಲ್ಲಿ ದಿನದ ಹದಿನೈದು ಗೋಷ್ಠಿಗಳಲ್ಲಿ ಕನಿಷ್ಠ ನಾಲ್ಕು ಜನ ವಿದ್ವಾಂಸರು ಮಾತನಾಡಿದರು. ಅಂತಾರಾಷ್ಟ್ರೀಯ ಮಟ್ಟದ ಚಿಂತಕರು ತಮ್ಮ ಪ್ರಬಂಧಗಳನ್ನು ಮಂಡಿಸಿದರು. ಹದಿನೈದು ಗೋಷ್ಠಿಯಂತೆ ನಡೆದ ಮೂರು ದಿನದ ಸೆಮಿನಾರಿನಲ್ಲಿ ನೂರಾರು ಜನ ಮಾತನಾಡಿದ್ದಾರೆ. ಈ ಭಾಷಣಗಳೇ ಹಲವು ಸಂಪುಟಗಳಾಗುತ್ತವೆ. ಇಲ್ಲೆಲ್ಲೂ ಅಂಬೇಡ್ಕರ್ ಕಡೆಗಣಿಸಿ ಸೆಮಿನಾರು ನಡೆದ ಬಗ್ಗೆ ಚಕಾರವಿಲ್ಲ. ಇದೆಲ್ಲಕಿಂತ ಮುಖ್ಯವಾಗಿ ಕುವೆಂಪು ಯೂನಿವರ್ಸಿಟಿಗೆ ವಕ್ಕರಿಸಿ, ಭಾರತದಲ್ಲಿ ಜಾತಿಗಳು ಇಲ್ಲ, ಅದರ ಪ್ರಾಕ್ಟೀಸೂ ಇಲ್ಲ ಎಂದು ಅಂತರರಾಷ್ಟ್ರೀಯ ಮಟ್ಟದ ವಿದ್ವಾಂಸರನ್ನೆಲ್ಲಾ ದಾರಿ ತಪ್ಪಿಸಿರುವ ಬಾಲಗಂಗಾಧರನೆಂಬ ವಿಕೃತ ವಿದ್ವಾಂಸನ ಅನಾಹುತಗಳಿಗೆ ಸಮಜಾಯಿಸಿ ನೀಡುವಲ್ಲಿ ಈ ಸೆಮಿನಾರು ಯಶಸ್ವಿಯಾಯ್ತು. ಇಂತ ಐತಿಹಾಸಿಕ ಘಟನೆಯನ್ನು ಕುಹಕವಾಗಿ ಆಡಿಕೊಂಡ ನಾಗಭೂಷಣರ ಪ್ರತಿಕ್ರಿಯೆಯಿಂದ ಬಾಲಗಂಗಾಧರನ ಬಾಲಗಳಿಗೆ ಸಂತೋಷವಾಗಿರಬಹುದು.

ಸಿದ್ದರಾಮಯ್ಯನನ್ನ ಸದಾ ಸಿನಿಕತನದಿಂದ ನೋಡುವ ಡಿ.ಎಸ್. ನಾಗಭೂಷಣರ ಅವಗಾಹನೆಗೆ ಒಂದು ವಿಷಯ ತರಬೇಕಿದೆ. ಅದೇನೆಂದರೆ ಬರೋಡದ ಮಹಾರಾಜ ಅಂಬೇಡ್ಕರವರನ್ನ ಅಮೆರಿಕಕ್ಕೆ ಓದಲು ಕಳಿಸಿದ್ದರು. ಅದೇರೀತಿ ಸಿದ್ದರಾಮಯ್ಯ ಕೂಡ ವಿದೇಶದಲ್ಲಿ ಓದಿ ಬಂದು ಈ ನಾಡು ಕಟ್ಟಲೋಸ್ಕರ ಸುಮಾರು ನಾನೂರು ಹದಿನೈದು ವಿದ್ಯಾರ್ಥಿಗಳನ್ನು ಕಳಿಸಿದ್ದಾರೆ. ಅವರಲ್ಲಿ ಹಲವರು





ಮರಳಿ ಬರದೇಹೋದರೂ ಬಾಲಗಂಗಾಧರನಿಗೆ ಬೆಂಡೆತ್ತುವುದಂತೂ ನಿಜ. ವಿಷಯ ಅದಲ್ಲ. ಕನ್ನಡದ ಸಂಸ್ಕೃತಿ ಚಿಂತಕರು ಅಸೂಯೆಗಳಿಂದಾಗಿ ಮುಟ್ಟುತ್ತಿರುವ ಪಾತಾಳ. ಕನ್ನಡದ ಬಹುದೊಡ್ಡ ವಿದ್ವಾಂಸರು ಈಗ ಆಗಿಹೋದವರನ್ನು ನೋಡಿದರೆ, ಯಾಕೆ ಇವರೆಲ್ಲಾ ಸಣ್ಣತನ, ಹೊಟ್ಟೆಕಿಚ್ಚು, ಪೂರ್ವಗ್ರಹಗಳಿಂದ ಮುಕ್ತವಾಗಲಿಲ್ಲ ಎಂದು ಯೋಚಿಸುವಂತಾಗುತ್ತದೆ. ಅವರ ಪ್ರಖರ ಸೃಜನಶೀಲ ವಿಚಾರಧಾರೆಗೆ ಅವೇ ಪೋಷಕಾಂಶಗಳಾಗಿದ್ದರೆ ನಾವದನ್ನು ಸಹಿಸಿಕೊಳ್ಳಲೇಬೇಕಾಗುತ್ತದೆ.

ವಿಜಯಪುರದ ಭಗೀರಥ

ಇನ್ನು ಬರದ ನಾಡು ವಿಜಯಪುರದಲ್ಲಿ ನಡೆದ ಜಲ ಪವಾಡಗಳು ಬದುಕಿಗೆ ಭರವಸೆಯನ್ನು ನೀಡುವಂತಿವೆ. ವಿಜಯಪುರದಲ್ಲಿ ವರ್ಷದಲ್ಲಿ ಮೂವತ್ತು ನಾಲ್ಕು ನಿಮಿಷ ಮಾತ್ರ ಮಳೆಯಾದ ವರದಿಯೊಂದನ್ನು ಒಬ್ಬ ಪೊಲೀಸ್ ಅಧಿಕಾರಿ ನೀಡಿದ್ದರು. ಕೇವಲ ವಾತಾವರಣದ ಶೀತದಿಂದಲೇ ಬರುವ ಜೋಳ ವಾಣಿಜ್ಯ ಬೆಳೆಗಳಿಂದ ಮತ್ತು ದ್ರಾಕ್ಷಿಯಿಂದ ವಿಜಯಪುರ ಬದುಕಿ ಬರುತ್ತಿತ್ತು. ಆದರೆ ಆ ಜಿಲ್ಲೆ ಪಡೆದ ಎಂ.ಬಿ. ಪಾಟೀಲರೆಂಬ ಜಲ ಸಂಪನ್ಮೂಲ ಸಚಿವ ನಿಜಕ್ಕೂ ವಿಜಯಪುರದ ಭಗೀರಥನಾಗಿದ್ದಾರೆ. ಆದಿಲ್‌ಶಾಹಿಗಳ ನಂತರ ಸುದ್ದಿ ಮಾಡಿರುವ ಪಾಟೀಲರು, ವಿಜಯಪುರದಲ್ಲಿ ಪಾಳು ಬಿದ್ದಿದ್ದ ಬಾವಡಿಗಳನ್ನು ನವೀಕರಿಸಿ ನೀರು ತುಂಬಿಸಿದ್ದಾರೆ. ಮುಚ್ಚಿದ ಸುರಂಗ ಮಾರ್ಗಗಳನ್ನು ಸುಗಮಗೊಳಿಸಿದ್ದಾರೆ. ಅಲ್ಲದೆ ವಿಜಯಪುರದ ಎಲ್ಲಾ ಕೆರೆಗಳಿಗೆ ನೀರು ತುಂಬಿಸಿ ವಿಜಯಪುರದ ಐದು ವಾರ್ಡ್‌ಗಳಿಗೆ ಇಪ್ಪತ್ತುನಾಲ್ಕು ಗಂಟೆ ನೀರು ಸರಬರಾಜಾಗುವಂತೆ ಮಾಡಿದ್ದಾರೆ.

ಎಂ.ಬಿ. ಪಾಟೀಲರು ನೀರಾವರಿ ಮಂತ್ರಿಯಾದ ಆರಂಭದಲ್ಲೇ ಕೆಲಸ ಆರಂಭಿಸಿದ ಕಾರಣಕ್ಕೆ ಹಳೆ ಕೆರೆಗಳೆಲ್ಲಾ ನೀರಿನಿಂದ ತುಂಬಿವೆ. 15 ಬಾವಿಗಳನ್ನು ಡಿಸಿಲ್ಟ್ ಮಾಡಿಸಿದ್ದಾರೆ. ಪಾಟೀಲರ ಈ ಸಾಧನೆ ದೇಶದ ಜಲತಜ್ಞರ ಗಮನ ಸೆಳೆದ ಕಾರಣಕ್ಕೆ ಕರ್ನಾಟಕದಲ್ಲೇ ಮೊದಲ ಬಾರಿಗೆ ಜಲ ಸ್ವಾತಂತ್ರ್ಯ ದಿನ ವಿಜಯಪುರದಲ್ಲಿ ನಡೆಯಿತು. ಜಲತಜ್ಞರಾದ ರಾಜೇಂದ್ರ ಪೋದ್ದಾರ್ ಶ್ರಮವೂ ಈ ಸಮಾವೇಶದಲ್ಲಿ ಎದ್ದುಕಂಡಿತು. ಈ ಸಮಾವೇಶ ಮತ್ತು ಸಚಿವರ ಸಾಧನೆ ದೃಶ್ಯ ಮಾಧ್ಯಮಗಳಲ್ಲಿನ ಅನ್ನದಂಡಗಳಿಗೆ ಕುತೂಹಲ ಮೂಡಿಸಬೇಕಿತ್ತು, ಏಕೆಂದರೆ ಇವರೆಲ್ಲಾ ಅನ್ನ ತಿನ್ನುವುದು ಜಲಮೂಲದಿಂದಲೇ ಅಲ್ಲವೆ. ಆದರೇನು ಅವುಗಳ ಆದ್ಯತೆಯೇ ಬೇರೆ. ಅಂದರೆ ಮಾನ್ಯ ಎಡೂರಪ್ಪನವರು ತನ್ನ ಪಾರ್ಟಿಯ ವಿಜಯಗೌಡ ಪಾಟೀಲನನ್ನು ಮೆಚ್ಚಿಸಲು ಎಂ.ಬಿ. ಪಾಟೀಲರನ್ನು ಏಕವಚನದಲ್ಲಿ ಟೀಕಿಸಿದ ಸುದ್ದಿಯೇ ಅವುಗಳಿಗೆ ಮುಖ್ಯವಾಗಿತ್ತು. ಆದರೆ ಎಡೂರಪ್ಪನ ಮಾತಿನಿಂದ ಕೆರಳಿ ನಿಂತ ಪಾಟೀಲರು "ಎಡೂರಪ್ಪನಿಗೆ ಲಿಂಗಾಯತ ಲೀಡರ್ ಎಂಬ ಕಾರಣಕ್ಕೆ ಗೌರವ ಕೊಡುತ್ತಿದ್ದೇನೆ. ಇನ್ನೊಮ್ಮೆ ಏಕವಚನದಲ್ಲಿ ಮಾತನಾಡಿದರೆ ಅದೇನಾಗುತ್ತೋ ನನಗೆ ಗೊತ್ತಿಲ್ಲ" ಎಂದಿದ್ದಾರೆ.


ಒಂದಿಷ್ಟು ಪುಕ್ಕಲತನವೂ ಇರುವ ಎಡೂರಪ್ಪ ಅವತ್ತಿನಿಂದ ಇಲ್ಲಿಯವರೆಗೆ ಉಸಿರು ಬಿಟ್ಟಿಲ್ಲ. ಹಾಗೆಯೇ ಲಿಂಗಾಯತ ಧರ್ಮದ ವಿಚಾರವಾಗಿ ಬುದ್ಧಿ ಹೇಳಲು ಬಂದ ಪೇಜಾವರ ಶ್ರೀಗಳಿಗೆ ಪಾಟೀಲರು "ಇದು ನಿಮಗೆ ಸಂಬಂಧಪಡದ ವಿಚಾರ. ಏನೇ ವಿಷಯ ಇದ್ದರೂ ಹೇಳಲು ನಮ್ಮ ಗುರುಗಳಿದ್ದಾರೆ" ಎಂದಿದ್ದಾರೆ. ಪೇಜಾವರರು ಇಂತಹ ಪ್ರತಿಕ್ರಿಯೆಯನ್ನು ತಮ್ಮ ಜೀವಮಾನದಲ್ಲಿ ಯಾರಿಂದಲೂ ಕೇಳಿಲ್ಲವೇನೊ. ಅವರು ಮರು ಮಾತನಾಡಲಿಲ್ಲ.


ಖಚಿತವಾದ ಮಾತು ಹಾಗು ಕರಾರುವಾಕ್ ಕೆಲಸಗಳ ಪರಿಣಾಮದಿಂದ ಎಂ.ಬಿ. ಪಾಟೀಲ್ ಈಚೆಗೆ ಈ ಪ್ರಾಂತ್ಯ ಕಂಡ ದಕ್ಷ ಮಂತ್ರಿಯಾಗಿದ್ದಾರೆ. "ಇನ್ನೊಂದು ಅವಕಾಶ ಕೊಡಿ. ನೀರಿನ ಸಮಸ್ಯೆಯನ್ನು ಸಂಪೂರ್ಣ ಬಗೆಹರಿಸುತ್ತೇನೆ" ಎಂಬ ಅವರ ಮಾತು ಬಾಯಾರಿದ ಜನಕ್ಕೆ ಜಲ ಸಿಂಚನದಂತೆ ಕಂಡಿದೆ.


■ ವರದಿಗಾರ

...ಸ್ಪಿಯನ್ನು ಲೆಕ್ಕಹಾಕಿ ಹೆಜ್ಜೆ ಇಟ್ಟಿದೆ. ಈ ಮೊದಲು ಕಾಂಗ್ರೆಸ್‌ನಲ್ಲಿದ್ದ ಶಿವು ಮೊರನಾಳ ಕಳೆದ ಝಡ್‌ಪಿ ಎಲೆಕ್ಷನ್‌ನಲ್ಲಿ ಟಿಕೆಟ್ ಸಿಗಲಿಲ್ಲ ಅನ್ನೋ ಕಾರಣಕ್ಕೆ ಬಂಡಾಯ ಅಭ್ಯರ್ಥಿಯಾಗಿ ಹಿರೇಸಿಂಧೋಗಿ ಕ್ಷೇತ್ರದಿಂದ ಸ್ಪರ್ಧಿಸಿ 4 ಸಾವಿರ ಮತ ಕಿತ್ತು ತನ್ನ ಶಕ್ತಿಯನ್ನು ತೋರಿಸಿದ್ದ. ಇಂತವ ಈಚೆಗಷ್ಟೆ ಜೆಡಿಎಸ್ ಸೇರಿದ್ದಾನೆ. ಅವನಿಗೆ ತಾಲ್ಲೂಕು ಅಧ್ಯಕ್ಷನ ಪಟ್ಟಕಟ್ಟುವ ಮೂಲಕ ಜೆಡಿಎಸ್, ಕುರುಬ ಮತಗಳನ್ನು ಕಬಳಿಸುವ ...ಚ್ಚು ಹೆಣೆದಿದೆ.

ಇನ್ನು ಕೊಪ್ಪಳದ ಮಾಜಿ ಶಾಸಕ ವಿರುಪಾಕ್ಷಗೌಡ









...ಲಿ ಪಾಟೀಲರ ಮಗ ಪ್ರದೀಪಗೌಡ ಮಾಲಿ ಪಾಟೀಲನನ್ನು ಜೆಡಿಎಸ್ ಜಿಲ್ಲಾಧ್ಯಕ್ಷನನ್ನಾಗಿ ಆಯ್ಕೆ ಮಾಡಲಾಗಿದ್ದು ಈತ ಈಗಾಗಲೇ ಎರಡು ಬಾರಿ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದುಂಟು. 2010ರಲ್ಲಿ ಸಂಗಣ್ಣ ಕರಡಿ ಆಪರೇಷನ್ ಕಮಲಕ್ಕೆ ... ಜರುಗಿದ ಉಪಚುನಾವಣೆಯಲ್ಲಿ ...ಗೌಡ ಇಪ್ಪತ್ತು ಸಾವಿರ ಮತ ಪಡೆದು ..., 2013ರಲ್ಲಿಯೂ ಸೋಲು ಆತನನ್ನು ...ಸಿತ್ತು, ಈ ಸಲ ಆತ ಜೆಡಿಎಸ್ ...ಧ್ಯಕ್ಷನಾಗಿರೋದರಿಂದ ಆತನೂ ಮೂರನೇ ಸಲ ...ಗೆ ಕಸರತ್ತು ನಡೆಸಿದ್ದಾನೆ. ಹಾಗಾಗಿ ಕೊಪ್ಪಳದ ಟಿಕೆಟ್ ಕಸರತ್ತು ಮಹಾಂತಯ್ಯ ಮಠ, ಶಿವು ಮೊರನಾಳ, ಪ್ರದೀಪ್ ಮಾಲಿ ಪಾಟೀಲನ ನಡುವೆ ತ್ರಿಕೋನ ಪ್ರೇಮಪಾಶದಂತಾಗಿದೆ.

ಇನ್ನು ಮುಸ್ಲಿಂ ಮತಗಳನ್ನು ತನ್ನತ್ತ ಸೆಳೆಯುವ ಸಲುವಾಗಿ ಮುಸ್ಲಿಂ ಸಮಾಜದ ಕೆ.ಎಂ.ಸೈಯದ್‌ರನ್ನು ಜಿಲ್ಲಾ ಜೆಡಿಎಸ್ ಹಿರಿಯ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಕೊಪ್ಪಳದ ಮಟ್ಟಿಗೆ ಮುಸ್ಲಿಂ ಮತಗಳನ್ನು ಸೆಳೆಯಬಲ್ಲ ಜೆಡಿಎಸ್ ಲೀಡರ್ ಆಗಿದ್ದ ಗಂಗಾವತಿಯ ಇಕ್ಬಾಲ್ ಅನ್ಸಾರಿ ಪಕ್ಷದ ವಿರುದ್ಧ ಬಂಡಾಯವೆದ್ದು ಕಾಂಗ್ರೆಸ್ ಸೇರುವ ಹಾದಿಯಲ್ಲಿರೋದರಿಂದ ತನ್ನ ಪಾಲಿನ ಮುಸ್ಲಿಂ ಮತಗಳು ಚದುರಿಹೋಗದಂತೆ ತಡೆಯಲು ಜೆಡಿಎಸ್ ಈ ತಂತ್ರ ಹೆಣೆದಿದೆ.

ಗಂಗಾವತಿಯಲ್ಲಿ ಇಕ್ಬಾಲ್ ಅನ್ಸಾರಿಯ ಪಕ್ಷಾಂತರ ಪರ್ವದಿಂದ ಜೆಡಿಎಸ್‌ಗೆ ಅಭ್ಯರ್ಥಿಯ ಸಮಸ್ಯೆ ಕಾಡಬಹುದಾಗಿತ್ತು, ಆದರೆ ಸದ್ಯ ಕಾಂಗ್ರೆಸ್‌ನಲ್ಲಿರೋ ಮಾಜಿ ಮಂತ್ರಿ ನಾಗಪ್ಪ ಸಾಲೋಣಿಯ ಮಗ ವೀರೇಶ್ ಸಾಲೋಣಿ ಜೆಡಿಎಸ್ ಕದ ತಟ್ಟುತ್ತಿದ್ದಾನೆ. ಈತ ಕುರುಬ ಸಮುದಾಯಕ್ಕೆ ಸೇರಿರೋದರಿಂದ ಗಂಗಾವತಿಯಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಕುರುಬ ಮತಗಳ ಮೇಲೆ ಕಣ್ಣಿಟ್ಟು ಪಕ್ಷಕ್ಕೆ ಬರಮಾಡಿಕೊಂಡು ಅಭ್ಯರ್ಥಿಯಾಗಿಸಿದರೆ ಅಚ್ಚರಿಯೇನೂ ಇಲ್ಲ. ಆದರೆ ಅನ್ಸಾರಿ ಕಾಲದಿಂದಲೂ ಪಕ್ಷಕ್ಕೆ ನಿಷ್ಠನಾಗಿ ದುಡಿದ ಮಾಜಿ ಜಿ.ಪಂ. ಉಪಾಧ್ಯಕ್ಷ ವಿರೂಪಾಕ್ಷಗೌಡ ಹೆರೂರನ್ನು ಓವರ್‌ಟೇಕ್ ಮಾಡಿ ಸಾಲೋಣಿ ಟಿಕೆಟ್ ಗಿಟ್ಟಿಸಿಕೊಳ್ತಾನಾ ಅನ್ನೋದೆ ಸದ್ಯದ ಪ್ರಶ್ನೆ.

ಕನಕಗಿರಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಧ್ಯಕ್ಷರನ್ನಾಗಿ ಯುವ ರಾಜಕಾರಣಿ ಮಲ್ಲಿಕಾರ್ಜುನ ಹೊಸಮನಿಯನ್ನು ನೇಮಕ ಮಾಡಲಾಗಿದೆ. ಇಲ್ಲಿ ಕಾಂಗ್ರೆಸ್‌ನ ಮಾಜಿ ಸಚಿವ ಶಿವರಾಜ್ ತಂಗಡಗಿ ಸ್ಟ್ರಾಂಗ್ ಆಗಿರೋದ್ರಿಂದ ಆತನ ವಿರುದ್ಧ ನಿವೃತ್ತ ತಹಸೀಲ್ದಾರ್ ಕೆ.ಬಾಲಪ್ಪನನ್ನು ನಿಲ್ಲಿಸಬೇಕೆಂಬ ಲೆಕ್ಕಾಚಾರ ಜೆಡಿಎಸ್ ಚಾವಡಿಯಲ್ಲಿ ನಡೆಯುತ್ತಿದೆ. ಇದೆಲ್ಲದರ ಮಧ್ಯೆ ಕೊಪ್ಪಳ ಜಿಲ್ಲಾ ಯುವ ಘಟಕದ ಅಧ್ಯಕ್ಷರನ್ನಾಗಿ ವಕೀಲ ಕೆ.ಎಸ್.ಕೊಡತಗೇರಿಯನ್ನು ನೇಮಕ ಮಾಡಲಾಗಿದೆ. ಒಟ್ಟಿನಲ್ಲಿ 2018ರ ಮತಕಾಳಗಕ್ಕೆ ಜೆಡಿಎಸ್ ತಕ್ಕಮಟ್ಟಿಗೆ ತಯಾರಾಗುತ್ತಿದ್ದು ಇವೆಲ್ಲ ಲೆಕ್ಕಾಚಾರಗಳು ಕೈಹಿಡಿಯುತ್ತವಾ ಕಾದು ನೋಡಬೇಕು.


■ ಸ. ಶರಣಪ್ಪ ಪಾಟೀಲ

ಕಾರಂತ ಬಡಾವಣೆಯ ಭೂಕಬಳಿಕೆ

ಯಡ್ಡಿಗೆ ಗುರು ಕಾಣಿಕೆ



ಸದಾನಂದಗೌಡ



ಸದಾನಂದಗೌಡರ ಕೈಬರಹ ಆದೇಶ


ಮಾಡಿದ ಪಾಪವು ಸೇಡನು ಬಿಡದೆಂಬಂತೆ ಮತ್ತೆ ಮತ್ತೆ ಯಡ್ಡಿಯ ಕೊರಳಿಗೆ ಡಿನೋಟಿಫಿಕೇಷನ್ ಉರುಳು ಬಿಗಿಯುತ್ತಲೇ ಇದೆ. ಎಸಿಬಿ ಶಿವರಾಮಕಾರಂತ ಬಡಾವಣೆಯ ಜಮೀನು ಡಿನೋಟಿಫಿಕೇಷನ್ ಹಗರಣಕ್ಕೆ ಸಂಬಂಧಪಟ್ಟಂತೆ ಎಫ್‌ಐಆರ್ ದಾಖಲಿಸಿದ್ದೇ ತಡ, ಯಡ್ಡಿಯ ಪಿತ್ಥ ನೆತ್ತಿಗೇರಿದೆ. ಬಿಜೆಪಿ ಅಧಿಕಾರಕ್ಕೆ ಬಂದು ನಾನು ಮುಖ್ಯಮಂತ್ರಿಯಾದ 24 ಗಂಟೆಗಳೊಳಗಾಗಿ ಸಿದ್ದರಾಮಯ್ಯನ್ನ ಜೈಲಿಗೇ ಹಾಕ್ತೇನೀ.... ಎಂದು ಪಕ್ಕಾ ಪ್ರೈಮರಿ ಸ್ಕೂಲ್ ಬಾಲಕನಂತೆ ಬೊಬ್ಬೆ ಹೊಡೆದ ಯಡ್ಡಿಗೆ ಇದು ಸಿದ್ದರಾಮಯ್ಯನವರು ಕೊಟ್ಟ ಪೆಟ್ಟಲ್ಲ, ಬದಲಿಗೆ ತಾನೇ ನಿಂತು ಮುಖ್ಯಮಂತ್ರಿ ಪಟ್ಟಕಟ್ಟಿದ್ದ ಪಟ್ಟಾ ಶಿಷ್ಯ ಸದಾನಂದಗೌಡರು ಕೊಟ್ಟ 'ಗುರು ಕಾಣಿಕೆ'ಯೆಂಬ ಕನಿಷ್ಠ ಪ್ರಜ್ಞೆಯೂ ಇದ್ದಂತಿಲ್ಲ!

ಅಷ್ಟಕ್ಕೂ ಶಿವರಾಮ ಕಾರಂತ ಬಡಾವಣೆಗೆಂದು ಬಿಡಿಎ ಸ್ವಾಧೀನಪಡಿಸಿಕೊಂಡಿದ್ದ 3546 ಎಕರೆ 12 ಗುಂಟೆ ಜಮೀನಿನ ಪೈಕಿ ಆಗ ಮುಖ್ಯಮಂತ್ರಿಯಾಗಿದ್ದ ಯಡ್ಡಿ ಡಿನೋಟಿಫಿಕೇಷನ್ ಮಾಡಿದ್ದು 257 ಎಕರೆಗಳಷ್ಟನ್ನು. ಇದರ ಸದ್ಯದ ಮಾರುಕಟ್ಟೆ ಮೌಲ್ಯವೇ 2000 ಕೋಟಿಗೂ ಅಧಿಕ. ಅಂದರೆ ಕಾರಂತ ಬಡಾವಣೆ ಡಿನೋಟಿಫೈ ಹಗರಣದ ಒಟ್ಟು ಮೊತ್ತ ಎರಡು ಸಾವಿರ ಕೋಟಿಗೂ ಅಧಿಕ. ಒಬ್ಬ ಮುಖ್ಯಮಂತ್ರಿ ನಡೆಸಿದ ಅನೇಕಾನೇಕ ಡಿನೋಟಿಫಿಕೇಷನ್ ಕರ್ಮಕಾಂಡಗಳ ಪೈಕಿ ಕೇವಲ ಒಂದು ಪ್ರಕರಣವೇ ಎರಡು ಸಾವಿರ ಕೋಟಿಗೆ ಬೆಲೆ ಬಾಳುತ್ತದೆಯೆಂದರೆ, ಅದರಲ್ಲಿ ಯಾರ್‍ಯಾರಿಗೆ ಏನೇನು ಸಂದಾಯವಾಗಿರುತ್ತದೆ ಮತ್ತು ಯಾರ್‍ಯಾರ ಪಾಲು ಏನಿರುತ್ತದೆ ಎಂಬುದು ಎಣಿಕೆಗೆ ಸಿಗುವಂಥದ್ದಲ್ಲ.

ಸಿದ್ದು ಸರ್ಕಾರ ಸೇಡಿನ ರಾಜಕೀಯ ನಡೆಸುತ್ತಿದೆ ಎಂದೋ, ಡಿಕೆ ಮೇಲಿನ ಐಟಿ ದಾಳಿಗಿದು ಪ್ರತೀಕಾರವೆಂದೋ, ಜಗದೀಶ್ ಶೆಟ್ಟರ್ ಸೇರಿದಂತೆ ಬಿಜೆಪಿ ನಾಯಕರು ಯಾರೇನೇ ಹಾರಾಡಿದರೂ ವಾಸ್ತವ ಬೇರೆಯಿದೆ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಣತಿಯ ಮೇರೆಗಾಗಲಿ, ಈಗ ಯಾರೋ ದೂರು ಕೊಟ್ಟರೆಂಬ ಕಾರಣಕ್ಕಾಗಲಿ ಅಥವಾ ಇದ್ದಕ್ಕಿದ್ದಂತೆ ಎಸಿಬಿಗೆ ಜ್ಞಾನೋದಯವಾದ ಪರಿಣಾಮವಾಗಲಿ ಅಲ್ಲ, ಅದು ಆಗ ಮುಖ್ಯಮಂತ್ರಿಯಾಗಿದ್ದ ಸದಾನಂದಗೌಡರು ಸದನದಲ್ಲಿ ಕೊಟ್ಟ ಭರವಸೆ ಮತ್ತು ತದನಂತರ ಅವರೇ ತನ್ನ ಹಸ್ತಾಕ್ಷರದಲ್ಲಿ ಸಿಐಡಿ ತನಿಖೆಗೆ ಆದೇಶಿಸಿದ್ದರ ಪ್ರತಿಫಲ. ದಿನಾಂಕ 21 ಏಪ್ರಿಲ್ 2012ರಂದು ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅರವಿಂದ ಶ್ರೀವಾಸ್ತವರು ಸಲ್ಲಿಸಿದ್ದ ಪ್ರಸ್ತಾವನೆಗೆ ಖುದ್ದು ಸದಾನಂದ ಗೌಡರೇ ತಮ್ಮ ಹಸ್ತಾಕ್ಷರದಲ್ಲಿ 'ಈಗಾಗಲೇ ವಿಷಯದ ಗಂಭೀರತೆ ಹಾಗೂ ಸದನದಲ್ಲಿ ನೀಡಿದ ಭರವಸೆಯಂತೆ ಸಿಐಡಿ ತನಿಖೆಗೆ ವಹಿಸುವುದು' ಎಂದು ತಮ್ಮದೇ ಸಹಿ ಹಾಕಿ ಆದೇಶಿಸಿದ್ದಾರೆ. 2012ರ ಏಪ್ರಿಲ್ 24ರಂದು ಮುಖ್ಯಮಂತ್ರಿ ಸದಾನಂದಗೌಡರು ನೀಡಿದ ಸದರಿ ಆದೇಶದ ಪ್ರತಿಯನ್ನೂ ಈ ಮೂಲಕ ಪತ್ರಿಕೆ ಬಹಿರಂಗಪಡಿಸುತ್ತಿದೆ. 'ಎಸಿಬಿ ಅಧಿಕಾರಿಗಳ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಡ ಹೇರುತ್ತಿದ್ದಾರೆಂದು ಬಿಜೆಪಿ ನಾಯಕರು ಆಡುತ್ತಿರುವ ನಾಟಕವಾಗಲಿ, ಬಸವರಾಜೇಂದ್ರನೆಂಬ ಯಡ್ಡಿಯ ಕುಲಬಾಂಧವ ಅಧಿಕಾರಿಯೊಬ್ಬ ತನ್ನನ್ನು ಯಡ್ಡಿಯ ವಿರುದ್ಧ ಸಾಕ್ಷಿದಾರನಾಗುವಂತೆ ಎಸಿಬಿ ಅಧಿಕಾರಿಗಳು ಬೆದರಿಕೆ ಹಾಕಿದರೆಂಬ ಕಂಚೇಪ್ಪೆಯಾಗಲಿ ಎಂಥಾ ಆತ್ಮವಂಚನೆಯೆಂಬುದಕ್ಕೆ ಇದಕ್ಕಿಂತ ಪುರಾವೆ ಬೇಕಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಶಿವರಾಮಕಾರಂತರ ಹೆಸರಲ್ಲಿ ನೂತನ ಬಡಾವಣೆಯ ಘೋಷಣೆ ಮಾಡಿದ್ದು 2008ರಲ್ಲಿ. ಬೆಂಗಳೂರು ಉತ್ತರ ಅಪರ ತಾಲ್ಲೂಕಿನ ಹೆಸರುಘಟ್ಟ ಮತ್ತು ಯಲಹಂಕ ಹೋಬಳಿಗಳ ಒಟ್ಟು 17 ಗ್ರಾಮಗಳಿಗೆ ಸೇರಿದ 3546 ಎಕರೆ 12 ಗುಂಟೆ ಜಮೀನನ್ನು ಇದಕ್ಕೆಂದು ಸ್ವಾಧೀನ ಪಡಿಸಿಕೊಳ್ಳುವ ಅಧಿಸೂಚನೆ ಹೊರಡಿಸಿದ್ದು 2008ರ ಡಿಸೆಂಬರ್ 30ರಂದು. ಇದು ಪ್ರಾಥಮಿಕ ಅಧಿಸೂಚನೆ. ಅಂದರೆ 1847 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಟ್ಟು 18975 ನಿವೇಶನಗಳ ರಚನೆಯ ಉದ್ದೇಶ ಹೊತ್ತೇ ಬಿಡಿಎ ಕಾರಂತ ಬಡಾವಣೆಯ ನಿರ್ಮಾಣಕ್ಕಿಳಿದಿತ್ತು. ಇದೇವೇಳೆ ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿರ್ಮಾಣಕ್ಕೂ ಕೈಯಿಟ್ಟ ಬಿಡಿಎ ಯಶಸ್ವಿಯಾಗಿ 5 ಸಾವಿರ ನಿವೇಶನಗಳನ್ನು ವಿತರಿಸಿದ್ದೂ ಆಗಿತ್ತು.

ಆದರೆ ಕಾರಂತ ಬಡಾವಣೆಯ ಭೂಮಿಗೆ ಬೇರೆಯದೇ ಗ್ರಹಚಾರ ವಕ್ಕರಿಸಿದ್ದು ರಿಯಲ್ ಎಸ್ಟೇಟ್ ಖದೀಮರ ಮೂಲಕ. 18 ಸಾವಿರಕ್ಕೂ ಅಧಿಕ ನಿವೇಶನಗಳನ್ನು ಬಿಡಿಎ ಮಾರಾಟ ಮಾಡಿದಾಗ ಸರ್ಕಾರಕ್ಕೆ ಬರುತ್ತಿದ್ದ ಒಟ್ಟು ಮೊತ್ತ ಏನಿಲ್ಲವೆಂದರೂ 5692 ಕೋಟಿ ರೂಪಾಯಿಗಳು. ತಲಾ ನಿವೇಶನವೊಂದಕ್ಕೆ ಕನಿಷ್ಠ 30 ಲಕ್ಷದಂತೆ ಬಿಡಿಎ ನಿಗದಿಪಡಿಸಿತ್ತು, ಇದರಲ್ಲಿ ಖರ್ಚು ವೆಚ್ಚವಾಗಿ 1847 ಕೋಟಿ ರೂಪಾಯಿಗಳನ್ನು ಕಳೆದರೂ ಉಳಿಕೆ 3845 ಕೋಟಿ ರೂಪಾಯಿಗಳ ಅಂದಾಜು ಲಾಭ ಬಿಡಿಎಗೆ ದೊರಕಲಿತ್ತು, 18,975 ಮಂದಿ ನಾಗರಿಕರಿಗೆ ಇದರಿಂದ



ಸರ್ವೆ ನಂಬರು 109/1ರಲ್ಲಿದ್ದ 3.06 ಗುಂಟೆ ಜಮೀ
ಭೂಸ್ವಾಧೀನದಿಂದ ಕೈಬಿಡುವಂತೆ ಆಶಾ ಪರದೇಶಿ
ಹೆಸರಲ್ಲಿ ಆಗಿನ ಮುಖ್ಯಮಂ
ಯಡಿಯೂರಪ್ಪನವರಿಗೊಂದು ಅರ್ಜಿ ಸಲ್ಲಿಸಲಾಯ್ತು
ಅರ್ಜಿಯ ಮೇಲೆ ಸಿಎಂ ಯಡ್ಡಿಯೇ ಸಹಿ ಹಾಕಿ
ಬಗ್ಗೆ ಪರಿಶೀಲಿಸುವಂತೆ ಬಿಡಿಎ ಆಯುಕ್ತರಿಗೆ ಆದೇಶಿಸು
ಆದರೆ ಪ್ರಾಧಿಕಾರದ ಉಪ ಆಯುಕ್ತರಾಗಿದ್ದ ಗೌರಿಶಂ
ಇದನ್ನು ಸ್ಪಷ್ಟವಾಗಿ ನಿರಾಕರಿಸುತ್ತಾರೆ. ಸದರಿ ಜಮಿ
ಬಡಾವಣೆಯ ನಡುಭಾಗಕ್ಕೆ ಬರುತ್ತದೆ. ಇನ್ನೂ 16
ಅಧಿಸೂಚನೆ ಹೊರಡಿಸಿಲ್ಲವಾದ್ದರಿಂದ ಇ
ಹೊರತಾಗಿಯೂ ಅಧಿಸೂಚನೆಯಿಂದ ಕೈಬಿಡಲು ಸಾಧ್ಯ
ಎಂದು ಸರ್ಕಾರಕ್ಕೆ ವಾಪಸ್ಸು ಹಿಂಬರಹ ರವಾನಿಸಿದ
ಆದರೆ ಯಡ್ಡಿಗೆ ಕಾನೂನು ಯಾವ ಲೆಕ್ಕ, ಬಡಾ
ಯಾವ ಲೆಕ್ಕ? 2010ರ ಮೇ 4ರಂದು ಮತ್ತೆ 3
ಎಕರೆ ಭೂಮಿಯನ್ನು ಭೂಸ್ವಾಧೀನದಿಂದ ಕೈಬಿಡ
ಆದೇಶಿಸಲಾಗಿದೆ ಎಂಬ ಬಿಡಿಎ ಆಯುಕ್ತರ ಮೆ
ದಬಾವಣೆ ಹಾಕುತ್ತಾರೆ.

ಇದರ ಫಲವೇ 2011ರ ಆಗಸ್ಟ್ 20ರಂದು ಬ
ಆವಲಹಳ್ಳಿ ಸ.ನಂ. 109/1ರಲ್ಲಿನ 3 ಎಕರೆ 6 ಗು
ಜಮೀನನ್ನು ಭೂಸ್ವಾಧೀನದಿಂದ ಕೈಬಿಟ್ಟು ಅರ್ಜಿದಾರ
ಆಶಾ ಪರದೇಶಿಗೆ ನೀಡಿದ ಹಿಂಬರಹ!

ಬಿಡಿಎ ನೀಡಿದ ಈ ಹಿಂಬರಹವನ್ನಿಟ್ಟುಕೊಂ
ರಿಯಲ್ ಎಸ್ಟೇಟ್ ಖದೀಮರು 2012ರ ಜ
25ರಂದು 3.78 ಕೋಟಿ ರೂಪಾಯಿಗಳಿಗೆ ಮ
ಹಾಕುತ್ತಾರೆ. ಅದಕ್ಕೂ ಮುನ್ನ ಭೂಪರಿವರ್ತನೆಯ
ಮಾಡಿಸಿದ್ದಾರೆ. ಇದು ಕಾರಂತ ಬಡಾವಣೆಯ ಅವಸಾ
ಮೊದಲ ಮೆಟ್ಟಿಲಷ್ಟೆ. ಒಮ್ಮೆ ಬಡಾವಣೆಯ ಮಧ್ಯಭಾ
ಭೂಮಿಯನ್ನು ಡಿನೋಟಿಫೈ ಮಾಡಿಬಿಟ್ಟರೆಂದರೆ ಅ
ಆಧಾರದ ಮೇಲೆ ಇನ್ನಷ್ಟು ರಿಯಲ್ ಎಸ್ಟೆ
ವ್ಯವಹಾರಗಳು ಕುದುರಿಕೊಳ್ಳುತ್ತವೆ. ಕಾರಂತ ಬಡಾವ
ವಿಷಯದಲ್ಲಾಗಿದ್ದೂ ಅದೇ. ಆಶಾ ಪರದೇಶಿ ಎಂಬಾ
ಹೆಸರಲ್ಲಿ 3 ಎಕರೆ 6 ಗುಂಟೆ ಭೂಮಿ ಡಿನೋ
ಆಯಿತೆಂದು ಗೊತ್ತಾಗಿದ್ದೇ ತಡ ಪೂರ್ವಂಕರ, ಮ
ರಹೇಜಾದಂಥ ದೈತ್ಯ ಬಿಲ್ಡರುಗಳಷ್ಟೇ ಅಲ್ಲದೆ ಬ್ರಿಗೆ
ಖದೀಮ ಜೈಶಂಕರ್, ಆರ್. ಅಶೋಕ್ ತಮ್ಮ
ಯಲಹಂಕ ಶಾಸಕ ವಿಶ್ವನಾಥ್, ಕಟ್ಟಾ ನಾಯ
ವೆಂಕಯ್ಯನಾಯ್ಡು ಬೇನಾಮಿಗಳು, ಮಲ್ಲೇಶ್ವರಂ ಶಾ
ಅಶ್ವತ್ಥನಾರಾಯಣ, ಬೊಮ್ಮನಹಳ್ಳಿ ಶಾಸಕ ಸತೀಶ್
ಕೆ.ಆರ್.ಪುರಂ ಶಾಸಕ ನಂದೀಶ್ ರೆಡ್ಡಿ ಇತ್ಯಾದಿಗಳೆಲ್ಲ
ಕಾರಂತ ಬಡಾವಣೆಯ ಭೂಮಿಗೆ ಮುಗಿಬಿದ್ದರು.

ಯಲಹಂಕ ಹೋಬಳಿಯ ರಾಮಗೊಂಡನಹಳ್ಳಿ,
ಕಾವಲ್ ಮತ್ತು ಕೆಂಪನಹಳ್ಳಿಯಲ್ಲಿ ಗ್ರಾಮಸ್ಥರ ಹೆಸ
40.18 ಎಕರೆ, ಇದೇ ರಾಮಗೊಂಡನಹಳ್ಳಿ, ವ
ಕೆಂಪನಹಳ್ಳಿಯಲ್ಲಿ ಅರುಣ ಮತ್ತು ಇತರೇ 76
ಹೆಸರಲ್ಲಿ ಮತ್ತೆ 48.34 ಎಕರೆ, ದೊಡ್ಡಬೆಟ್ಟ ಹಳ್ಳಿ
8.17 ಎಕರೆ, ತಲಸಿಲ ರಾಜೇಂದ್ರ ಪ್ರಸಾದ್ ಹೆ
7.04 ಎಕರೆ, ಡಿ. ವೆಂಕಟೇಗೌಡನ ಹೆಸರಲ್ಲಿ 6
ಎಕರೆ, ವೈ.ಸಿ. ಚಿದಾನಂದನ ಹೆಸರಲ್ಲಿ 3.29
ವೆಂಕಟಾಚಲಂ ರೆಡ್ಡಿಯ ಹೆಸರಲ್ಲಿ 2 ಎ
ಸಂತೋಷ್‌ಕುಮಾರ್ ಹೆಸರಲ್ಲಿ ಆವಲಹಳ್ಳಿಯ 14 ಗು
ಸುರೇಶ್ ನನ್ನಾನಿ ಎಂಬ ಮಾರ್ವಾಡಿಯ ಹೆಸರಲ್ಲಿ
ಎಕರೆ 8 ಗುಂಟೆ; ಇತ್ಯಾದಿ ಒಂದರ ಮೇಲೊಂದು
ಡಿನೋಟಿಫಿಕೇಷನ್ ಅರ್ಜಿಗಳು ಸಿದ್ಧವಾದವು.

ಹೆಸರುಘಟ್ಟ ಹೋಬಳಿಯ ಕಾಳತಮ್ಮನ
ಬ್ಯಾಲಕೆರೆ, ಗುಣಿ ಅಗ್ರಹಾರ, ಯಶವಂತಪುರ ಹೋಬ
ವೀರಸಾಗರ, ಸೋಮಶೆಟ್ಟಿಹಳ್ಳಿ ಇತ್ಯಾದಿ ಗ್ರಾಮಗಳ
257 ಎಕರೆ 19 ಗುಂಟೆ ಜಮೀನನ್ನು ಕಾ
ಬಡಾವಣೆಯಿಂದ ಕೈಬಿಡುವಂತೆ ಖುದ್ದು ಮುಖ್ಯಮ
ಯಡ್ಡಿಯಿಂದಲೇ ಬಿಡಿಎ ಅಧಿಕಾರಿಗಳ ಮೇಲೆ ದಬಾ
ಶುರುವಾಗಿದೆ. 2008ರ ಮೇ ತಿಂಗಳಿಂದ 2011ರ ಜ
ತನಕ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿ
ಡಿನೋಟಿಫಿಕೇಷನ್ನಿನ ಇಂಥ 21 ಫೈಲುಗಳು ತಯಾರಾ



ಬಸವರಾಜೇಂದ್ರನ ಕಳ್ಳಾಟ ಚೆಡ್ಡಿ ಮೀಡಿಯಾಗಳ ಮಳ್ಳಾಟ...!

ಬಡಾವಣೆಗೆ ಮೀಸಲಾಗಿದ್ದ ಭೂಮಿಯನ್ನು ಡಿನೋಟಿಫೈ ಮಾಡಿದ್ದೇ ಯಡಿಯೂರಪ್ಪ ಎಂದು ಹೇಳಿಕೆ ನೀಡುವಂತೆ ತನ್ನ ಮೇಲೆ ಎಸಿಬಿಯ ಡಿವೈಎಸ್‌ಪಿಗಳಾದ ಅಂತೋಣಿ ಜಾನ್ ಮತ್ತು ಬಾಲರಾಜ್ ಒತ್ತಡ ಹೇರಿದರೆಂದೂ ತಾನು ಯಡ್ಡಿಯ ವಿರುದ್ಧ ಹೇಳಿಕೆ ನೀಡದೆ ಹೋಗಿದ್ದಕ್ಕೆ ತನ್ನನ್ನೇ ಈ ಪ್ರಕರಣದಲ್ಲಿ ಆರೋಪಿಯನ್ನಾಗಿ ಮಾಡಿದ್ದಾರೆಂದೂ ಬಸವರಾಜೇಂದ್ರ ಎಂಬ ಕೆಎಎಸ್ ಅಧಿಕಾರಿಯೊಬ್ಬ ಶುರುವಿಟ್ಟ ಕಳ್ಳಾಟವನ್ನೇ ಸಂಘಪರಿವಾರದ ತುತ್ತೂರಿ ಪತ್ರಿಕೆಗಳು ಪ್ರಕರಣಕ್ಕೆ ಹೊಸ ತಿರುವೆಂಬಂತೆ ಪುಂಗಿ ಬಾರಿಸುತ್ತಿವೆ.

ಕಳ್ಳನೊಬ್ಬ ತನ್ನನ್ನು ಹಿಡಿದ ಪೊಲೀಸರನ್ನೇ ದೂರಿದ್ದನ್ನು ಯಾರಾದರೂ ಕೇಸಿಗೆ ಹೊಸ ತಿರುವೆಂದರೆ ಹುಚ್ಚ ಕೂಡ ನಗದಿರುತ್ತಾನಾ?

ಅಷ್ಟಕ್ಕೂ ಈ ಬಸವರಾಜೇಂದ್ರ ಎಂಬ ಕೆಎಎಸ್ ಅಧಿಕಾರಿ ಜಾತಿಯಿಂದ ಯಡ್ಡಿಯ ಕುಲಬಾಂಧವ. ಕಾರಂತ ಬಡಾವಣೆಯ ಡಿನೋಟಿಫಿಕೇಷನ್ ಕರ್ಮಕಾಂಡ ನಡೆದಾಗ ಈತನೇ ಬಿಡಿಎಯಲ್ಲಿ ಭೂಸ್ವಾಧೀನಾಧಿಕಾರಿಯಾಗಿದ್ದ. ಡಿನೋಟಿಫಿಕೇಷನ್‌ಗೆ ಸಹಿ ಹಾಕಿದವರಲ್ಲಿ ಈತನೇ ಪ್ರಮುಖ. ಜೊತೆಗೆ ಆಗ ಬಿಡಿಎ ಉಪ ಆಯುಕ್ತರಾಗಿದ್ದ ಗೌರಿಶಂಕರ್ ಕೂಡ ಈತನಷ್ಟೇ ಹೊಣೆಗಾರರಾಗುತ್ತಾರೆ. ಡಿನೋಟಿಫೈ ಆಗಿದ್ದ ಭೂಮಿಗೆ ನೀಡಿದ ನಿರಕ್ಷೇಪಣಾ



ಖದೀಮ ಬಸವರಾಜೇಂದ್ರ

ಹಿಂಬರಹಕ್ಕೂ ಈತನೇ ಸಹಿ ಹಾಕಿರುವಾಗ ಅದು ಕಾನೂನುಬಾಹಿರವೆಂದು ಗೊತ್ತಿರಲಿಲ್ಲವೇ?

ಅಷ್ಟಕ್ಕೂ ಯಡ್ಡಿ ವಿರುದ್ಧ ಸಾಕ್ಷಿ ನುಡಿದರೆ ನಿನ್ನ ಹೆಸರನ್ನು ಕೈಬಿಡುತ್ತೇವೆಂದು ಎಸಿಬಿ ಡಿವೈಎಸ್‌ಪಿಗಳು ಹೇಳಿದ್ದೇ ನಿಜವಾಗಿದ್ದರೆ ಈತ ತಾನು ಬಚಾವಾಗಲು ಕಣ್ಣುಮುಚ್ಚಿ ಸಹಿ ಹಾಕುತ್ತಿರಲಿಲ್ಲವೆ? ಹಾಗಾದರೆ ಯಾವ ಕಾರಣಕ್ಕೆ ಸ್ವಾಧೀನವಾದ ಜಮೀನನ್ನು ಕೈಬಿಡಲು ಹಿಂಬರಹ ನೀಡಿದ? ಇದರರ್ಥ ಪ್ರಕರಣದಲ್ಲಿ ಈತ ಕೂಡ ಆರೋಪಿ ಎಂದು ತಾನೇ ಅರ್ಥ? ಮುಖ್ಯಮಂತ್ರಿ ಕಚೇರಿಯಿಂದಲೇ ಯಡ್ಡಿಯ ಆದೇಶ ಬಂದಿರುವುದು ಸುಳ್ಳೆ? ಅದಕ್ಕೆ ಪೂರಕವಾದ ದಾಖಲೆಗಳಿರುವಾಗ ಈತನ ಹೇಳಿಕೆಯೊಂದೇ ಹೇಗೆ ಯಡ್ಡಿಯ ವಿರುದ್ಧದ ಏಕಮಾತ್ರ ಸಾಕ್ಷ್ಯವಾಗಲು ಸಾಧ್ಯ?

ತಾನು ಕಳ್ಳ ಪರರ ನಂಬ ಎಂಬಂತೆ ಕಳ್ಳನಿಗೊಂದು ಪಿಳ್ಳೇ ನೆಪ ಬೇಕಷ್ಟೆ. ಎಫ್‌ಐಆರ್‌ನಲ್ಲಿ ತನ್ನ ಹೆಸರು ದಾಖಲಾಗುವುದಕ್ಕೂ ಮೊದಲು ಈ ಮಾತು ಹೇಳಿದ್ದರೆ ನಂಬಬಹುದಿತ್ತು. ತನ್ನನ್ನು ಎರಡನೇ ಆರೋಪಿಯನ್ನಾಗಿ ಮಾಡಿದ್ದು ಗೊತ್ತಾದ ಮೇಲೆ ಕಳ್ಳಾಟ ಶುರುವಿಟ್ಟಿದ್ದಾನೆ. ಪ್ರತಿಯೊಬ್ಬ ಖದೀಮನೂ ಮಾಡಬಹುದಾದ ಕಳ್ಳಾಟವನ್ನೇ ಬಸವರಾಜೇಂದ್ರನೂ ಆಡುತ್ತಿದ್ದಾನೆ. ತಮಾಷೆಯೆಂದರೆ ಕಳ್ಳ ತಾನು ಕದ್ದಿಲ್ಲ ಎಂದು ಆಡುತ್ತಿರುವ ಸುಳ್ಳಾಟವನ್ನೇ ಪತ್ರಿಕೆಗಳು 'ಪ್ರಕರಣಕ್ಕೆ ಹೊಸ ತಿರುವು' ಎಂದು ಕತೆ ಹೊಡೆಯುತ್ತಿವೆ. ಬೆಕ್ಕು ಕಣ್ಣು ಮುಚ್ಚಿಕೊಂಡು ಕುಡಿದ ಹಾಲನ್ನು ಲೋಕ ನೋಡಿಯೇ ಇಲ್ಲವೆಂಬ ಮಳ್ಳಾಟಕ್ಕೂ, ಪ್ರಕರಣದ ಆರೋಪಿಯೇ ತನ್ನನ್ನು ಸಿಲುಕಿಸಲಾಗಿದೆ ಎಂಬುದನ್ನು ಹೊಸ ತಿರುವೆಂದು ನಂಬುವ ಪತ್ರಿಕೆಗಳಿಗೂ ಹೆಚ್ಚು ವ್ಯತ್ಯಾಸವೇನಿಲ್ಲ.

ಮೈಸೂರು: ತರ್ಲೆ ಸಿಮ್ಮನಿಗೆ ಟ್ವಿಟ್ಟರ್ ತಪರಾಕಿ!



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಎಂಪಿ ...ಪ ಸಿಮ್ಮ ರಾಜಕಾರಣವೆಂದರೆ ಖಾಲಿ ಹಾಳೆಯ ...ಲ ಮನಸಿಗೆ ತೋಚಿದ್ದನ್ನೆಲ್ಲ ರಂಜನೀಯವಾಗಿ ಗೀಚಿ ...ಕೊಳ್ಳುವ ಕೇಸರಿ ಕಾಯಿಲೆ ಅಂತ ಭಾವಿಸಿರುವಂತಿದೆ. ...ನಿಗೆ ಇನ್ನೂ ತಾನು ಕುಳಿತಿರುವ ಕುರ್ಚಿಯ ಘನತೆ ...ನು ಎಂಬುದೇ ಅರ್ಥವಾಗಿಲ್ಲ. ಮೋದಿಗೆ ಬಕೆಟ್ ...ಡಿಯೋದನ್ನೆ ಮಹಾಸಾಧನೆ ಅಂದುಕೊಂಡಿರುವ ಸಿಮ್ಮ ...ನ್ಯ ಸರ್ಕಾರದ ವಿರುದ್ಧ ಬಾಯಿಗೆಬಂದಂತೆ ...ಮಾಡುವುದನ್ನೇ ಸಂಸದಗಿರಿ ಅಂದುಕೊಂಡಿದ್ದಾನೆ. ಇಡೀ ...ಶಕ್ಕೆ ರಾಜ್ಯವೇ ಕೊಂಡಾಡುತ್ತಿರುವ ಇಂದಿರಾ ಕ್ಯಾಂಟೀನ್ ...ೋಜನೆಯನ್ನು ತನ್ನ ಕೀಳುಮಟ್ಟದ ಸದಭಿರುಚಿಯಲ್ಲಿ ...ಚಿಸಲು ಹೋಗಿ ಇದೀಗ ತನ್ನ ಸ್ವಂತ ಕ್ಷೇತ್ರದ ಜನರಿಂದ ...ಮುಗ್ಗಾ ಜಾಡಿಸಿಕೊಳ್ಳುತ್ತಿದ್ದಾನೆ.

ಸಿದ್ದರಾಮಯ್ಯ ಅಧಿಕಾರ ವಹಿಸಿಕೊಂಡ ತಕ್ಷಣವೇ ...ದು ರೂಪಾಯಿಗೆ ಒಂದು ಕೆಜಿ ಅಕ್ಕಿ ನೀಡುವ ಅನ್ನಭಾಗ್ಯ ...ೋಜನೆ ಘೋಷಿಸುವ ಮೂಲಕ ಹಸಿವುಮುಕ್ತ ...ನ್ಯವಾಗಿಸುವ ಕೈಂಕರ್ಯ ತೊಟ್ಟಿದ್ದರು. ಅದರ ...ಂದುವರೆದ ಭಾಗವಾಗಿ ಇತ್ತೀಚೆಗೆ ಆರಂಭವಾದದ್ದು ...ದಿರಾ ಕ್ಯಾಂಟೀನ್. ಸಿಲಿಕಾನ್ ಸಿಟಿಯ ಶ್ರಮಿಕವರ್ಗಗಳಿಗೆ ...ಮ ದರದಲ್ಲಿ ಊಟ-ತಿಂಡಿ ಒದಗಿಸುವ ಕ್ಯಾಂಟೀನ್ ...ೋಜನೆ ಕಾಂಗ್ರೆಸ್ ಸರ್ಕಾರಕ್ಕೆ ಇನ್ನಿಲ್ಲದಷ್ಟು ಜನಪ್ರಿಯತೆ ...ಮಕೊಟ್ಟಿದೆ. ಸಹಜವಾಗಿಯೇ ಇದನ್ನು ಬಿಜೆಪಿಗೆ ...ಗಿಸಿಕೊಳ್ಳಲು ಆಗುತ್ತಿಲ್ಲ. ಹಾಗಾಗಿ ಚೆಡ್ಡಿಗಳು ತಮ್ಮೆಲ್ಲ ...ಷಿಗಳನ್ನು ಮನಬಂದಂತೆ ಕಾರಿಕೊಳ್ಳುತ್ತಿದ್ದಾರೆ. ಇಂಥಾ ...ಯುಗಳಲ್ಲಿ ಸದಾ ಮುಂದಿರುವ ಪೇಪರ್ ಸಿಮ್ಮ ಕೂಡಾ ಅಂತದ್ದೇ ಒಂದು ಟ್ವಿಟ್ಟರ್ ವಿಕೃತಿಗಿಳಿದಿದ್ದ.

'ಚಹಾ ಮಾರುತ್ತಿದ್ದ ಮೋದಿ ಪ್ರಧಾನಿಯಾದರು. ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಕ್ಯಾಂಟೀನ್ ಶುರು ಮಾಡುವಂತಾಗಿದೆ' ಎಂದು ತನ್ನ ಟ್ವಿಟ್ಟರ್ ಖಾತೆಯಲ್ಲಿ ಪ್ರತಾಪ್ ಸಿಂಹ ಗೀಚಿಕೊಂಡಿದ್ದ. ರಾಜಕಾರಣ ಎಂತದ್ದೇ ಇರಲಿ ಬಡವನ ಹಸಿವನ್ನು ಹಂಗಿಸುವಂತಹ ಇಂಥಾ ಕೀಳುಮಟ್ಟದ ಬರಹ ಜನರ ಆಕ್ರೋಶವನ್ನು ಕೆರಳಿಸಿದೆ. ಟ್ವಿಟ್ಟರ್‌ನಲ್ಲೇ ಸಾಕಷ್ಟು ಜನ ಸಿಮ್ಮನಿಗೆ ಸರಿಯಾದ ತಪರಾಕಿ ಕೊಟ್ಟಿದ್ದಾರೆ. 'ಬಡವರ ಅನ್ನದಲ್ಲೂ ರಾಜಕೀಯ ಮಾಡುವ ಸಿಂಹ' ಎಂದು ಒಬ್ಬರು ಟ್ವೀಟ್ ಮಾಡಿದ್ದರೆ, ಮತ್ತೊಬ್ಬ ಟ್ವೀಟಿಗರು 'ಇದು ನಿಮ್ಮ ಮನಸ್ಥಿತಿ ಹೇಗಿದೆ ಎಂಬುದನ್ನು ತೋರಿಸುತ್ತದೆ ಮಿಸ್ಟರ್ ಸಿಂಹ' ಎಂದು ಕ್ಯಾಕರಿಸಿದ್ದಾರೆ. ಮಗದೊಬ್ಬರು 'ತಿನ್ನುವ ಅನ್ನದಲ್ಲೂ ರಾಜಕೀಯ ಮಾಡುವ ಸಿಂಹ, ಮೊದಲು ನಿಮ್ಮ ಕ್ಷೇತ್ರಕ್ಕೆ ಕೊಡುಗೆ ಏನು?' ಎಂದು ಕೇಳಿದ್ದಾರೆ. ಇನ್ನೊಬ್ಬರು 'ಮೊದಲು ರೈತರ ಸಾಲಮನ್ನಾ ಮಾಡಿಸಿ ನಂತರ ಮೋದಿ ಬಗ್ಗೆ ಮಾತಾಡಿ' ಎಂದು ಟ್ವೀಟ್‌ನಲ್ಲೇ ಕುಟುಕಿದ್ದಾರೆ. ವಾಸ್ತವವಾದಿಯೊಬ್ಬರು 'ಮೈಸೂರು-ಕೊಡಗು ಜನ ನಿಮ್ಮನ್ನು ಸಂಸದರಾಗಿ ಆಯ್ಕೆ ಮಾಡಿ ತಪ್ಪು ಮಾಡಿದ್ದಾರೆ. ಪ್ರಧಾನಿಗೆ ಬಕೆಟ್ ಹಿಡಿಯುವುದನ್ನು ನಿಲ್ಲಿಸಿ ಕೆಲಸದಲ್ಲಿ ತೊಡಗಿ' ಎಂದು ಮರ್ಮಾಘಾತ ಕೊಟ್ಟಿದ್ದಾರೆ. ಯಥಾಪ್ರಕಾರ ಇವುಗಳಿಗೆಲ್ಲ ಪ್ರತಿಕ್ರಿಯೆ ನೀಡುವ ದುಸ್ಸಾಹಸಕ್ಕೆ ಕೈಹಾಕದೆ ಸಿಮ್ಮ ಅದ್ಯಾವುದೋ ಗುಹೆಯಲ್ಲಿ ಅವಿತಿಟ್ಟುಕೊಂಡಿದೆ.

ಸಂಸದ ಪ್ರತಾಪ ಸಿಂಹ ಈ ರೀತಿ ವಿವಾದಾತ್ಮಕ ಹೇಳಿಕೆ ನೀಡುತ್ತಿರುವುದು ಇದೇ ಮೊದಲೇನಲ್ಲ. ಈ ಹಿಂದೆಯೂ ಹಲವು ಬಾರಿ ಇಂತಹ ಸಡಿಲ ಮಾತುಗಳನ್ನು ಹರಿಬಿಟ್ಟು ಉಗಿಸಿಕೊಂಡದ್ದುಂಟು. ತೀರಾ ಇತ್ತೀಚೆಗೆ ಗುಂಡ್ಲುಪೇಟೆ ಉಪಚುನಾವಣೆ ಸಮಯದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಗೀತಾ ಮಹದೇವಪ್ರಸಾದ್ ಅವರನ್ನು ಟೀಕಿಸುತ್ತಾ 'ಗೀತಾ ಅವರಿಗೆ ಹಾಲು-ತುಪ್ಪಕ್ಕೂ ಮೊದಲೇ ಗೂಟದ ಕಾರು ನೆನಪಾಗಿಬಿಟ್ಟಿದೆ. ಮಹದೇವಪ್ರಸಾದ್ ಅವರು ಮಂತ್ರಿಯಾಗಿದ್ದಾಗ ಗೂಟದ ಕಾರಿನಲ್ಲಿ ಸುತ್ತಾಡುತ್ತಿದ್ದ ಗೀತಾ ಅವರು ಅದನ್ನು ಬಿಡಲು ಮನಸ್ಸಾಗದೆ ಗೂಟದ ಕಾರಿನ ಮೇಲಿನ ಆಸೆಯಿಂದ ಗಂಡ ಸತ್ತ ಮೂರೆ ದಿನಕ್ಕೆ ಚುನಾವಣೆಗೆ ನಿಲ್ಲುತ್ತೇನೆಂದು ಹೇಳಿದ್ದಾರೆ' ಎಂಬ ಹೇಳಿಕೆ ನೀಡಿ ವಿವಾದ ಸೃಷ್ಟಿಸಿದ್ದ. ಅವನ ಮಾತಿನ ವಿರುದ್ಧ ಸಮಸ್ತ ಮಹಿಳಾ ಸಮುದಾಯವೇ ತಿರುಗಿಬಿದ್ದಿತ್ತು. ಅದರ ಪರಿಣಾಮವೇ ಬಿಜೆಪಿಯ ಅಭ್ಯರ್ಥಿ ಸೋತು ಗೀತಾ ಮಹದೇವ ಪ್ರಸಾದ್ ಗೆದ್ದುಬಂದಿದ್ದರು. ಸಾಮಾನ್ಯವಾಗಿ



ಶತ್ರುವೇ ಆದರೂ ಅವರ ಮನೆಯಲ್ಲಿ ಸಾವು ಸಂಭವಿಸಿದಾಗ ಅವರಿಗೆ ಸಾಂತ್ವನ ಹೇಳುತ್ತಾರೆ, ಮನಸ್ಸಿಗೆ ನೋವಾಗದಂತೆ ವರ್ತಿಸುತ್ತಾರೆ. ಅಂತದ್ದರಲ್ಲಿ ಉದ್ಧಟತನದ ಹೇಳಿಕೆಕೊಟ್ಟ ಸಿಮ್ಮ, ಗೆಲ್ಲಬಹುದಾಗಿದ್ದ ಬಿಜೆಪಿಯನ್ನು ಅನಾಮತ್ತು ಮಕಾಡೆ ಮಲಗಿಸಿದ್ದ.

ಅದಕ್ಕೂ ಮುನ್ನ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಒಬ್ಬ ಹೆಂಗಸಿನ ಜೊತೆಗಿರುವ ಫೋಟೊವನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದಕ್ಕೆ ಪ್ರಭಾ ಬೆಳವಂಗಲ ಎಂಬುವವರಿಗೆ ಇದೇ ಚೆಡ್ಡಿ ಪ್ರತಾಪ 'ನಿಮಗೆ ಅಷ್ಟು ಆಸಕ್ತಿ ಇದ್ದರೆ ಮೇಟಿಯವರ ಬಳಿ ಹೋಗಿ ಅನುಭವ ಪಡೆಯಬಹುದು' ಎಂದು ಬರೆದು ಮಹಿಳಾ ಸಂಘಟನೆಗಳ ಮಂಗಳಾರತಿಗೆ ಭಾಜನನಾಗಿದ್ದ.

ಈಗ ಇಂದಿರಾ ಕ್ಯಾಂಟೀನ್ ಬಗ್ಗೆ ಟ್ವಿಟ್ಟರ್‌ನಲ್ಲಿ ಗೀಚಲು ಹೋಗಿ ಜನರಿಂದ ಮತ್ತೆ ಉಗಿಸಿಕೊಳ್ಳುತ್ತಿದ್ದಾನೆ. ಅವನನ್ನು ಆರಿಸಿ ಕಳುಹಿಸಿದ್ದ ಕ್ಷೇತ್ರದ ಜನತೆಯೇ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ. ಮೈಸೂರಿನ ಕಲಾಮಂದಿರದ ಪಕ್ಕದಲ್ಲಿರೋ ಪ್ರತಾಪನ ಸಂಸದನ ಕಚೇರಿ ಜನರೇ ಇಲ್ಲದೆ ಭಣಗುಡುವುದೇ ಅವನ ಜನಪ್ರಿಯತೆಗೆ ಸಾಕ್ಷಿ. ಅಲ್ಲೇ ಪಕ್ಕದಲ್ಲೇ ಇರುವ ಚಾಮರಾಜನಗರ ಎಂಪಿ ಆರ್.ಧ್ರುವನಾರಾಯಣ್‌ರ ಕಚೇರಿ ಸದಾ ಜನರಿಂದ ಗಿಜಿಗುಡುತ್ತಿರುತ್ತೆ. ಬೆರಳೆಣಿಕೆಯಷ್ಟು ರೋಗಿಗಳ ಚಿಕಿತ್ಸೆಗೆ ಸಹಾಯಧನ ನೀಡಲು ಪ್ರಧಾನಿಗೆ ಶಿಫಾರಸ್ಸು ಮಾಡಿದ್ದು ಬಿಟ್ಟರೆ ಈ ಪೇಪರ್ ಬಾಯ್ ಮತ್ತೇನನ್ನೂ ಕಡಿದು ಕಟ್ಟೆಹಾಕಿಲ್ಲ, ಅದನ್ನೂ ಅವನ ಪಿಎ ಮಾಡ್ತಾನೆಯೇ ಹೊರತು ಸಿಮ್ಮನಲ್ಲ, ಅವನದೇನಿದ್ದರೂ ಇಂತಹ ವಿಷ ಕಾರುವ ಕಾಯಕವಷ್ಟೆ.

ಚೆಡ್ಡಿ ಪ್ರತಾಪನಿಗೆ ಯಾವುದನ್ನು ವಿರೋಧಿಸಬೇಕು, ಯಾವುದನ್ನು ಒಪ್ಪಿಕೊಳ್ಳಬೇಕು, ಯಾರ ಬಗ್ಗೆ ಏನು ಮಾತನಾಡಬೇಕು ಎಂಬ ಮಿನಿಮಮ್ ಕಾಮನ್‌ಸೆನ್ಸೇ ಇಲ್ಲ. ಇವನ ಪಾಲಿಗೆ ಮೋದಿಯೇ ಮಹಾನುಭಾವ, ಯಡ್ಡಿಯೇ ಅಭಿನವ ಧರ್ಮರಾಯ! ಮುಂದಿನ ಎಲೆಕ್ಷನ್‌ನಲ್ಲಿ ತಾನು ಗೆಲ್ಲುವುದಿರಲಿ, ತನಗೆ ಟಿಕೆಟ್ ಸಿಗೋದೆ ಡೌಟು ಅನ್ನೋದು ಸಿಮ್ಮನಿಗೆ ಖಾತ್ರಿಯಾಗಿದೆ. ಹಾಗಾಗಿ ಆತ ಸಾಧ್ಯವಾದಷ್ಟು ಮೋದಿ, ಯಡ್ಡಿಗೆ ಬಕೆಟ್ ಹಿಡಿದು ಭವಿಷ್ಯದ ದಿನಗಳಿಗೆ ದಾರಿ ಮಾಡಿಕೊಳ್ಳುತ್ತಿದ್ದಾನೆ. ಮೊನ್ನೆ ಕೇಂದ್ರ ಅರಣ್ಯ ಸಚಿವ ಮೈಸೂರಿಗೆ ಬಂದಿದ್ದಾಗ ಮೋದಿ, ಅಮಿತ್ ಶಾ ಹಾಗೂ ಯಡ್ಡಿಯನ್ನು ಮೆಚ್ಚಿಸಲು ತ್ರಿಮೂರ್ತಿಗಳ (ನರೇಂದ್ರ ಮೋದಿ, ಅಮಿತ್ ಶಾ, ಯಡಿಯೂರಪ್ಪ) ಮುಂದೆ ಸಿಎಂ (ಸಿದ್ದರಾಮಯ್ಯ) ಆಟ ನಡೆಯಲ್ಲ ಎಂದು ಅಬ್ಬರಿಸಿ ಬೊಬ್ಬಿರಿದಿದ್ದನ್ನು ಕಂಡು ಮೈಸೂರಿನ ಮಂದಿ ನಗಬಾರದ ಜಾಗದಿಂದೆಲ್ಲ ನಗಾಡಲು ಶುರು ಮಾಡಿದ್ದರು. ಒಟ್ಟಿನಲ್ಲಿ ಕರ್ನಾಟಕದಲ್ಲಿ ಕುಸಿದುಬೀಳುತ್ತಿರುವ ಬಿಜೆಪಿ ಸೌಧಕ್ಕೆ ಪೇಪರ್ ಸಿಮ್ಮ ತನ್ನ ಪಾಲಿನ ಗುದ್ದಲಿ ಏಟುಗಳನ್ನು ಜೋರಾಗೇ ಗುಮ್ಮುತ್ತಿದ್ದಾನೆ.

■ ಶರ

...ಬಿಡಿಎ ಉಪಾಯುಕ್ತರಾಗಿದ್ದ ಗೌರಿಶಂಕರ್ 2010ರ ...ನ್ 24ರಂದು ಸ್ಪಷ್ಟವಾಗೇ ಸರ್ಕಾರಕ್ಕೆ ತಮ್ಮ ವಿಶೇಷ ...ನವಿಯಲ್ಲಿ 'ಇದು ಬಡಾವಣೆಯ ಮಧ್ಯಭಾಗದ ...ಮೀನಾದ್ದರಿಂದ ಅಧಿಸೂಚನೆಯಿಂದ ಕೈಬಿಡುವುದು ...ಧ್ಯವಿಲ್ಲ ಮತ್ತು ಇಂಥ ಜಮೀನನ್ನು ಭೂಸ್ವಾಧೀನದಿಂದ ...ಬಿಟ್ಟು ಕಾರಂತ ಬಡಾವಣೆಯನ್ನು ನಿರ್ಮಿಸುವುದು ...ಧ್ಯವೇ ಇಲ್ಲ' ಎಂದು ಹಿಂಬರಹ ಸಲ್ಲಿಸುತ್ತಾರೆ.

ಇಷ್ಟಾಗಿಯೂ ರಾಜ್ಯ ಸರ್ಕಾರಕ್ಕೆ ಕಾರಂತ ಬಡಾವಣೆಯ ...ಸೂಚನೆಯ ಮೇಲೆ ಯಾವುದೇ ಅಧಿಕಾರವಿರಲಿಲ್ಲ. ...ಕೋರ್ಟ್ ಮತ್ತು ಸುಪ್ರೀಂಕೋರ್ಟ್‌ನ ಯಾವೊಂದು ...ಶನವನ್ನೂ ಯಡಿಯೂರಪ್ಪ ಲೆಕ್ಕಕ್ಕಿಡಲಿಲ್ಲ. ಬೆಂಗಳೂರು ...ವೃದ್ಧಿ ಪ್ರಾಧಿಕಾರದ ಮುಂದೆ ಈ ಬಗ್ಗೆ ಕಾಟಾಚಾರಕ್ಕೂ ...ಯವನ್ನು ಮಂಡಿಸಲಿಲ್ಲ. ಖುದ್ದು ಮುಖ್ಯಮಂತ್ರಿಗೇ ಭೂಸ್ವಾಧೀನದ ಮೇಲಾಗಲಿ, ಬಿಡಿಎ ಮೇಲಾಗಲಿ ಈ ಸಂಬಂಧ ಯಾವುದೇ ಅಧಿಕಾರವಿಲ್ಲದಿದ್ದರೂ 2010ರ ಜೂನ್ 24ರಂದು ಬಿಡಿಎ ಸಲ್ಲಿಸಿದ್ದ ಆಕ್ಷೇಪಣೆಗಳೆಲ್ಲವನ್ನೂ ಕಸದಬುಟ್ಟಿಗೆಸೆದ ಯಡ್ಡಿ 257 ಎಕರೆ 20 ಗುಂಟೆ ಜಮೀನಿನ ಡಿನೋಟಿಫಿಕೇಷನ್‌ಗೆ ಆದೇಶ ಹೊರಡಿಸಿಯೇ ಬಿಟ್ಟರು.

ಯಡ್ಡಿಯ ದುರಾಸೆ, ಭ್ರಷ್ಟಾಚಾರ ಮತ್ತು ರಿಯಲ್ ಎಸ್ಟೇಟ್ ಕಾರಸ್ಥಾನದ ಫಲವಾಗಿ ಕಾರಂತ ಬಡಾವಣೆಗೆಂದು ಬಿಡಿಎ ಅಧಿಸೂಚನೆ ಹೊರಡಿಸಿದ ಮೂರೂವರೆ ಸಾವಿರ ಎಕರೆ ಭೂಮಿಯ ಇಡೀ ಭೂಸ್ವಾಧೀನ ಪ್ರಕ್ರಿಯೆಯೇ ನೆನೆಗುದಿಗೆ ಬಿತ್ತು. ಅಂತಿಮ ಅಧಿಸೂಚನೆಯನ್ನೇ ಬಿಡಿಎ ಕೈಬಿಟ್ಟಿತು. 18 ಸಾವಿರಕ್ಕೂ ಅಧಿಕ ನಿವೇಶನದಾರರಿಗೆ ಮೋಸ, ಬಿಡಿಎಗೆ ಸಹಸ್ರಾರು ಕೋಟಿಯ ನಷ್ಟ ಮತ್ತು



ಕೆಲವೇ ಕೆಲವು ಭೂಕಂಟಕರ ಪಾಲಿಗೆ ಮಾರಿಹಬ್ಬವಾಗಿ ಪರಿಣಮಿಸಿತ್ತು ಕಾರಂತ ಬಡಾವಣೆಯೆಂಬ ಕಪಟ ನಾಟಕ.


ಈ ಬಗ್ಗೆ ಲೋಕಾಯುಕ್ತಕ್ಕೆ ದೂರುಗಳು ಬಂದವು. ನಿವೇಶನದಾರರು ಬೀದಿಗಿಳಿದರು. ಪತ್ರಿಕೆ/ಟೀವಿಗಳಲ್ಲಿ ತನಿಖಾ ವರದಿಗಳಾದವು. ಇದೆಲ್ಲದರ ಪ್ರತಿಫಲವೆಂಬಂತೆ ಯಡ್ಡಿಯೇ ಜೈಲು ಪಾಲಾದರು. ಯಡ್ಡಿಯ ಉತ್ತರಾಧಿಕಾರಿಯಾಗಿ ಮುಖ್ಯಮಂತ್ರಿಯಾದ ಸದಾನಂದಗೌಡರು ಸದನದಲ್ಲಿ ವಿರೋಧಿ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳ ಪ್ರತಿಭಟನೆಯನ್ನೇ ಎದುರಿಸಬೇಕಾಯಿತು. ಈ ಬಗ್ಗೆ ಕೂಲಂಕಷ ತನಿಖೆ ನಡೆಸಿ ವರದಿ ನೀಡುವಂತೆ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಉಮೇಶರನ್ನು ನೇಮಿಸಲಾಯಿತು. ಉಮೇಶ್ ನೀಡಿದ ವರದಿಯಲ್ಲೂ, ಮುಖ್ಯಮಂತ್ರಿಯಾಗಿದ್ದ ಯಡ್ಡಿಯನ್ನೇ ಇಡೀ ದುರಂತದ ಮೂಲಪುರುಷನೆಂಬಂತೆ ವಿವರಿಸಲಾಗಿತ್ತು. ಇನ್ನೂ ದುರಂತವೆಂದರೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿ 5 ವರ್ಷಗಳೇ ಕಳೆದರೂ ಅಂತಿಮ ಅಧಿಸೂಚನೆ ಹೊರಡಿಸುವುದು ಬಿಡಿಎಗೆ ಸಾಧ್ಯವಾಗದೇ ಹೋಯಿತು. ಇದರ ಫಲವಾಗಿ ಇಡೀ ಕಾರಂತ ಬಡಾವಣೆಯ ಯೋಜನೆಯೇ ರದ್ದಾಯಿತು. ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಐದು ವರ್ಷಗಳೇ ಕಳೆದರೂ ಅಂತಿಮ ಅಧಿಸೂಚನೆ ಹೊರಡಿಸಲಿಲ್ಲವಾದ್ದರಿಂದ ಹೈಕೋರ್ಟ್ ಭೂಮಾಲಿಕರ ಅರ್ಜಿಯನ್ನು ಪರಿಗಣಿಸಿ ಪ್ರಾಥಮಿಕ ಅಧಿಸೂಚನೆಯನ್ನೇ ರದ್ದುಪಡಿಸಿತು.

ಕಾರಂತ ಬಡಾವಣೆಯೇ ಮಂಗಮಾಯ. ಸಹಸ್ರಾರು ನಿವೇಶನದಾರರಿಗೂ ಪಂಗನಾಮ. ಬಿಡಿಎ ಹೆಸರಲ್ಲಿ ನಡೆದ ಸಹಸ್ರಾರು ಕೋಟಿ ಲೂಟಿಯ ಕಪಟ ನಾಯಕರ ಸೂತ್ರಧಾರಿ ಯಡ್ಡಿಯಾದರೆ ಅದರ ಫಲಾನುಭವಿಗಳು ಖದೀಮ ಲ್ಯಾಂಡ್ ಡೀಲರುಗಳು, ಪುಢಾರಿಗಳು, ಬ್ರೋಕರುಗಳು ಮತ್ತು ಅಧಿಕಾರಿಗಳು. ಈ ಬಗ್ಗೆ ಆಗ ವಿರೋಧಿ ನಾಯಕರಾಗಿದ್ದ ಸಿದ್ದರಾಮಯ್ಯ, ಕುಮಾರಸ್ವಾಮಿ, ಉಗ್ರಪ್ಪ ಎಲ್ಲರೂ ಸದನದಲ್ಲಿ ಪ್ರತಿಭಟಿಸಿದವರೇ. ಸದನದಲ್ಲಿ ತನ್ನ ತಲೆ ಉಳಿಸಿಕೊಳ್ಳಲು ಸಿಐಡಿ ತನಿಖೆಯ ಭರವಸೆಕೊಟ್ಟಿದ್ದು ಸದಾನಂದಗೌಡರು. ತಮ್ಮ ಕೈಬರಹದಲ್ಲೇ ಸಿಐಡಿ ತನಿಖೆಗೆ ಷರಾ ಬರೆದ ಸದಾನಂದಗೌಡರು ಈಗ ಮನಸ್ಸಲ್ಲೇ ನಗುತ್ತಿರಬಹುದು. ಆವತ್ತು ಸಿಐಡಿ ತನಿಖೆಗೆ ಆದೇಶವೇನೋ ಕೊಟ್ಟರಾದರೂ ಅದು ಸಿಐಡಿಯನ್ನು ತಲುಪದ ಹಾಗೆ ವ್ಯವಸ್ಥಿತವಾಗಿ ನೋಡಿಕೊಂಡಿದ್ದೂ ಸದಾನಂದಗೌಡರೇ.


ಈಗ ಗೋರಿಯೊಳಗಿನಿಂದ ಹೆಣ ಅಗೆದು ತೆಗೆದಂತೆ ಡಾ. ಡಿ.ಅಯ್ಯಪ್ಪ ಎಂಬ ಒಂದಾನೊಂದು ಕಾಲದ ಯಡ್ಡಿಯ ಅನುಯಾಯಿಯೇ ಎಸಿಬಿಗೆ ದೂರು ದಾಖಲಿಸಿದ್ದಾರೆ. ಯಡ್ಡಿಯ ಮಾಜಿ ಶಿಷ್ಯನೇ ದೂರು ಸಲ್ಲಿಸಿದ ಮೇಲೆ ಎಸಿಬಿ ತಾನೇ ಏನು ಮಾಡಲು ಸಾಧ್ಯ?

ಎಫ್‌ಐಆರ್ ದಾಖಲಾಗಿದೆ, ಯಡ್ಡಿಯ ಪಿತ್ಥವೂ ಕೆರಳಿದೆ ಮತ್ತು ಶೆಟ್ಟರ್, ಈಶ್ವರಪ್ಪ, ಅಶೋಕ್, ಕರಂದ್ಲಾಜೆ ಥರದ ಬಿಜೆಪಿ ನಾಯಕ ಮಣಿಗಳು ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಆದರೆ ಇವರ್ಯಾರಿಗೂ ಅರ್ಥವಾಗದ ಪ್ರಶ್ನೆಯೆಂದರೆ ಕಾರಂತ ಬಡಾವಣೆಯನ್ನು ಕದ್ದವರು ಯಾರು ಮತ್ತು 18 ಸಾವಿರಕ್ಕೂ ಅಧಿಕ ಮಂದಿ ನಿವೇಶನದಾರರಿಗೆ ಉತ್ತರ ಹೇಳುವವರ್ಯಾರು?

■ ರಾ. ಸೋಮನಾಥ್


FIRST INFORMATION REPORT

ಯಡ್ಡಿ ವಿರುದ್ಧ ಎಫ್‌ಐಆರ್


ಜನ ಸಾಮಾನ್ಯರ ವೇದಿಕೆ

ಅಯ್ಯಪ್ಪ ನೀಡಿದ ದೂರು

ನ್ಯಾಯಾಂಗದಲ್ಲಿ ಅಹಿತಕರ ಬೆಳವಣಿಗೆಗಳು



■ ಸುರೇಶ್ ಭಟ್ ಬಾಕ್ರಬೈಲ್

'ನ್ಯಾಯಾಧೀಶರು ನಿಷ್ಠುರರಾಗಿರಬೇಕು, ಕಟ್ಟುನಿಟ್ಟಾಗಿರಬೇಕು, ಆರ್ಥಿಕ ಅಥವಾ ರಾಜಕೀಯ ಅಧಿಕಾರದ ಮುಂದೆ ತಲೆಬಾಗದೆ ಕಾನೂನಿನ ಆಡಳಿತದ ಪ್ರಧಾನ ನೀತಿಯನ್ನು ಎತ್ತಿಹಿಡಿಯಬೇಕು' -ಮೊದಲನೆ ನ್ಯಾಯಾಧೀಶರ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಯಾವುದೇ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದರೂ ಅದರ ನಾಲ್ಕು ಆಧಾರಸ್ತಂಭಗಳಲ್ಲಿ ಒಂದಾದ ನ್ಯಾಯಾಂಗ ಯಾರಿಗೂ ಬಗ್ಗದೆ ತಗ್ಗದೆ ನ್ಯಾಯದ ಪರವಾಗಿ, ಸಂವಿಧಾನದ ಪರವಾಗಿ, ಜನಪರವಾಗಿ ಕಾರ್ಯಾಚರಿಸುತ್ತದೆ ಎಂದು ನಿರೀಕ್ಷಿಸಲಾಗುತ್ತದೆ. ಆದರೆ ಭಾರತದಲ್ಲಿ ಇಂದು ಆ ನಂಬಿಕೆಯ ಬುಡವನ್ನೆ ಅಲುಗಾಡಿಸುವಂತಹ ಘಟನೆಗಳು ಸಂಭವಿಸುತ್ತಿವೆ. ಕಳೆದ ಮೂರು ವರ್ಷಗಳಿಂದೀಚೆಗೆ ನ್ಯಾಯಾಂಗದಲ್ಲಿ ನಡೆಯುತ್ತಿರುವ ಕೆಲವೊಂದು ವಿದ್ಯಮಾನಗಳು ಜನ ಅದರ ಮೇಲಿಟ್ಟಿರುವ ಭರವಸೆಯನ್ನು ಕಳೆದುಕೊಳ್ಳುವ ಹಾಗಿವೆ. ಉದಾಹರಣೆಗೆ ಬಿಜೆಪಿ ರಾಷ್ಟ್ರಾಧ್ಯಕ್ಷ ಅಮಿತ್ ಶಾ ಒಳಗೊಂಡಿದ್ದ ಪ್ರಕರಣವೊಂದರಲ್ಲಿ ಆತನಿಗೆ ಅನುಕೂಲಕರವಾದ ತೀರ್ಪು ನೀಡಿದ್ದ ಗುಜರಾತ್ ಹೈಕೋರ್ಟಿನ ನ್ಯಾ। ಎಂ.ಆರ್.ಶಾರನ್ನು ಹೊರರಾಜ್ಯಗಳಿಗೆ ವರ್ಗಾವಣೆ ಮಾಡಲು ಮೋದಿ ಸರ್ಕಾರ ಸಮ್ಮತಿಸಿಲ್ಲ, ಕುಟುಂಬಸ್ಥರು ಆರ್ಥಿಕವಾಗಿ ಅನುಚಿತ ಕೃತ್ಯ ಎಸಗಿರುವ ಆರೋಪ ಎದುರಿಸುತ್ತಿರುವ ನ್ಯಾ। ಹೇಮಂತ್ ಗುಪ್ತಾರನ್ನು ವ್ಯಾಪಕ ಭ್ರಷ್ಟಾಚಾರದ ಆರೋಪಗಳಿರುವ ಮಧ್ಯಪ್ರದೇಶಕ್ಕೆ ಮುಖ್ಯ ನ್ಯಾಯಾಧೀಶರನ್ನಾಗಿ ನೇಮಿಸಲಾಗಿದೆ. ಕರ್ನಾಟಕ ಹೈಕೋರ್ಟಿನ ನ್ಯಾ। ಜಯಂತ್ ಪಟೇಲರಿಗೆ ಮುಖ್ಯ ನ್ಯಾಯಾಧೀಶರ ಹುದ್ದೆ ತಪ್ಪಿಹೋಗಲು ಇಶ್ರತ್ ಜಹಾನ್ ಪ್ರಕರಣದಲ್ಲಿ ನೀಡಿದ ಆದೇಶವೆ ಕಾರಣ ಎನ್ನಲಾಗುತ್ತಿದೆ. ಉತ್ತರಾಖಂಡದಲ್ಲಿ ಸರಕಾರ ರಚನೆಯ ಸಂದರ್ಭದಲ್ಲಿ ನ್ಯಾ। ಕೆ.ಎಂ. ಜೋಸೆಫ್‌ರ ತೀರ್ಮಾನ ಮೋದಿ ಸರ್ಕಾರಕ್ಕೆ ರುಚಿಸದ ಕಾರಣ ಅವರನ್ನು ಸುಪ್ರೀಂಕೋರ್ಟಿಗೆ ನೇಮಕ ಮಾಡಲಾಗಿಲ್ಲ ಎನ್ನಲಾಗಿದೆ. ನಕಲಿ ಎನ್ಕೌಂಟರ್ ಪ್ರಕರಣಗಳಲ್ಲಿ ಕಳಂಕಿತ ಪೊಲೀಸ್ ಅಧಿಕಾರಿಗಳು ಖುಲಾಸೆಗೊಳ್ಳುತ್ತಿದ್ದರೆ ಆತ್ಮ ಭಯೋತ್ಪಾದನೆ ಪ್ರಕರಣಗಳಲ್ಲಿ ಆರೋಪಿಗಳಾಗಿರುವ ಕೆಲವೊಂದು ಸಂಘ ಪರಿವಾರದ ಕಾರ್ಯಕರ್ತರು ಜಾಮೀನಿನ ಮೇಲೆ ಬಿಡುಗಡೆಗೊಳ್ಳುತ್ತಿದ್ದಾರೆ. ರಾಜಸ್ತಾನ ಹೈಕೋರ್ಟಿನ ನ್ಯಾಯಾಧೀಶರೊಬ್ಬರು ತಾನು ನಿವೃತ್ತಿಯಾಗುವ ದಿನದಂದು ದನವನ್ನು ರಾಷ್ಟ್ರೀಯ ಪ್ರಾಣಿಯಾಗಿಸಬೇಕೆಂದು ಸೂಚಿಸಿದ ಪ್ರಸಂಗ ನಡೆದಿದೆ. ಮದ್ರಾಸ್ ಹೈಕೋರ್ಟಿನ ಇತ್ತೀಚಿನ ತೀರ್ಪೊಂದು ತಮಿಳ್ನಾಡಿನ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು, ಸರಕಾರಿ ಕಚೇರಿಗಳು, ಸ್ಟೇಡಿಯಂಗಳಂತಹ ಜಾಗಗಳಲ್ಲಿ ವಂದೇ ಮಾತರಂ ಹಾಡುವುದನ್ನು ಕಡ್ಡಾಯಗೊಳಿಸಿದೆ. ಇದಕ್ಕೂ ಮುಂಚೆ ಸುಪ್ರೀಂ ಕೋರ್ಟಿನ ಪೀಠವೊಂದು ಸಿನಿಮಾ ಹಾಲ್‌ಗಳಲ್ಲಿ ರಾಷ್ಟ್ರಗೀತೆಯನ್ನು ನುಡಿಸಬೇಕೆಂದು ಆದೇಶಿಸುವುದರೊಂದಿಗೆ ಎಲ್ಲರೂ ಕಡ್ಡಾಯವಾಗಿ ಎದ್ದು ನಿಲ್ಲಬೇಕೆಂದು ಸೂಚಿಸಿದೆ. ಇದನ್ನು ನೋಡಿದರೆ ಕಾನೂನುಗಳ ವ್ಯಾಖ್ಯಾನಕ್ಕೆ ಸೀಮಿತವಾಗಬೇಕಿರುವ ನ್ಯಾಯಾಲಯ ತನ್ನ ವ್ಯಾಪ್ತಿಯನ್ನು ಮೀರಿ ಆಳುವ ಪ್ರಭುತ್ವದ ಪ್ರೀತಿಪಾತ್ರ ವಿಷಯಗಳ ಮೇಲೆ ಕಾನೂನು ರಚಿಸಲು ಹೊರಟಿರುವ ಹಾಗಿದೆ. ಇತ್ತೀಚಿನ ದಿನಗಳಲ್ಲಿ ಜನಗಣಮನ, ವಂದೇ ಮಾತರಂ ಹಾಡುಗಳಿಗೆ ಸಂಬಂಧಿಸಿದಂತೆ ಮಹಾರಾಷ್ಟ್ರ, ಹರ್‍ಯಾಣಾ ಮತ್ತಿತರ ರಾಜ್ಯಗಳಲ್ಲಿ ಆರಂಭವಾಗಿರುವ ಗುಂಪು ಹಲ್ಲೆಗಳಿಗೂ ಇಂತಹ ತೀರ್ಪುಗಳಿಗೂ ಸಂಬಂಧವಿಲ್ಲ ಎಂದು ಹೇಳಬಲ್ಲೆವೆ?

ಭಾರತದ ಸರ್ವೋಚ್ಚ ನ್ಯಾಯಾಲಯ

ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿನ ಇತ್ತೀಚಿನ ಕೆಲವು ಬೆಳವಣಿಗೆಗಳು ತೀರ ನಿರಾಶಾದಾಯಕವಾಗಿವೆ ಎಂದೇ ಹೇಳಬೇಕಾಗಿದೆ. ಸ್ವಲ್ಪ ಸಮಯದ ಹಿಂದೆ ಇದೇ ಸರ್ವೋಚ್ಚ ನ್ಯಾಯಾಲಯ ತನ್ನ ಚಾರಿತ್ರಿಕ ತೀರ್ಪೊಂದರಲ್ಲಿ "ನಮ್ಮದು ಸ್ವತಂತ್ರ ಮತ್ತು ಪ್ರಜಾಸತ್ತಾತ್ಮಕ ದೇಶ. ಇಲ್ಲಿ ವ್ಯಕ್ತಿ ಪ್ರಾಪ್ತವಯಸ್ಕನಾ/ಳಾದ ಬಳಿಕ ತನಗಿಷ್ಟ ಬಂದವಳ/ನ ಜತೆ ಮದುವೆಯಾಗಬಹುದು. ಅಂತರ್ಜಾತೀಯ, ಅಂತರ್ಧರ್ಮೀಯ ವಿವಾಹಕ್ಕೆ ಸಮ್ಮತಿಸದ ತಂದೆತಾಯಂದಿರು ಹೆಚ್ಚೆಂದರೆ ಅವರೊಂದಿಗಿನ ಸಾಮಾಜಿಕ ಸಂಬಂಧಗಳನ್ನು ಕಡಿದುಕೊಳ್ಳಬಹುದು... ವಾಸ್ತವವಾಗಿ ಅಂತರ್ಜಾತೀಯ ವಿವಾಹಗಳು ದೇಶದ ಹಿತಾಸಕ್ತಿಯಲ್ಲಿವೆ ಏಕೆಂದರೆ ಅವು ಜಾತಿ ವ್ಯವಸ್ಥೆಯನ್ನು ನಾಶಪಡಿಸಲಿವೆ" ಎಂದು ಸ್ಪಷ್ಟವಾಗಿ ಹೇಳಿದೆ. ಇನ್ನೂ ಕೆಲವು ವರ್ಷಗಳ ಹಿಂದಕ್ಕೆ ಹೋದರೆ ಸರ್ವೋಚ್ಚ ನ್ಯಾಯಾಲಯ ಅಂದು ನೀಡಿರುವ ತೀರ್ಪೊಂದರಲ್ಲಿ ಪ್ರಾಪ್ತವಯಸ್ಕ ಯುವತಿಯೊಬ್ಬಳಿಗೆ ತಾನು ವಿವಾಹವಾಗಲಿಚ್ಛಿಸಿದ ವ್ಯಕ್ತಿಯ ಜೊತೆ ಹೋಗಲು ಅನುಮತಿ ನೀಡಿದೆ. ರಾಜಸ್ತಾನ ಹೈಕೋರ್ಟಿನ ನ್ಯಾಯಾಧೀಶ ಆರ್.ಎಸ್.ರಾಠೋಡ್‌ರ ಮಗಳಾದ ಆಕೆ ಬೇರೊಂದು ಜಾತಿಗೆ ಸೇರಿದ ಯುವಕನನ್ನು ವಿವಾಹವಾಗಲು ಬಯಸಿದ್ದ ಕಾರಣಕ್ಕೆ ಆಕೆಯನ್ನು ಗೃಹಬಂಧನದಲ್ಲಿರಿಸಲಾಗಿತ್ತು.



20 ವರ್ಷಗಳ ಕೆಳಗೆ ಇದೇ ರೀತಿಯಾದ ಇನ್ನೊಂದು ಪ್ರಕರಣ ನಡೆದಿದೆ. ದಿಲ್ಲಿಯಲ್ಲಿ ಜಾಟ್ ಸಿಖ್ ಯುವತಿ ಮತ್ತು ಖತ್ರಿ ಹಿಂದೂ ಯುವಕನ ಅಂತರ್ಜಾತೀಯ ಪ್ರೇಮ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ಅವರ ಪರವಾಗಿ ಆದೇಶ ನೀಡಿತ್ತು. ಆದರೆ ಕೋರ್ಟಿನ ಆದೇಶಕ್ಕೆ ಸೊಪ್ಪುಹಾಕದ ಪಂಜಾಬ್ ಪೊಲೀಸರು ಜೋಡಿಯನ್ನು ನ್ಯಾಯಾಲಯದ ಆವರಣದ ಹೊರಗಿನಿಂದ ಅಪಹರಿಸಿದ್ದರು ಎಂಬ ಆರೋಪಗಳಿವೆ. ಆಗ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಎಂ.ಎನ್. ವೆಂಕಟಾಚಲಯ್ಯ ನೇರವಾಗಿ ಪಂಜಾಬ್ ಪೊಲೀಸ್ ಮುಖ್ಯಸ್ಥ ಮತ್ತು ದಿಲ್ಲಿ ಪೊಲೀಸರಿಗೆ ಎಚ್ಚರಿಕೆ ನೀಡಿ ಗಂಭೀರ ಪರಿಣಾಮ ಎದುರಿಸಬೇಕಾಗಿ ಬರಬಹುದು ಎಂದ ಬೆನ್ನಲ್ಲೆ ಜೋಡಿಯನ್ನು ಬಿಟ್ಟುಬಿಡಲಾಯಿತು. ಬಳಿಕ ಅವರಿಬ್ಬರೂ ವಿವಾಹವಾದರು.

ಆದರೆ ಇಂದು ಏನಾಗುತ್ತಿದೆ? ಕೇರಳದಲ್ಲಿ ಓರ್ವ ಹಿಂದೂ ಯುವತಿ ಮತ್ತು ಮುಸ್ಲಿಂ ಯುವಕನ ನಡುವಿನ ಅಂತರ್ಧರ್ಮೀಯ ಮದುವೆ ರಾಷ್ಟ್ರೀಯ ಭದ್ರತೆಯ ಪ್ರಶ್ನೆಯಾಗಿ ಪರಿಣಮಿಸಿರುವುದನ್ನು ಕಾಣುತ್ತಿದ್ದೇವೆ. ಇದೇ ಮೇ ತಿಂಗಳಲ್ಲಿ ಈ ವಿವಾಹವನ್ನು ಅಸಿಂಧುಗೊಳಿಸಿದ ಕೇರಳ ಹೈಕೋರ್ಟಿನ ತೀರ್ಪನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ದೂರು ನೀಡಲಾಗಿತ್ತು. ಆದರೆ ಸರ್ವೋಚ್ಚ ನ್ಯಾಯಾಲಯ ಏನು ಮಾಡಿತು? ಯುವತಿ ಪ್ರಾಪ್ತವಯಸ್ಕಳಾಗಿದ್ದರೂ ಸ್ವಂತ ನಿರ್ಧಾರ ತೆಗೆದುಕೊಳ್ಳಲು ಸಮರ್ಥಳಾಗಿದ್ದರೂ ಆಕೆಯನ್ನು ಮಾತನಾಡಿಸಿ ಆಕೆಯ ಅಭಿಪ್ರಾಯ ತಿಳಿಯದೆ ಪ್ರಕರಣವನ್ನು ಸೀದಾ ಎನ್‌ಐಎ ತನಿಖೆಗೊಪ್ಪಿಸಿತು! ಆದರೆ ಕಾನೂನಿನಲ್ಲಿ ಆಕೆಯ ಮತಾಂತರವಾಗಲಿ, ಆಕೆಯ ತಂದೆಯ ಆಕ್ಷೇಪಗಳಾಗಲಿ; ಆಕೆ ಉಗ್ರಗಾಮಿ ಸಂಘಟನೆಗಳಿಗೆ ಸೇರಬಹುದು ಎಂಬ ವಾದವಾಗಲಿ, ಆಕೆಯ ಪತಿಗೆ ಉಗ್ರಗಾಮಿ ಸಂಘಟನೆಗಳ ಜೊತೆ ಸಂಬಂಧ ಇರಬಹುದು ಎಂಬ ವಾದವಾಗಲಿ ಅವರಿಬ್ಬರು ಪರಸ್ಪರ ಒಪ್ಪಿ ಆದ ಮದುವೆಯ ರದ್ದತಿಗೆ ಕಾರಣಗಳಾಗಲಾರವು. ಇಂತಹ ಸಂದರ್ಭಗಳಲ್ಲಿ ಮದುವೆ ಯನ್ನು ರದ್ದುಗೊಳಿಸುವ ಅಧಿಕಾರ ನ್ಯಾಯಾಲಯಗಳಿಗೆ ಇಲ್ಲವೆಂದು ಕಾನೂನುತಜ್ಞರು ಅಭಿಪ್ರಾಯಿಸುತ್ತಾರೆ.

ಹಾದಿಯಾಳ ಮದುವೆ ನ್ಯಾಯಸಮ್ಮತವೆ ಅಲ್ಲವೆ ಎಂಬುದನ್ನು ತೀರ್ಮಾನಿಸುವುದಕ್ಕೂ ಮುನ್ನ ಎನ್‌ಐಎ ತನಿಖೆ ಅತ್ಯಗತ್ಯವೆಂದು ಹೇಳಿರುವ ನ್ಯಾಯಾಲಯದ ನಿರ್ಧಾರ ದೇಶಾದ್ಯಂತ ಪೋಷಕರೊಲ್ಲದ ತೀರ್ಮಾನ ತೆಗೆದುಕೊಳ್ಳುವ ಪ್ರಾಪ್ತವಯಸ್ಕ ಮಹಿಳೆಯರ ಬದುಕಿನಲ್ಲಿ ಸ್ಥಳೀಯ ಅಧಿಕಾರಿಗಳ ಅನಗತ್ಯ ಮಧ್ಯಪ್ರವೇಶ ಮತ್ತು ಕಿರುಕುಳಕ್ಕೆ ದಾರಿ ಮಾಡಿಕೊಟ್ಟಂತಾಗಬಹುದು. ಅಂತರ್ಜಾತೀಯ, ಅಂತರ್ಧರ್ಮೀಯ ವಿವಾಹಗಳನ್ನು ಅಥವಾ ಅಸಾಂಪ್ರದಾಯಿಕ ವಿವಾಹಗಳನ್ನು ತಡೆಯಲು ಮುಕ್ತ ಪರವಾನಗಿ ನೀಡಿದಂತಾಗಬಹುದು. ಇದು "ನಿಶ್ಚಯವಾಗಿಯೂ ಭಯಾನಕ" ವಿದ್ಯಮಾನ ಎನ್ನುತ್ತಾರೆ ಹಿರಿಯ ವಕೀಲರಾದ ಸಂಜಯ ಹೆಗ್ಡೆ "ಇಲ್ಲಿ ಯುವತಿ ಮತ್ತು ಆಕೆಯ ವಿವಾಹವೆ ಪ್ರಧಾನ ವಿಷಯ. ತನಿಖೆಯ ಅಗತ್ಯವೇನಿದೆ?..." ಎಂದು ಪ್ರಶ್ನಿಸುತ್ತಾರೆ ಮತ್ತೋರ್ವ ಹಿರಿಯ ವಕೀಲ ಆನಂದ್ ಗ್ರೋವರ್.

ಭಾರತದ ನೂತನ ಪ್ರಧಾನ ನ್ಯಾಯಮೂರ್ತಿ

ಭಾರತದ ಪ್ರಧಾನ ನ್ಯಾಯಮೂರ್ತಿಯವರು ಓರ್ವ ಸಾಂವಿಧಾನಿಕ ಅಧಿಕಾರಿಯಾಗಿ ಸಂಕೀರ್ಣ ಸಾಂವಿಧಾನಿಕ, ಕಾನೂನಿನ ಆಡಳಿತ ಹಾಗೂ ದೇಶದ ಆಡಳಿತದ ಮೇಲೆ ಪರಿಣಾಮ ಬೀರುವ, ರಾಜಕೀಯವಾಗಿ ಸೂಕ್ಷ್ಮವಾದ ಮತ್ತು ಸುಮಾರು 135 ಕೋಟಿ ಭಾರತೀಯರ ಬದುಕು ಮತ್ತು ಸ್ವಾತಂತ್ರ್ಯಗಳನ್ನು ತಟ್ಟುವ ವಿಷಯಗಳನ್ನೊಳಗೊಂಡ ಪ್ರಕರಣಗಳಲ್ಲಿ ನ್ಯಾಯದಾನ ಮಾಡುತ್ತಾರೆ.

ಹಾಲಿ ಪ್ರಧಾನ ನ್ಯಾಯಮೂರ್ತಿ ಖೇಹರ್‌ರವರು ತನ್ನ ಉತ್ತರಾಧಿಕಾರಿಯ ಸ್ಥಾನಕ್ಕೆ ನ್ಯಾ। ದೀಪಕ್ ಮಿಶ್ರಾರ ಹೆಸರನ್ನು ಸೂಚಿಸಿದ ಬಳಿಕ ಕೇಂದ್ರ ಸರ್ಕಾರ ಆ ನೇಮಕಾತಿಯನ್ನು ದೃಢಪಡಿಸಿದೆ. ನ್ಯಾ। ಮಿಶ್ರಾ ಆಗಸ್ಟ್ 28ರಂದು ಭಾರತದ 45ನೆ ಪ್ರಧಾನ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. 90ರ ದಶಕದಲ್ಲಿ ಪ್ರಧಾನ ನ್ಯಾಯಮೂರ್ತಿ ಆಗಿದ್ದ ರಂಗನಾಥ ಮಿಶ್ರಾರ ಸೋದರಳಿಯನಾಗಿರುವ ನ್ಯಾ। ಮಿಶ್ರಾ ನ್ಯಾಯಾಧೀಶರ ಸ್ಥಾನಕ್ಕೇರಿ 20ಕ್ಕೂ ಅಧಿಕ ವರ್ಷಗಳು ಸಂದಿವೆ. ಸುಮಾರು 6 ವರ್ಷಗಳಿಂದೀಚೆಗೆ ಅವರು ಸರ್ವೋಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿದ್ದಾರೆ. ಹಲವು ಪ್ರಮುಖ ಪ್ರಕರಣಗಳಲ್ಲಿ ಅವರು ನೀಡಿರುವ ತೀರ್ಪುಗಳ ತಾತ್ಪರ್ಯವನ್ನು ನೋಡಿದಾಗ ಪ್ರಧಾನ ನ್ಯಾಯಮೂರ್ತಿಯಾದ ಬಳಿಕ ಅವರಿಂದ ಏನನ್ನು ನಿರೀಕ್ಷಿಸಬಹುದು ಎಂಬುದನ್ನು ಸೂಚಿಸುವ ಹಲವಾರು ಸುಳಿವುಗಳು ಲಭ್ಯವಾಗುತ್ತವೆ. ಇವು ಪ್ರಜೆಗಳ ಪಾಲಿಗೆ ಅಷ್ಟೇನೂ ಒಳ್ಳೆಯ ದಿನಗಳು ಕಾದಿಲ್ಲ ಎಂಬ ಮುನ್ನೆಚ್ಚರಿಕೆಯನ್ನು ನೀಡುವಂತಿವೆ. ಈ ಸಂದರ್ಭದಲ್ಲಿ ಹಾಲಿ ಪ್ರಧಾನ ನ್ಯಾಯಮೂರ್ತಿ ಖೇಹರ್‌ರವರೆ 'ಆಯ್ಕೆಯಲ್ಲಿ ತಪ್ಪುಗಳಾದರೆ ದೇಶದಲ್ಲಿ ಒಂದು ರೀತಿಯ ಅವ್ಯವಸ್ಥೆ ಉಂಟಾಗಬಹುದು' ಎಂದು 'ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ' ಪ್ರಕರಣದ ಸಂದರ್ಭದಲ್ಲಿ ಎಚ್ಚರಿಕೆ ನೀಡಿರುವುದನ್ನು ಜ್ಞಾಪಿಸಿಕೊಳ್ಳಬೇಕಿದೆ.

ಅವ್ಯವಹಾರದ ಆರೋಪಗಳು

ನ್ಯಾ। ದೀಪಕ್ ಮಿಶ್ರಾ ಹಿಂದೆ ಲಾಯರ್ ಆಗಿದ್ದ ಕಾಲದಲ್ಲಿ 1979ರಲ್ಲಿ ಸರಕಾರದಿಂದ 2 ಎಕರೆ ಕೃಷಿಭೂಮಿಯನ್ನು ಗೇಣಿಗೆ ಪಡೆದುಕೊಂಡಿದ್ದ ಸಂದರ್ಭದಲ್ಲಿ ಸಲ್ಲಿಸಿದ್ದ ಅಫಿಡವಿತ್‌ನಲ್ಲಿ 'ತಾನು ಬ್ರಾಹ್ಮಣ ಜಾತಿಗೆ ಸೇರಿದವನಾಗಿದ್ದು ತಾನು ಮತ್ತು ತನ್ನ ಕುಟುಂಬ ಯಾವುದೆ ಇತರ ಜಮೀನನ್ನು ಹೊಂದಿಲ್ಲ' ಎಂದು ತಿಳಿಸಿದ್ದರು. ನಂತರ 1985ರಲ್ಲಿ ಕಟಕ್‌ನ ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟರು 'ಮಿಶ್ರಾ ಭೂರಹಿತ ವ್ಯಕ್ತಿ ಅಲ್ಲ... ಅವರು ತಪ್ಪು ವಿವರಣೆ ನೀಡಿ ಮೋಸ ಮಾಡಿದ್ದಾರೆ...' ಎಂದು ವರದಿ ನೀಡಿದ ಬಳಿಕ ಒಡಿಶಾ ಸರಕಾರ ಗುತ್ತಿಗೆಯನ್ನು ರದ್ದುಪಡಿಸಿತ್ತು. ಮುಂದೆ ಜನವರಿ 2012ರಲ್ಲಿ ಹೈಕೋರ್ಟಿನ ಆದೇಶದ ಮೇರೆಗೆ ಇಂತಹ ಅವ್ಯವಹಾರಗಳ ತನಿಖೆ ನಡೆಸಿದ ಸಿಬಿಐ ಮೇ 30, 2013ರಂದು ನೀಡಿದ ವರದಿ ಮಿಶ್ರಾ ತಪ್ಪೆಸಗಿರುವುದನ್ನು ಸಾಬೀತುಪಡಿಸುತ್ತದೆ. ಈ ರೀತಿಯಾಗಿ ಅಫಿಡವಿತ್‌ನಲ್ಲಿ ತಪ್ಪು ಹೇಳಿಕೆ ನೀಡುವುದು ಐಪಿಸಿ ಸೆಕ್ಷನ್ 199 ಮತ್ತು 200ರ ಅಡಿಯಲ್ಲಿ ಗರಿಷ್ಠ 7 ವರ್ಷ ಸಜೆ ಹಾಗೂ ದಂಡ ವಿಧಿಸಬಹುದಾದ ಗಂಭೀರ ಅಪರಾಧವಾಗಿದೆ.

ಅರುಣಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿ ಕಲಿಖೋ ಫುಲ್ ಆತ್ಮಹತ್ಯೆ ಪ್ರಕರಣದಲ್ಲಿ ಆತ ಸಾಯುವುದಕ್ಕೆ ಮೊದಲು ಬರೆದಿಟ್ಟ ಪತ್ರದಲ್ಲಿ ನ್ಯಾ। ಮಿ... ಹೆಸರಿನ ಉಲ್ಲೇಖ ಇದೆ. ಈ ಪ್ರಕರಣದಲ್ಲಿ ಇದು... ಯಾವುದೇ ನಿರ್ಧಾರಕ್ಕೆ ಬರಲಾಗಿಲ್ಲ.

ಇತ್ತೀಚಿನ ಪತ್ರಿಕಾ ವರದಿಗಳು ತಿಳಿಸುವಂತೆ ಮ... ಹೈಕೋರ್ಟ್ ನ್ಯಾಯಾಧೀಶರ ಸಮಿತಿಯೊಂದು ... ಹೈಕೋರ್ಟಿನ ಇಬ್ಬರು ಕಾರ್ಯನಿರತ ನ್ಯಾಯಾಧೀ... ಮೇಲಿನ ಆರೋಪಗಳ ತನಿಖೆಯನ್ನು ನಡೆಸಿದ... ನ್ಯಾ। ಮಿಶ್ರಾ ಹೆಸರು ಕೇಳಿಬಂದಿದೆ.

ಗಲ್ಲು ಶಿಕ್ಷೆ ಪ್ರಕರಣಗಳು

ನ್ಯಾ। ಮಿಶ್ರಾರವರು ಯಾಕೂಬ್ ಮೆನನ್ ... ನಿರ್ಭಯಾ ಅತ್ಯಾಚಾರ ಪ್ರಕರಣಗಳಲ್ಲಿ ಅಪರಾಧಿ... ಸಲ್ಲಿಸಿದ್ದ ಕ್ಷಮಾದಾನ ಅರ್ಜಿಗಳನ್ನು ಇತ್ಯರ್ಥಗೊಳಿಸಿ... ರೀತಿ ಬಹಳ ಅತೃಪ್ತಿಕರವಾಗಿದೆ. ಎರಡೂ ಪ್ರಕರಣ... ತೀರ್ಪು ಪೂರ್ವನಿರ್ಧರಿತ ಎಂಬಂತೆ ತೋರುತ್ತದೆ. ಅ... ತರ್ಕಕ್ಕಿಂತ ಶಾಬ್ದಿಕ ಆಡಂಬರವೆ ಜಾಸ್ತಿ ಇದೆ. ನಿರ್ಭ... ಅತ್ಯಾಚಾರದ ಮುಕೇಶ್ ವರ್ಸಸ್ ದಿಲ್ಲಿ ಸರಕಾರ ಪ್ರಕರ... ಅವರು ನೀಡಿರುವ ತೀರ್ಪು ಅಸಂಬದ್ಧವಾಗಿದ್ದು ಅ... ಆಳವಾದ ತರ್ಕ, ಎಚ್ಚರದ ಪರಾಮರ್ಶೆ ಇರಲಿಲ್ಲ. ತೀ... ಮೇಲೆ ನ್ಯಾಯಿಕ ತರ್ಕಕ್ಕಿಂತ ಜನಾಭಿಪ್ರಾ... ಪ್ರಭಾವವೆ ಹೆಚ್ಚಿರುವಂತೆ ಭಾಸವಾಗುತ್ತ...

ಯಾಕೂಬ್ ಮೆಮೊನ್ ತನ್ನ ದಯ... ಅರ್ಜಿಗಳನ್ನು ತಿರಸ್ಕರಿಸಿರುವುದನ್ನು ಪ್ರ... ಪ್ರಕರಣದಲ್ಲೂ ಅವರ ತೀರ್ಪು ಕೆ... ತಾಂತ್ರಿಕತೆಯ ಆಧಾರದಲ್ಲಿ ಮಾಡಿರುವುದ... ಇಲ್ಲಿ ಮಧ್ಯರಾತ್ರಿ ನಂತರ ವಿಚಾರಣೆ ನಡೆ... ಅನುಮತಿ ನೀಡಿದ ನಾಟಕ ನಡೆಯಿತು. ... ತೀರ್ಪನ್ನಂತೂ ನ್ಯಾಯಿಕ ತರ್ಕ ಅ... ವಿಶ್ಲೇಷಣೆಯ ಒಂದು ಉಜ್ವಲ ನಿದರ್ಶನ... ಕರೆಯಲಾಗದು.

ವಾಕ್ಸ್ವಾತಂತ್ರ್ಯ


ನ್ಯಾ। ಮಿಶ್ರಾರಿಗೆ ವಾಕ್ಸ್ವಾತಂತ್ರ್ಯದ ಕಲ್ಪ... ಕುರಿತು ಅಸ್ಪಷ್ಟ ತಿಳಿವಳಿಕೆ ಇರುವಂತಿದೆ. ... ಸ್ವಾತಂತ್ರ್ಯದ ಹಕ್ಕಿಗೆ ಅವರು ಮನ್ನಣೆ ನೀಡು... ತೋರುವುದಿಲ್ಲ. ದೇವಿದಾಸ್ ತುಳ್ಜಾಪು... ವರ್ಸಸ್ ಮಹಾರಾಷ್ಟ್ರ ಸರಕಾರ, ಸುಬ್ರಮಣ್ಯನ್ ಸ್ವ... ವರ್ಸಸ್ ಕೇಂದ್ರ ಸರಕಾರ ಮತ್ತು ಪ್ರಸವಪೂ... ರೋಗನಿಧಾನ ಪರೀಕ್ಷೆ ಪ್ರಕರಣಗಳಲ್ಲಿ ವಾಕ್ಸ್ವಾತ... ಹಕ್ಕಿನ ವ್ಯಾಪ್ತಿಯನ್ನು ಕಡಿಮೆ ಮಾಡಲು ಇದು... ತಿಳಿದಿರದ ಮೂರು ಹೊಸ ಆಧಾರಗಳನ್ನು ಅ... ಹುಟ್ಟುಹಾಕಿದ್ದಾರೆ.


ರಾಷ್ಟ್ರಗೀತೆ

ನ್ಯಾ। ಮಿಶ್ರಾ ತನ್ನ ಇತ್ತೀಚಿನ ತೀರ್ಪೊಂದರಲ್ಲಿ, ಸಿ... ಮಂದಿರಗಳಲ್ಲಿ ಪ್ರತಿಯೊಂದು ಶೋ ಪ್ರಾರಂಭವಾ... ಮುನ್ನ ಕಡ್ಡಾಯವಾಗಿ ರಾಷ್ಟ್ರಗೀತೆಯನ್ನು ನುಡಿಸಬ... ಎಲ್ಲರೂ ಕಡ್ಡಾಯವಾಗಿ ಎದ್ದುನಿಂತು ರಾಷ್ಟ್ರಗೀತೆಗೆ "ಗ... ತೋರಬೇಕು" ಎಂದು ಆದೇಶಿಸಿದ್ದಾರೆ. ಈ ಆ... ಅನುಚಿತವಾಗಿದ್ದು ಅದಕ್ಕೆ ಕಾನೂನಿನ, ವಾಸ್ತವದ, ಉ... ಪರಿಜ್ಞಾನದ ಅಥವಾ ನೈತಿಕತೆಯ ಆಧಾರವಿಲ್ಲ. ... ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕುಗಳಲ್ಲಿ ಮಾತಾಡದ... ಅಥವಾ ಅಭಿವ್ಯಕ್ತಿಸದಿರುವ ಹಕ್ಕುಗಳೂ ಸೇ... ಆದುದರಿಂದ ರಾಷ್ಟ್ರಗೀತೆ ಹಾಡುವಾಗ ಎದ್ದು ನಿಲ್ಲಬೇಕ... ಆದೇಶಿಸಿರುವುದು ನಮ್ಮ ಮೂಲಭೂತ ಹಕ್ಕುಗ... ಪರಿಮಿತಗೊಳಿಸಿದಂತಾಗಿದೆ ಎಂದು ಅನೇಕ ನ... ಶಾಸ್ತ್ರಜ್ಞರು ಹೇಳಿದ್ದಾರೆ. ಆದರೆ ಈ ತೀರ್ಪಿನಿಂದ ಕದನ... ದೇಶಭಕ್ತಿ ಮತ್ತು ರಾಷ್ಟ್ರೀಯತೆಗಳ ಮೂಲಕ ಜನ... ಗಮನವನ್ನು ಸರ್ಕಾರದ ವೈಫಲ್ಯಗಳಿಂದ ಆಚೆ ಸೆಳೆಯ... ಸುತ್ತಿರುವ ಮೋದಿ ಸರ್ಕಾರಕ್ಕೂ ಸಂಘ ಪರಿವಾ... ತುಂಬಾ ಖುಷಿ ಆಗಿರುವುದರಲ್ಲಿ ಸಂದೇಹವಿಲ್ಲ.

ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿದರೆ ಮೋ... ಸರ್ಕಾರ ತೆರೆಮರೆಯಲ್ಲಿ ನ್ಯಾಯಾಂಗವನ್ನೂ ... ನಿಯಂತ್ರಣದಲ್ಲಿ ಇರಿಸಿಕೊಳ್ಳುವ ಪ್ರಯತ್ನಗ... ಮಾಡುತ್ತಿರುವುದು ಸ್ಪಷ್ಟವಿಲ್ಲವೆ? ಆದುದರಿಂದ ಮು... ದಿನಗಳಲ್ಲಿ ವಾಕ್ಸ್ವಾತಂತ್ರ್ಯ ಮತ್ತಿತರ ವೈಯಕ್ತಿಕ ಹಕ್ಕು... ಸಂಬಂಧಿಸಿದ ಪ್ರಕರಣಗಳಲ್ಲಿ ಯಾವ ರೀತಿಯ ತೀರ್ಪು... ಹೊರಬೀಳಬಹುದೆಂದು ಊಹಿಸಲೂ ಭಯವಾಗುದ... ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಪ್ರಮ... ಆಧಾರಸ್ತಂಭವೆ ಅಲುಗಾಡತೊಡಗಿದರೆ ಸಾಮಾನ್ಯ ಜನ... ಅದರಲ್ಲೂ ವಿಶೇಷವಾಗಿ ಬಡವರ, ಮಹಿಳೆ... ಅಲ್ಪಸಂಖ್ಯಾತರ, ದಲಿತರ ಗತಿ ಏನು?

(ಆಧಾರ: 2.3.2017ರ ದ ವಯರ್.ಕಾಮ... ಶಾಂತಿಭೂಷಣ್; 17.8.2017ರ ಹಿಂದು... ಟೈಮ್ಸ್‌ನಲ್ಲಿ ಅಶೋಕ್ ಬಗ್ರಿಯ; 16.8.2017... ಕ್ವಿಂಟ್‌ನಲ್ಲಿ ಅಲೋಕ್ ಪ್ರಸನ್ನ ಕುಮಾರ್; 19.8.20... ದ ಕ್ವಿಂಟ್‌ನಲ್ಲಿ ಪಹಾಶ ಸಚ್‌ದೇವ್ ಬರಹ...


ಮಾಧ್ಯಮಗಳಿಗೆ ಪೋಸು ಕೊಡಲೆಂದೇ ಬಂದ ಡಾ.ಕೃಷ್ಣ, ಡಿ.ರಮೇಶ್, ರಾಧಾಕೃಷ್ಣ.


ಶೆಡ್‌ಗಳಿಗೆ ನೀರು ನುಗ್ಗಿರುವ ದೃಶ್ಯ

ಮಂಡ್ಯ: ದನ ಕಾಯುತ್ತಿರುವ ಜೆಡಿಎಸ್ ನಾಯಕರು!

ರಾಜ್ಯದ ಅಧಿಕಾರ ಹಿಡಿಯಲು ಹೊರಟವರಿಗೆ ಮೊದಲು ಇರಬೇಕಾಗಿದ್ದು ತಾಳ್ಮೆ. ಆದರೆ ಅದನ್ನೇ ಕಳೆದುಕೊಂಡು ಮಂಡ್ಯದ ಸ್ಲಂ ಜನರ ಮುಂದೆ ಬೇಕಾಬಿಟ್ಟಿಯಾಗಿ ಮಾತನಾಡುವ ಮೂಲಕ ಜೆಡಿಎಸ್ ರಾಜ್ಯಾಧ್ಯಕ್ಷ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಜನರ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ಆಗಸ್ಟ್ 14ರ ರಾತ್ರಿ ಸುರಿದ ಭಾರೀ ಮಳೆಗೆ ಹಾಲಹಳ್ಳಿ ಸ್ಲಂ (ಜೈ ಭಾರತ್ ಶ್ರಮಿಕ ನಗರ) ಜನರಿಗೆ ನೀಡಿಕೊಟ್ಟಿದ್ದ 133ಕ್ಕೂ ಹೆಚ್ಚು ಶೆಡ್‌ಗಳಿಗೆ ನೀರು ನುಗ್ಗಿ ಜನರೆಲ್ಲ ರಾತ್ರಿಪೂರ್ತಿ ನಿದ್ದೆಯಿಲ್ಲದೆ ಮಕ್ಕಳು-ಮರಿಗಳನ್ನು ಕಟ್ಟಿಕೊಂಡು ಹೆಣಗುತ್ತಿದ್ದ ದಾರುಣ ಘಟನೆಯ ದೃಶ್ಯ ಮಾಧ್ಯಮಗಳಲ್ಲಿ ಬಿತ್ತರವಾಯಿತು. ಅತ್ತ ಆಗಸ್ಟ್ 15ರ ಬೆಳಗ್ಗೆ ಸರ್‌ಎಂವಿ ಕ್ರೀಡಾಂಗಣದಲ್ಲಿ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ಎಂ.ಕೃಷ್ಣಪ್ಪ ಎಲ್ಲರಿಗೂ ಸ್ವಾತಂತ್ರ್ಯ ಬಂದಿದೆ ಎಂದು ಭಾಷಣ ಹೊಡೆಯುತ್ತಿದ್ದರೆ, ಇತ್ತ ಹಾಲಹಳ್ಳಿ ಸ್ಲಂ ನಿವಾಸಿಗಳು ಶೆಡ್‌ಗಳಿಗೆ ನುಗ್ಗಿದ ನೀರನ್ನು ಹೊರಚೆಲ್ಲುತ್ತಾ, ನೀರು ಪಾಲಾದ ಅಕ್ಕಿ-ಬೇಳೆಯ ಸ್ಥಿತಿ ಕಂಡು ಅಯ್ಯೋ ಎಂದು ಗೋಳಾಡುತ್ತಾ, ನೀರಿನಲ್ಲಿ ತೇಲುತ್ತಿದ್ದ ಪಾತ್ರೆ-ಪಗಡಗಳನ್ನು ಹೆಕ್ಕುವ ಕೆಲಸದಲ್ಲಿ ನಿರತರಾಗಿದ್ದರು.

ಈ ಸುದ್ದಿ ಮಾಧ್ಯಮಗಳಲ್ಲಿ ಬಂದದ್ದನ್ನು ಕಂಡ ಕುಮಾರಸ್ವಾಮಿ ಸಂಜೆ ವೇಳೆಗೆ ಹಾಲಹಳ್ಳಿ ಸ್ಲಂಗೆ ಭೇಟಿ ನೀಡಿ ಸ್ಲಂ ಜನರ ಸಮಸ್ಯೆ ಆಲಿಸುವುದಾಗಿ ತಮ್ಮ ಪಕ್ಷದ ಸ್ಥಳೀಯ ಮುಖಂಡರಿಗೆ ತಿಳಿಸಿದರು. ಅದರಂತೆ ಸಂಜೆ 5 ಗಂಟೆ ವೇಳೆಗೆ ಕುಮಾರಸ್ವಾಮಿ ಜೊತೆಗೆ ಸಂಸದ ಪುಟ್ಟರಾಜು, ಶಾಸಕ ಡಿ.ಸಿ.ತಮ್ಮಣ್ಣ ಮಾಜಿ ಶಾಸಕ ಎಂ.ಶ್ರೀನಿವಾಸ್, ಮಂಡ್ಯ ಕ್ಷೇತ್ರದಿಂದ ಎಂಎಲ್‌ಎ ಟಿಕೆಟ್ ಬಯಸುತ್ತಿರುವ ಡಾ.ಕೃಷ್ಣ, ಮುಖಂಡರ ರಾಧಾಕೃಷ್ಣ ಜಿ.ಪಂ. ಮಾಜಿ ಸದಸ್ಯ ವಿಜಯಾನಂದ ಸೇರಿದಂತೆ ಜೆಡಿಎಸ್‌ನ ಹಿರಿ-ಕಿರಿ ಪುಢಾರಿಗಳೆಲ್ಲ ಹಾಲಹಳ್ಳಿ ಸ್ಲಂಗೆ ಬಂದರು. ಬಂದ ಕ್ಷಣ ಕುಮಾರಸ್ವಾಮಿ ಹಾಲಹಳ್ಳಿ ಸ್ಲಂನ ಮನೆಗಳ ಆಧಾರವಾಗಿ ನಡೆಯುತ್ತಿರುವ ಹೋರಾಟ, ಮನೆ ಕಾಮಗಾರಿಯ ವಿಳಂಬ ಎಲ್ಲದ್ದರ ಮಾಹಿತಿ ಪಡೆದುಕೊಂಡರು. ಸ್ಥಳಕ್ಕೆ ಬಂದಿದ್ದ ಕೊಳಗೇರಿ ಅಭಿವೃದ್ಧಿ ಮಂಡಳಿಯ ಅಧಿಕಾರಿ ಚನ್ನೇಗೌಡರಿಂದಲೂ ಮಾಹಿತಿ ಪಡೆದು ಶೀಘ್ರ ಮನೆಗಳ ನಿರ್ಮಾಣ ಕಾಮಗಾರಿ ಪ್ರಾರಂಭಿಸಲು ಸೂಚನೆಯನ್ನು ನೀಡುತ್ತಿದ್ದರು.

ಆದರೆ ಕಳೆದ ಮೂರು ವರ್ಷಗಳಿಂದ ಹಾಲಹಳ್ಳಿ ಸ್ಲಂ ಜನರು ತಮ್ಮ ಮನೆಗಳ ಕಾಮಗಾರಿ ಆರಂಭವಾಗಲು ಹತ್ತಾರು ಪ್ರತಿಭಟನೆಗಳನ್ನು ನಡೆಸಿದರೂ ಅವರತ್ತ ತಿರುಗಿ ನೋಡದ ಜೆಡಿಎಸ್‌ನ ಸ್ಥಳೀಯ ಮುಖಂಡರು ಕುಮಾರಸ್ವಾಮಿ ಅಕ್ಕ-ಪಕ್ಕ ನಿಂತು ಮಾಧ್ಯಮಗಳಿಗೆ ಪೋಜು ಕೊಡುತ್ತಿದ್ದರು. ಅವರಿಗೆಲ್ಲಾ ಸ್ಲಂ ಜನರ ದಾರುಣ ಸ್ಥಿತಿಗಿಂತ ಕುಮಾರಸ್ವಾಮಿ ಪಕ್ಕದಲ್ಲಿ ನಿಂತು ಮಾಧ್ಯಮಗಳಲ್ಲಿ ಮಿಂಚುವುದೇ ಮುಖ್ಯವಾಗಿತ್ತು, ಹಾಲಹಳ್ಳಿ ಸ್ಲಂನಲ್ಲಿರುವ 720ಕ್ಕೂ ಹೆಚ್ಚು ಮನೆಗಳು ವಾಸ ಮಾಡಲು ಯೋಗ್ಯವಲ್ಲ ಎಂದು ಸ್ಲಂ ಬೋರ್ಡ್ ಘೋಷಿಸಿ ಹತ್ತು ವರ್ಷಗಳೇ ಕಳೆದುಹೋಗಿದೆ. ಹಲವು ಮನೆಗಳು ಶಿಥಿಲಗೊಂಡು ಕುಸಿದಿವೆ. ಬಹುತೇಕ

ಮಂಡ್ಯ ನಗರಸಭೆಯಲ್ಲಿ ಆಡಳಿತ ಸಂಪೂರ್ಣವಾಗಿ ನಿಷ್ಕ್ರಿಯವಾಗಿದೆ. ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಗಳ ಕಾರ್ಯವೈಖರಿಯಲ್ಲಿ ವೈಫಲ್ಯಗಳೇ ತುಂಬಿದೆ. ಉದಾಹರಣೆಗೆ ರೈತರಿಗೆ ಬರ ಪರಿಹಾರ ವಿತರಿಸುವಲ್ಲಿ ನಿರ್ಲಕ್ಷ್ಯ ತೋರಿದ್ದಾರೆ. ವಿಮೆ ಹಣ ಕೂಡ ರೈತರಿಗೆ ತಲುಪುತ್ತಿಲ್ಲ, ವಿರೋಧ ಪಕ್ಷವಾದ ಜೆಡಿಎಸ್ ನಾಯಕರು ರೈತರ ಸಮಸ್ಯೆಗಳ ಬಗ್ಗೆ ಸಚಿವ ಮತ್ತು ಅಧಿಕಾರಿಗಳ ಜೊತೆ ಮಾತನಾಡಿ, ಎಷ್ಟು ಪರಿಹಾರ ಕೊಡಿಸಿದ್ದಾರೆ? ಇನ್ನು ಜಿಲ್ಲೆಯ ರೈತರ ಕಬ್ಬನ್ನು ಸರಬರಾಜು ಮಾಡಿಸಿಕೊಂಡು ಕೋಟ್ಯಾಂತರ ಬಾಕಿ ಉಳಿಸಿಕೊಂಡಿರುವ ಸಕ್ಕರೆ ಕಾರ್ಖಾನೆಯ ಮಾಲೀಕರಿಂದ ಎಷ್ಟು ಬಾಕಿ ಹಣ ಕೊಡಿಸಿದ್ದಾರೆ ಎಂಬ ಬಗ್ಗೆ ಜೆಡಿಎಸ್ ನಾಯಕರು ಬಾಯಿಬಿಡಲಿ.

ಮನೆಗಳು ಬೀಳುವ ಹಂತದಲ್ಲಿವೆ. ಇಂತಹ ದಾರುಣ ಸ್ಥಿತಿಯಲ್ಲಿ ಸ್ಲಂ ಜನರಿರುವುದನ್ನು ಕಣ್ಣಾರೆ ನೋಡಿಯೂ ಕಾಣದಂತಿದ್ದ ಜೆಡಿಎಸ್ ಸ್ಥಳೀಯ ಮುಖಂಡರು ಅಂದು ಫೋಟೋಗೆ ಪೋಸ್ ಕೊಡುತ್ತಿದ್ದನ್ನು ಸಂಘಟನೆಯ ಸದಸ್ಯರಾದ ನಾಗೇಶ್, ಪ್ರಕಾಶ್, ಕೃಷ್ಣಪ್ಪ ಮೊದಲಾದವರಿಗೆ ಸಹಿಸಲು ಸಾಧ್ಯವಾಗಲಿಲ್ಲ,

ಈ ಸಂದರ್ಭದಲ್ಲಿ ಮಂಡ್ಯ ನಗರ ಶ್ರಮಿಕ ನಿವಾಸಿಗಳ ಒಕ್ಕೂಟದ ಗೌರವ ಸಲಹೆಗಾರ ನಾಗೇಶ್, ಕುಮಾರಸ್ವಾಮಿಗಳ ಬಳಿ ಮಂಡ್ಯ ನಗರದಲ್ಲಿ ಸುಮಾರು 25ಕ್ಕೂ ಹೆಚ್ಚು ಸ್ಲಂಗಳಿವೆ. ಹಾಲಹಳ್ಳಿ ಸ್ಲಂ ಅತಿದೊಡ್ಡ ಸ್ಲಂ ಆಗಿದ್ದು, ಕಳೆದ ಮೂರು ವರ್ಷಗಳಿಂದ 15ಕ್ಕೂ ಹೆಚ್ಚು ಹೋರಾಟಗಳು ಮನೆ ನಿರ್ಮಾಣ ಕಾಮಗಾರಿಯ ಬಗ್ಗೆಯೇ ನಡೆದಿವೆ. ಮಂಡ್ಯದ ಶಾಸಕರಾದ ಅಂಬರೀಶ್ ಹಾಗೂ ಕೊಳಗೇರಿ ಮಂಡಳಿ ಅಧಿಕಾರಿಗಳು ಸ್ಲಂ ಜನರ ಕಷ್ಟ-ಸುಖ ಆಲಿಸುತ್ತಿಲ್ಲ, ಆಡಳಿತದಲ್ಲಿರುವ ಕಾಂಗ್ರೆಸ್ ಸರ್ಕಾರ ಹಾಗೂ ಅಧಿಕಾರಿಗಳು ನಿಷ್ಕ್ರಿಯರಾಗಿದ್ದಾರೆ. ವಿರೋಧ ಪಕ್ಷದ ನಾಯಕರಾದ ತಾವು... ಎಂದು ಹೇಳುತ್ತಿದ್ದಂತೆ ಸಿಟ್ಟು ಮಾಡಿಕೊಂಡು ಕುಮಾರಸ್ವಾಮಿ ನೀವು ನನ್ನನ್ನು ಟಾರ್ಗೆಟ್ ಮಾಡಬೇಡಿ, ನನ್ನ ಮೇಲೆ ಚಾರ್ಜ್ ಮಾಡಬೇಡಿ. ನಾನು ಬೆಳಗ್ಗೆ ಟಿವಿಗಳಲ್ಲಿ ಬರುತ್ತಿದ್ದನ್ನು ಕಂಡು ಇಲ್ಲಿನ ಜನರ ಸಮಸ್ಯೆ ತಿಳಿಯಲು ಬಂದಿದ್ದೇನೆ. ಇಷ್ಟು ದಿನ ಈ ವಿಚಾರ ನನಗೆ ಹೇಳದೆ ದನ ಕಾಯುತ್ತಿದ್ರಾ ಎಂದೆಲ್ಲಾ ರೇಗಿದರು.

ಮಂಡ್ಯ ನಗರ ಶ್ರಮಿಕ ನಿವಾಸಿಗಳ ಒಕ್ಕೂಟದ ಬಗ್ಗೆ ಗೊತ್ತಿದ್ದ ಸಂಸದ ಪುಟ್ಟರಾಜು, ಮಾಜಿ ಶಾಸಕ ಎಂ.ಶ್ರೀನಿವಾಸ್ ನಮ್ಮ ಸಂಘಟನೆಯ ಬಗ್ಗೆ ಕುಮಾರಸ್ವಾಮಿಯವರಿಗೆ ಮನವರಿಕೆ ಮಾಡಿಕೊಡಬಹುದಿತ್ತು, ಆದರೆ ಅವರ್‍ಯಾರೂ ಆ ಗೋಜಿಗೆ ಹೋಗದೆ ಸುಮ್ಮನೆ ನಿಂತಿದ್ದರು.

ನಾಗೇಶ್ ಮಾತನ್ನು ಕುಮಾರಸ್ವಾಮಿಯವರು ಪೂರ್ಣವಾಗಿ ಕೇಳಿಸಿಕೊಳ್ಳಬೇಕಿತ್ತು, ಆತ ಹೇಳಲು ಹೊರಟದ್ದೇನೆಂದರೆ: ವಿರೋಧಪಕ್ಷದ ನಾಯಕರಾದ ನೀವು ಸ್ಲಂ ನಿವಾಸಿಗಳ ಸ್ಥಿತಿಗೆ ಮರುಗಿ ನೀವು ಇಲ್ಲಿಗೆ ಬಂದದ್ದು ಸಂತೋಷ. ಹಾಲಹಳ್ಳಿ ಸ್ಲಂನಲ್ಲಿ ಸರ್ಕಾರ ರಾಜೀವ್ ಆವಾಸ್ ಯೋಜನೆಯಡಿ 1335 ಮನೆಗಳ ಕಾಮಗಾರಿ ಕುಂಟುತ್ತಾ ನಡೆಯುತ್ತಿದೆ. ಆದರೆ ಸ್ಲಂ ಜನರು ಹತ್ತಾರು ಹೋರಾಟಗಳನ್ನು ಮಾಡಿದರೂ ಒಂದು ದಿನವೂ ಬಂದು ಅವರ ಸಮಸ್ಯೆ ಆಲಿಸದ ನಿಮ್ಮ ಪಕ್ಷದ ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರಿಗೆ ಇನ್ನು ಮುಂದಾದರೂ ಸ್ಲಂಜನರ ಜೊತೆ ನಿಲ್ಲಿ ಎಂದು ಸೂಚನೆ ಕೊಡಬೇಕು. ಅಲ್ಲದೆ ಕಾಳಿಕಾಂಭ ದೇವಸ್ಥಾನದ ಹೆಸರನ್ನು ಮುಂದಿಟ್ಟುಕೊಂಡು ಕಾಳಿಕಾಂಭ ಸ್ಲಂ ಜನರನ್ನು ಎತ್ತಂಗಡಿ ಮಾಡಿಸಲು ಹೊರಟಿರುವ ಕಾಂಗ್ರೆಸ್ ಮುಖಂಡರ ವಿರುದ್ಧ ಹಾಗೂ ತಾವೇ ಸ್ವತಃ 2006ರಲ್ಲಿ ಶಂಕುಸ್ಥಾಪನೆ ಮಾಡಿದ ಆರ್‌ಟಿಓ ಸ್ಲಂನಲ್ಲಿ ಮನೆಗಳಿಗೆ ಅಡ್ಡಿ ಮಾಡುತ್ತಿರುವವರ ವಿರುದ್ಧ ಸಂಘಟನೆ ನಡೆಸುತ್ತಿರುವ ಹೋರಾಟಕ್ಕೆ ತಮ್ಮ ಪಕ್ಷದ ಸ್ಥಳೀಯ ಮುಖಂಡರು ಬೆಂಬಲವಾಗಿ ಕೈಜೋಡಿಸಿ ನಿಲ್ಲುವಂತೆ ಹೇಳಬೇಕೆಂದು ಹೊರಟಿದ್ದರು. ಆದರೆ ವಿರೋಧ ಪಕ್ಷದ ನಾಯಕರಾದ ತಾವು... ಎನ್ನುತ್ತಿದ್ದಂತೆ ಸಿಟ್ಟಿಗೆದ್ದ ಕುಮಾರಸ್ವಾಮಿ ದನ ಕಾಯುತ್ತಿದ್ರಾ ಎಂದೆಲ್ಲಾ ಹೇಳಿ ಸ್ಲಂ ಮುಖಂಡರು ಹಾಗೂ ಜನರನ್ನ ಅವಮಾನಿಸಿಬಿಟ್ಟರು. ಇದು ಸ್ಲಂಜನರಿಗೆ ತುಂಬಾ ಬೇಸರ ತರಿಸಿತು.

ಮಾರನೇ ದಿನವೇ ಬೃಹತ್ ಪ್ರತಿಭಟನೆ ನಡೆಸಿದ ಶ್ರಮಿಕ ನಿವಾಸಿಗಳ ಒಕ್ಕೂಟದ ಸದಸ್ಯರು ಕುಮಾರಸ್ವಾಮಿಯವರ ನಡತೆಯನ್ನು ಕಟುವಾಗಿ ಟೀಕಿಸಿದರು. ಕುಮಾರಸ್ವಾಮಿಯವರು ಸ್ಲಂ ಜನರನ್ನು 'ಇಷ್ಟು ದಿನ ದನ ಕಾಯುತ್ತಿದ್ರಾ' ಎಂದು ಕೇಳುವ ಬದಲು ಅವರ ಜೊತೆ ಬಂದಿದ್ದ ಅವರ ಪಕ್ಷದ ಸ್ಥಳೀಯ ನಾಯಕರಿಗೆ 'ನೀವು ದನ ಕಾಯುತ್ತಿದ್ರಾ' ಎಂದು ಕೇಳಬೇಕಿತ್ತಲ್ಲವೇ? ಜೆಡಿಎಸ್ ಪಕ್ಷ ಪ್ರಬಲವಾಗಿದೆಯೆಂದು ಭಾವಿಸುವ ಮಂಡ್ಯ ಜಿಲ್ಲೆಯಲ್ಲಿ ಕೆಳಗಿನ ಹಂತದ ಪದಾಧಿಕಾರಿಗಳು ಅಥವಾ ಕಾರ್ಯಕರ್ತರಿಲ್ಲವೇ?

ಸಮಸ್ಯೆಗಳಿಗೆ ಜೆಡಿಎಸ್ ನಾಯಕರ ಮೌನ

ಮಂಡ್ಯ ಜಿಲ್ಲೆ ಜೆಡಿಎಸ್‌ನ ಭದ್ರಕೋಟೆ ಎಂದು ಬೀಗುವ ಜಿಲ್ಲಾ ಜೆಡಿಎಸ್ ನಾಯಕರು ಕಳೆದ ನಾಲ್ಕು ವರ್ಷಗಳಿಂದ ಜಿಲ್ಲೆಯನ್ನು ಕಾಡುತ್ತಿರುವ ಸಮಸ್ಯೆಗಳ ವಿರುದ್ಧ ಗಟ್ಟಿಯಾಗಿ ದನಿಯೆತ್ತಿದ ಒಂದೇ ಒಂದು ಉದಾಹರಣೆಯೂ ಇಲ್ಲ, ಮೂರು ವರ್ಷಗಳ ಕಾಲ ಜಿಲ್ಲಾ ಉಸ್ತುವಾರಿ ಮತ್ತು ವಸತಿ ಸಚಿವರಾಗಿ ಮಂಡ್ಯ ಜಿಲ್ಲೆಯನ್ನು ಕಡೆಗಣಿಸಿ ಅಭಿವೃದ್ಧಿಯಲ್ಲಿ ಒಂದು ದಶಕ ಹಿಂದೆ ಬೀಳುವಂತೆ ಮಾಡಿದ ಅಂಬರೀಶ್ ಬಗ್ಗೆ ಜಿಲ್ಲಾ ಜೆಡಿಎಸ್ ನಾಯಕರು ಒಂದೇ ಒಂದು ಹುಸ್ಸೆಯನ್ನು ಮಾಡದೆ ಕಾಲ ಕಳೆದರು. ಮಂತ್ರಿ ಸ್ಥಾನದಿಂದ ಅಂಬರೀಶ್‌ರನ್ನು ಕಿತ್ತಸೆದ ಮೇಲೆ ಆತ ಮಂಡ್ಯದತ್ತ ಮುಖವನ್ನೇ ಮಾಡಿಲ್ಲ, ಇದನ್ನು ಕಂಡು ವಿರೋಧ ಪಕ್ಷವಾದ ಜೆಡಿಎಸ್ ನಾಯಕರು ಬಾಯಿ ಮುಚ್ಚಿಕೊಂಡು ಕೂತಿದ್ದಾರೆ

ಇನ್ನು ಮಂಡ್ಯ ಜಿಲ್ಲೆಯಲ್ಲಿ ಭೀಕರ ಬರಗಾಲದಿಂದ ಬೆಳೆ ನಷ್ಟಕ್ಕೊಳಗಾಗಿ ಸಾಲಬಾಧೆ ತಾಳಲಾರದೆ 200ಕ್ಕೂ ಹೆಚ್ಚು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಆತ್ಮಹತ್ಯೆಗೆ ಶರಣಾದ ನೂರು ಕುಟುಂಬಗಳಿಗೆ ಸ್ವತಃ ಕುಮಾರಸ್ವಾಮಿಯೇ ಒಂದಷ್ಟು ಆರ್ಥಿಕ ಸಹಾಯ ಮಾಡಿದರು. ಆದರೆ ಕಳೆದ ಒಂದೂವರೆ ವರ್ಷದಿಂದೀಚೆಗೆ ಸುಮಾರು 80ಕ್ಕೂ ಹೆಚ್ಚು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಎಷ್ಟು ಜನ ಸ್ಥಳೀಯ ಜೆಡಿಎಸ್ ನಾಯಕರು ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಸಾಂತ್ವನ ಹೇಳಿದ್ದಾರೆ? ಸಹಾಯ ಮಾಡಿದ್ದಾರೆ?

ಮಂಡ್ಯ ನಗರಸಭೆಯಲ್ಲಿ ಆಡಳಿತ ಸಂಪೂರ್ಣವಾಗಿ ನಿಷ್ಕ್ರಿಯವಾಗಿದೆ. ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಗಳ ಕಾರ್ಯವೈಖರಿಯಲ್ಲಿ ವೈಫಲ್ಯಗಳೇ ತುಂಬಿದೆ. ಉದಾಹರಣೆಗೆ ರೈತರಿಗೆ ಬರ ಪರಿಹಾರ ವಿತರಿಸುವಲ್ಲಿ ನಿರ್ಲಕ್ಷ್ಯ ತೋರಿದ್ದಾರೆ. ವಿಮೆ ಹಣ ಕೂಡ ರೈತರಿಗೆ ತಲುಪುತ್ತಿಲ್ಲ, ವಿರೋಧ ಪಕ್ಷವಾದ ಜೆಡಿಎಸ್ ನಾಯಕರು ರೈತರ ಸಮಸ್ಯೆಗಳ ಬಗ್ಗೆ ಸಚಿವ ಮತ್ತು ಅಧಿಕಾರಿಗಳ ಜೊತೆ ಮಾತನಾಡಿ, ಎಷ್ಟು ಪರಿಹಾರ ಕೊಡಿಸಿದ್ದಾರೆ? ಇನ್ನು ಜಿಲ್ಲೆಯ ರೈತರ ಕಬ್ಬನ್ನು ಸರಬರಾಜು ಮಾಡಿಸಿಕೊಂಡು ಕೋಟ್ಯಾಂತರ ಬಾಕಿ ಉಳಿಸಿಕೊಂಡಿರುವ ಸಕ್ಕರೆ ಕಾರ್ಖಾನೆಯ ಮಾಲೀಕರಿಂದ ಎಷ್ಟು ಬಾಕಿ ಹಣ ಕೊಡಿಸಿದ್ದಾರೆ ಎಂಬ ಬಗ್ಗೆ ಜೆಡಿಎಸ್ ನಾಯಕರು ಬಾಯಿಬಿಡಲಿ. ಹಾಗೆಯೇ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ, ಮರಳುಗಾರಿಕೆ ಎಗ್ಗಿಲ್ಲದೆ ನಡೆಯುತ್ತಿದೆ. ನೋಡ ನೋಡು ತ್ತಿದ್ದಂತೆ ಪ್ರಕೃತಿ ಸಂಪತ್ತು ಲೂಟಿಯಾಗುತ್ತಿದ್ದರೂ ಕಣ್ಣುಮುಚ್ಚಿ ಕುಳಿತಿರುವ ಜೆಡಿಎಸ್ ನಾಯಕರೆಲ್ಲಾ ದನ ಕಾಯುತ್ತಿದ್ದಾರೆ ಅನಿಸುತ್ತದೆ.

ಜಿಲ್ಲೆಯಲ್ಲಿ ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಪರಿಣಾಮಕಾರಿ ಹೋರಾಟ ರೂಪಿಸದೆ ನಿಷ್ಕ್ರಿಯರಾಗಿರುವ ಜಿಲ್ಲಾಧ್ಯಕ್ಷ ಡಿ.ರಮೇಶ್, ಮಾಜಿ ಶಾಸಕ ಎಂ.ಶ್ರೀನಿವಾಸ್, ಡಾ.ಕೃಷ್ಣ ರಾಧಾಕೃಷ್ಣ ಮೊದಲಾದವರೆಲ್ಲಾ ಮಾಧ್ಯಮಗಳ ಮುಂದೆ ನಾನೇ ಮಂಡ್ಯ ಕ್ಷೇತ್ರದ ಶಾಸಕ ಸ್ಥಾನಕ್ಕೆ ಆಕಾಂಕ್ಷಿ ಎಂದು ಪೋಸು ಕೊಡುತ್ತಿರುವುದು ನಾಚಿಕೆಗೇಡು. ಹಣ ಮತ್ತು ಜಾತಿ ಬಲದ ಮೇಲೆ ಚುನಾವಣೆ ಎದುರಿಸುವ ಜೆಡಿಎಸ್ ಪಕ್ಷ ಇನ್ನಾದರೂ ಪ್ರಾಮಾಣಿಕವಾಗಿ ಮಂಡ್ಯ ಜಿಲ್ಲೆಯ ಜನರ ಅಭಿವೃದ್ಧಿಗೆ ಮುಂದಾಗಲಿ. ಜೆಡಿಎಸ್ ವರಿಷ್ಠರ ತವರು ಹಾಸನಕ್ಕೆ ಮಾಡಿರುವ ಅಭಿವೃದ್ಧಿಯಲ್ಲಿ ಕಾಲು ಭಾಗದಷ್ಟಾದರೂ ಮಂಡ್ಯ ಜಿಲ್ಲೆಗೆ ತಂದಿದ್ದರೆ ಅವರನ್ನು ಒಪ್ಪಬಹುದಿತ್ತು,

ಖ್ಯಾತ ದಾರ್ಶನಿಕ ಪಿ.ಸೈರಸ್ "ಯಾವಾಗ ಮೌನವಾಗಿರಬೇಕು ಎಂಬುದು ತಿಳಿಯದವನಿಗೆ ಯಾವಾಗ ಮಾತನಾಡಬೇಕು ಎಂಬುದು ತಿಳಿಯುವುದಿಲ್ಲ" ಎಂಬ ಮಾತನ್ನು ಹೇಳಿದ್ದಾರೆ. ಮಾನ್ಯ ಕುಮಾರಸ್ವಾಮಿಯವರು ಈ ಸೂಕ್ತಿಯನ್ನು ಮನನ ಮಾಡಿಕೊಂಡು ತಾಳ್ಮೆಯಿಂದ ವರ್ತಿಸಲಿ. ಇಲ್ಲದಿದ್ದರೆ ಅವರ ಮಾತೇ ಅವರ ಪಕ್ಷಕ್ಕೆ ಸಾಕಷ್ಟು ಡ್ಯಾಮೇಜ್ ಮಾಡಲಿದೆ.

■ ಸಿದ್ದರಾಜು, ಮಂಡ್ಯ

EPW ಬಿಕ್ಕಟ್ಟು- ಮನಸ್ಸಾಕ್ಷಿಯ ಮಾತ

EPW ಸಂಪಾದಕೀಯ

ಕೃಪೆ:*Economic and Political Weekly*
Aug 19, 2017. Vol. 52. No. 33

■ ಅನು: ಶಿವಸುಂದರ್

ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (EPW) ಯು 51 ವರ್ಷಗಳನ್ನು ಪೂರೈಸಿದೆ. ಆದರಲ್ಲಿ ಕಳೆದ ಒಂದು ವರ್ಷವು ಮಾತ್ರ ಸಾಕಷ್ಟು ಸಂಕ್ಷೋಭೆಗಳಿಂದ ಮತ್ತು ಬಲವಂತದ ಬದಲಾವಣೆಗಳಿಂದ ಕೂಡಿತ್ತು. ಕಳೆದ ಒಂದು ತಿಂಗಳ ಬೆಳವಣಿಗೆಗಳ ಬಗ್ಗೆಯಂತೂ ಸಾರ್ವಜನಿಕ ವಲಯದಲ್ಲಿ ಬಹಳಷ್ಟು ಚರ್ಚೆಗಳು ನಡೆದಿದ್ದು ಇಪಿಡಬ್ಲ್ಯೂ ಬಗ್ಗೆ ಮತ್ತು ಅದರ ಭವಿಷ್ಯದ ಬಗ್ಗೆ ಹಲವಾರು ಪ್ರಶ್ನೆಗಳನ್ನು ಎತ್ತಲಾಗಿದೆ. ಹೀಗಾಗಿ ಇದು ಈ ಪತ್ರಿಕೆಯ ಗತದ ಬಗ್ಗೆ ಮಾತ್ರವಲ್ಲ ಭವಿಷ್ಯದಲ್ಲಿ ಅದು ಸಾಗಬೇಕಿರುವ ಮಾರ್ಗದ ಬಗ್ಗೆಯೂ ಆತ್ಮಾವಲೋಕನ ಮಾಡಿಕೊಳ್ಳಲು ಸರಿಯಾದ ಸಮಯವಾಗಿದೆ. ಇಪಿಡಬ್ಲ್ಯೂ ಪತ್ರಿಕೆಯ ವಿಶಾಲ ಬಳಗವು ಸಹ ಇದರಲ್ಲಿ ಭಾಗವಹಿಸುವ ಅಗತ್ಯವಿದೆ.

ಈ ಕಾಲ್ಪನಿಕ ಸಂಭಾಷಣೆಯಲ್ಲಿ ಬರ್ನಾಡ್ ಡಿಮೆಲ್ಲೋ ಅವರು ಬಿಕ್ಕಟ್ಟಿಗೆ ಸಂಬಂಧಪಟ್ಟ ಹಲವು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ:

EPW ಪತ್ರಿಕೆ ಮತ್ತು **EPW** ಸಮುದಾಯದ ನಡುವಿನ ಆತ್ಮೀಯ ಸಂಬಂಧಗಳೇ ಈ ಸಾಹಸವನ್ನು ಯಶಸ್ವಿಯಾಗಿ ಮುಂದುವರೆಸಿಕೊಂಡು ಹೋಗುತ್ತಿರುವುದರ ಹಿಂದಿನ ಚಾಲಕ ಶಕ್ತಿಯಾಗಿದೆ. ಈಗ ನಮ್ಮ **EPW** ಅನ್ನು ರೋಸ್ ಎಂದೂ **EPW** ಸಮುದಾಯವನ್ನು ಜಾಕ್ ಎಂದೂ ಕರೆಯೋಣ. ಇವೆರಡು ಜೇಮ್ಸ್ ಕ್ಯಾಮರೂನ್‌ನ ಚಾರಿತ್ರಿಕ ಟೈಟಾನಿಕ್ ಸಿನಿಮಾದ ಕಾಲ್ಪನಿಕ ಪಾತ್ರಗಳ ಹೆಸರುಗಳೆಂಬುದು ನಿಮಗೇ ತಿಳಿದೇ ಇದೆ.

ತಾನು ಹೇಗೆ ಬದುಕಬೇಕೆಂಬುದನ್ನು ಹಗಲು ದರೋಡೆ ಮತ್ತು ಸುಲಿಗೆಗಳ ಮೂಲಕ ಸಿರಿವಂತನಾದವರ (ರಾಬರ್ ಬ್ಯಾರನ್) ತರ ಇರುವ ತನ್ನ ಭಾವೀಪತಿ ಕಾಲ್ ಮತ್ತು ಕುಲೀನ ಸಮಾಜದ ಹುಸಿ ಪ್ರತಿಷ್ಠೆಯನ್ನೇ ಸದಾ ತಲೆಯಲ್ಲಿ ತುಂಬಿಕೊಂಡಿರುವ ತನ್ನ ವಿಧವೆ ತಾಯಿ ನಿರ್ದೇಶಿಸುವುದನ್ನು ಸಹಿಸಲಾಗದ ರೋಸ್ ಇನ್ನೇನು ಹಡಗಿನಿಂದ ಕಡಲಿಗೆ ಹಾರಿಕೊಳ್ಳಲು ಸಿದ್ಧವಾಗಿರುತ್ತಾಳೆ. ಆಗ ಜಾಕ್ ಮಧ್ಯಪ್ರವೇಶಿಸಿ "ಇಲ್ಲ ನೀನು ಸಾಯಕೂಡದು" ಎಂದು ತಾಕೀತು ಮಾಡುತ್ತಾನೆ. ಆಗ ರೋಸ್ "ನಾನು ಏನು ಮಾಡಬೇಕು ಅಥವಾ ಮಾಡಬಾರದು ಎಂದು ನನಗೆ ಹೇಳಲು ಬರಬೇಡ. ಕಳೆದ 15 ತಿಂಗಳಿಂದ ನಾನು ಬಿಕ್ಕಟ್ಟಿನಲ್ಲಿ ಸಿಲುಕಿ ಒದ್ದಾಡುತ್ತಿದ್ದಾಗ ನೀನು ಎಲ್ಲಿದ್ದೆ? ಹೋಗಾಚೆ.." ಎಂದು ಜಾಕ್‌ನನ್ನು ಬದಿಗೆ ದೂಡುತ್ತಾಳೆ.

ಜಾಕ್: ನಾನು ನಿನ್ನ ಬಗ್ಗೆ ಸದಾ ಚಿಂತಿತನಾಗಿದ್ದೆ. ಆದರೆ ನನಗೆ ಆಯ್ಕೆಗಳಿರಲಿಲ್ಲ, ನೀನು ಸಂದರ್ಭವನ್ನು ಯಶಸ್ವಿಯಾಗಿ ಎದುರಿಸಿತ್ತೀಯೆಂದೂ, ಈ ಬಿಕ್ಕಟ್ಟಿನಿಂದ ಹೊರಬಂದು ನನ್ನ ದುಗುಡವನ್ನೂ ಸಹ ಕಡಿಮೆ ಮಾಡುತ್ತೀಯೆಂದು ನಾನು ಅಂದುಕೊಂಡಿದ್ದೆ. ದಯವಿಟ್ಟು ವಾಪಸ್ ಬಂದುಬಿಡು.. ನೀನು ಹೀಗೆಲ್ಲಾ ದುಡುಕಬಾರದು. ಎಲ್ಲಿ ನಿನ್ನ ಕೈ ಕೊಡು..

(ರೋಸಳ ಕೈ ಹಿಡಿದುಕೊಂಡು ಮತ್ತೆ ಹಡಗಿನೊಳಕ್ಕೆ ಎಳೆದುಕೊಳ್ಳುತ್ತಾನೆ ಜಾಕ್.)

ರೋಸ್: ನಾನು ಸದಾ ಇಲ್ಲದ ಸಮಸ್ಯೆ ತಂದೊಡ್ಡುವ ತಂಟೆಕೋರಳೆಂದು ನಿನಗೀಗ ಅನಿಸುತ್ತಿರಬಹುದು.

ಜಾಕ್: ಇಲ್ಲಪ್ಪ. ಖಂಡಿತಾ ಇಲ್ಲ, ಆದರೆ ಬೇರೆ ಯಾವುದೂ ದಾರಿಯೇ ಇಲ್ಲ ಎನ್ನುವಷ್ಟು ಮಟ್ಟಿಗೆ ನಿನ್ನನ್ನು ಹತಾಶಳಾಗಿಸಿದ ಸಂಗತಿಯೇನಿರಬಹುದೆಂದು ಯೋಚಿಸುತ್ತಿದ್ದೇನೆ.

ರೋಸ್: ಕಳೆದ ಜನವರಿ ಇಂದ ನಾನು ಎಂಥಾ ಸಂದಿಗ್ಧದಲ್ಲಿ ಸಿಲುಕಿಕೊಂಡಿದ್ದೇನೆ ಎಂಬುದು ನಿನಗೆ ಗೊತ್ತಿಲ್ಲ ಬಿಡು. ನೈತಿಕ ಮತ್ತು ಅನೈತಿಕವಾದವುಗಳ ನಡುವೆ ಹಾಗೂ ಅಸಲಿ ಮತ್ತು ನಕಲಿಗಳ ನಡುವೆ ವ್ಯತ್ಯಾಸಗಳನ್ನು ಗುರುತಿಸುವಷ್ಟು ಶಕ್ತಿಯೂ ನನಗಿಲ್ಲವೇನೋ ಎಂಬ ಹತಾಶೆಯಂಚಿಗೆ ನಾನು ತಲುಪಿದ್ದೆ. ನನ್ನ ವ್ಯಕ್ತಿತ್ವವೇ ಅಪಹಾಸ್ಯಕ್ಕೊಳಗಾಗಿತ್ತು; ಕಳೆಪೆ ಗುಣಮಟ್ಟವನ್ನು ನಾನು ಸಹಿಸುವುದಿಲ್ಲವೆಂದು ನಿನಗೆ ಗೊತ್ತು. ನಂತರ ಆ ದೊಡ್ಡ ಉದ್ಯಮಪತಿಗಳಿಂದ ಲೀಗಲ್ ನೋಟಿಸ್ ಬಂದದ್ದು ಮತ್ತು ಆ ನಂತರದ ಬೆಳವಣಿಗೆಗಳು.. ಹಮ್. ಜಾಕ್ ನಾನು ಕಷ್ಟಪಟ್ಟು ಗಳಿಸಿದ್ದ ಪ್ರತಿಷ್ಠೆಗೇ ಕುಂದುಂಟಾಗಿದೆ.

ಜಾಕ್: ಇವೆಲ್ಲಾ ಬೇಸರ ಹುಟ್ಟಿಸುವ ಸಂಗತಿಗಳೆಂಬುದರಲ್ಲಿ ಎರಡು ಮಾತಿಲ್ಲ. ಅಲ್ಲದೆ 2016ರ ಜನವರಿಯಿಂದ ಒಬ್ಬರಾದ ಮೇಲೆ ಒಬ್ಬರಂತೆ ನಿಮ್ಮ ಇಬ್ಬಬ್ಬರು ಸಂಪಾದಕರನ್ನು ರಾಜೀನಾಮೆ ಕೊಡುವಂತೆ ಮಾಡಲಾಯಿತು. ಆದರೂ ರೋಸ್, ನಿನಗೆ ನಾನು ಒಂದನ್ನಂತೂ ಹೇಳಲೇಬೇಕು. ನಿನ್ನಂಥ ಅದ್ಭುತ, ಅಪರೂಪದ ಮತ್ತು ವಿಸ್ಮಯ ಹುಟ್ಟಿಸುವ ಮತ್ತೊಬ್ಬ ಹೆಂಗಸನ್ನು ನಾನು ಈವರೆಗೆ ಕಂಡಿಲ್ಲ, ಆದ್ದರಿಂದ ನಿನ್ನ ಪರಿಸ್ಥಿತಿ ಸುಧಾರಿಸದೆ ನಾನು ಇಲ್ಲಿಂದ ಕದಲುವುದಿಲ್ಲ. ರೋಸ್, ನೀನೊಂದು ಬಲೆಯಲ್ಲಿ ಸಿಕಿಬಿದ್ದಿದ್ದೀಯ. ಮತ್ತು ಈ ಬಲೆಯನ್ನು ಹರಿದುಕೊಂಡು ನೀನು ಹೊರಬರದಿದ್ದರೆ ನೀನು ಸತ್ತುಹೋಗುತ್ತೀ. ಅದು ಈ ಕೂಡಲೇ ಸಂಭವಿಸದಿರಬಹುದು. ಏಕೆಂದರೆ ಈ ಸದ್ಯಕ್ಕೆ ನೀನಿನ್ನೂ ಗಟ್ಟಿಯಾಗಿದ್ದೀಯಾ. ಆದರೆ ನಿನ್ನಲ್ಲಿ ನಾನು ಅತ್ಯಂತ ಮೆಚ್ಚಿಕೊಳ್ಳುವ ನಿನ್ನ ಅಂತರಂಗದ ಬೆಂಕಿ ನಿಧಾನವಾಗಿ ಶಮನಗೊಳ್ಳುತ್ತಾ ಹೋಗುತ್ತಿದೆ..

ರೋಸ್: ಜಾಕ್. ಹಾಗೆಲ್ಲ ನನ್ನ ಬಗ್ಗೆ ಇಲ್ಲದ್ದನ್ನು ಊಹಿಸಿಕೊಂಡು ಒರಲಬೇಡ. ನಾನು ನನ್ನ ವೈಫಲ್ಯಗಳಿಂದ ಕಲಿತ ಪಾಠಗಳ ಒಟ್ಟುಮೊತ್ತವಾಗಿದ್ದೇನೆ. ಸಚಿನ್ ಚೌಧರಿಯಿಂದ ಹಿಡಿದು ಸಿ.ರಾಮಮೋಹನ ರೆಡ್ಡಿಯವರೆಗೆ ನನ್ನ ಸಂಪಾದಕರುಗಳು ಹಾಗೂ ನನ್ನ ಲೇಖಕರು ನನ್ನಲ್ಲಿ ಏನನ್ನು ಬಿತ್ತಿದ್ದಾರೋ ಅದರಲ್ಲಿ ಬಹಳಷ್ಟನ್ನು ನಾನು ಉಳಿಸಿಕೊಂಡಿದ್ದೇನೆ. ಮತ್ತು ನನಗೆ ನನ್ನ ಮಿತಿಗಳ ಬಗ್ಗೆಯೂ ಸರಿಯಾದ ಅರಿವಿದೆ. ನನ್ನ ಸಂಪಾದಕರುಗಳ ಮತ್ತು ಲೇಖಕರ ಅಮಿತ ಸಹಾಯ ಮತ್ತು ಸಹಕಾರಗಳಿಂದಾಗಿಯೇ ನಾನಿಂದು 'ಜ್ಞಾನದ ಆಲದಮರ'ವಾಗಿ ಬೆಳೆದು ನಿಂತಿದ್ದೇನೆ. ಆದರೆ ಅತ್ಯಂತ ಸುದೀರ್ಘಕಾಲ ಮತ್ತು ಅತ್ಯಂತ ಸಮರ್ಪಣಾ ಭಾವದಿಂದ ನನ್ನ ಸಂಪಾದಕತ್ವ ವಹಿಸಿದ್ದ ಕೃಷ್ಣರಾಜ್ ತರ ನಾನೂ ಸಹ ತುಂಬಾ ಸಂಕೋಚ ಸ್ವಭಾವದವಳು.

ಜಾಕ್: ತನಿಖಾ ಪತ್ರಿಕೋದ್ಯಮದ ಕಡೆಗೆ ಹೊರಳಿಕೊಂಡಿದ್ದರ ಬಗ್ಗೆ ನಿನಗೆ ಖುಷಿಯಿತ್ತೇ?

ರೋಸ್: ಆ ಆಲೋಚನೆಯೇ ನನ್ನಲ್ಲಿ ಹೊಸ ಉತ್ಸುಕತೆ ಮೂಡಿಸಿತ್ತು. 1870-1900ರ ಅವಧಿಯಲ್ಲಿ ಬಂಡವಾಳದ ಅತಿಯಾದ ಕೇಂದ್ರೀಕರಣ ಮತ್ತು ಸಾಂದ್ರೀಕರಣಗಳು ಅಮೆರಿಕದಲ್ಲಿ ದಿಗಿಲು ಹುಟ್ಟಿಸುವಂಥ ಅಸಮಾನತೆಗಳನ್ನು ಹುಟ್ಟುಹಾಕುತ್ತಿತ್ತಷ್ಟೇ. ಆ ಸಂದರ್ಭದ ಬಗ್ಗೆ ನಾನೇನು ಓದಿದ್ದೇನೆಂದು ಸ್ವಲ್ಪ ನೆನಪಿಸಿಕೊಳ್ಳುತ್ತೇನೆ. ಅಂದಿನ ಸರ್ಕಾರಗಳು ತಮ್ಮದೊಂದಷ್ಟು ನರಿಪಾಲನ್ನು ಪಡೆದುಕೊಳ್ಳುತ್ತಾ ಕಾನೂನುಬಾಹಿರವಾಗಿ ದೊಡ್ಡಮಟ್ಟದಲ್ಲಿ ಖಾಸಗಿ ಸಂಪತ್ತನ್ನು ಶೇಖರಿಸಿಕೊಳ್ಳಲು ಅವಕಾಶ ಮಾಡಿಕೊಟ್ಟದ್ದರಿಂದಲೇ ಅಮೆರಿಕದಲ್ಲಿ ಅಂಥಾ ಅಪಾರ ಅಸಮಾನತೆ ಸೃಷ್ಟಿಯಾಯಿತು. ಲೂಟಿ-ಸುಲಿಗೆಯಂಥ ದುರ್ಮಾರ್ಗಗಳ ಮೂಲಕ ತಮ್ಮ ಸಂಪತ್ತನ್ನು ಹೆಚ್ಚಿಸಿಕೊಂಡವರನ್ನು ಅಮೆರಿಕದಲ್ಲಿ ರಾಬರ್ ಬ್ಯಾರನ್-ಹಗಲುದರೋಡೆ ಹಣವಂತರೆಂದು ಕರೆಯುತ್ತಾರೆ. ಇವರ ದುರಾಚಾರಗಳನ್ನು ಬಯಲಿಗೆಳೆಯಲೆಂದೇ ಅಮೆರಿಕದಲ್ಲಿ ಮಕ್‌ರೇಕರ್‌ಗಳು (ಹೊಲಸು ಹೊರತೆಗೆಯುವವರು ಅಥವಾ ದುರಾಚಾರ ವಿರೋಧಿಗಳು) ಮತ್ತು ಮಕ್‌ರೇಕರ್ ಪತ್ರಿಕೋದ್ಯಮ ಅಸ್ತಿತ್ವಕ್ಕೆ ಬಂದಿತು. ಈ ಸಾಹಸಿಗಳು ಸಾರ್ವಜನಿಕರ ಹಿತಾಸಕ್ತಿ ಇದ್ದ ಪ್ರತಿಯೊಂದರಲ್ಲೂ ಮೂಗು ತೂರಿಸುತ್ತಿದ್ದರು ಮತ್ತು ಅಲ್ಲಿ ಕಂಡುಬಂದದದ್ದನ್ನು ಮುಲಾಜಿಲ್ಲದೆ ಜಗಜ್ಜಾಹೀರು ಗೊಳಿಸುತ್ತಿದ್ದರು.. ಅವರು ಬಯಲುಗೊಳಿಸುತ್ತಿದ್ದ ಹೊಲಸಿನಲ್ಲಿ ಇರುತ್ತಿದ್ದದ್ದು ಕಾರ್ಪೊರೇಟ್ ಮೋಸ ಮತ್ತು ರಾಜಕೀಯ ಭ್ರಷ್ಟಾಚಾರಗಳೆಂಬ ಅವಳಿ ಅನೈತಿಕತೆಗಳು. ತಾವು ಬಯಲುಗೊಳಿಸುತ್ತಿದ್ದ ದುರಾಚಾರಗಳನ್ನು ಕಂಡು ಜಾಗೃತರಾಗುವ ಜನತೆ ಈ ಸಾಮಾಜಿಕ ಅನಿಷ್ಟಗಳನ್ನು ಕೊನೆಗಾಣಿಸಲು ಮುಂದಾಗುತ್ತಾರೆಂದು ಅವರು ಭಾವಿಸಿದ್ದರು. 1990ರ ನಂತರದಲ್ಲಿ ಭಾರತವೂ ಸಹ ತನ್ನದೇ ಆದ ರಾಬರ್ ಬ್ಯಾರನ್‌ಗಳ ಮತ್ತು ಪ್ರಭಾವಿ ಮತ್ತು ಭ್ರಷ್ಟ ರಾಜಕಾರಣಿಗಳ ಕೂಟದಿಂದಾಗಿ ನಲುಗುತ್ತಿದೆ. ಹೀಗಾಗಿ ಇವತ್ತಲ್ಲ ನಾಳೆ ನಮ್ಮಲ್ಲೂ ಈ ಮಕ್‌ರೇಕರ್-ಹೊಲಸು ಹೊರಹಾಕುವ- ಪತ್ರಿಕೋದ್ಯಮವು ಬರಲಿದ್ದು ಅವುಗಳ ಅತ್ಯಂತ ಅಧಿಕೃತ ಮತ್ತು ನಿಖರ ಬರಹಗಳು ನನ್ನ ಪತ್ರಿಕೆಯಲ್ಲೂ ಪ್ರಕಟಗೊಂಡು ಜನರಿಗೆ ತಲುಪಬೇಕೆಂಬುದು ನನ್ನ ಆಶಯವಾಗಿತ್ತು.

ಜಾಕ್: ಆದರೆ ಎಲ್ಲೋ ಏನೋ ಎಡವಟ್ಟಾಗುತ್ತಿದದ್ದು ಸ್ಪಷ್ಟವಾಗಿತ್ತು ರೋಸ್. ಮೇಲಾಗಿ ನೀನು ನಿನ್ನ 'ಮೂಲ ಸಾಮರ್ಥ್ಯ'ದ ಪರಿಧಿಯಿಂದ ಪಕ್ಕಕ್ಕೆ ಸರಿಯುತ್ತಿದ್ದೆ.

ರೋಸ್: ಇಲ್ಲ, ಖಂಡಿತಾ ಇಲ್ಲ, ಜಾಕ್. ನಾವು 'ಮೂಲ ಸಾಮರ್ಥ್ಯ' ಇತ್ಯಾದಿಗಳೆಂಬ ಆ ಕಾರ್ಪೊರೇಟ್ ಆಡಳಿತವರ್ಗದ ಭಾಷೆಯಲ್ಲಿ ಮಾತನಾಡುವುದು ಬೇಡ. ಬೋಫೋರ್ಸ್ ಹಗರಣದ ಸಂದರ್ಭದಲ್ಲೇ ನನ್ನ ಸಂಪಾದಕೀಯ ತಂಡ ಈ ಅಂಶಗಳ ಬಗ್ಗೆ ಚರ್ಚಿಸಿ ಒಂದು ನಿಲುವಿಗೆ ಬಂದಿತ್ತು. ತನಿಖಾ ಪತ್ರಿಕೋದ್ಯಮವು ವಿಷಯದ ಸತ್ಯಾಸತ್ಯತೆಗಳ ಬಗ್ಗೆ ನಿಖರತೆಯನ್ನು ನಿರೀಕ್ಷಿಸುತ್ತದೆ. ತಾನು ನಿಜಕ್ಕೂ ಪ್ರಜಾಸತ್ತೆಯ ನಾಲ್ಕನೇ ಆಧಾರಸ್ತಂಭವಾಗಿ ಉತ್ಸಾಹಯುತ ಮತ್ತು ಸತ್ವಯುತ ಪತ್ರಿಕೋದ್ಯಮವನ್ನು ಮಾಡಬೇಕೆಂದು ಬಯಸಿದಲ್ಲಿ ಅದು ಸಾರ್ವಜನಿಕ ವಿಷಯಗಳ ಬಗ್ಗೆ ತಾನೇ ಮೂಲ ಸಂಶೋಧನೆಗಳಿಗೆ ಇಳಿಯಬೇಕಾಗುತ್ತದೆ. ಸಹಜವಾಗಿಯೇ ಇಂಥಾ ಒಂದು ಸಾಹಸದಲ್ಲಿ ತೊಡಗಬೇಕೆಂದರೆ ಅಂಥಾ ಜಾಣ್ಮೆ ಮತ್ತು ಅನುಭವವುಳ್ಳ ಪತ್ರಕರ್ತರೂ ಮತ್ತು ಸಾಕಷ್ಟು ಸಂಪನ್ಮೂಲಗಳು ಬೇಕಾಗುತ್ತವೆ. ಆದರೆ ಇಂದಿನ ನವ ಉದಾರವಾದಿ ಯುಗದಲ್ಲಿ ಅಂಥಾ ಪತ್ರಿಕೋದ್ಯಮದ ಗತಿಯೇನಾಗುತ್ತದೆಂಬುದು ಎಲ್ಲರೂ ಬಲ್ಲರು. ಪ್ರಭಾವಿಗಳ ಮತ್ತು ಶಕ್ತಿಶಾಲಿ ಕಾರ್ಪೊರೇಟ್‌ಗಳ ದುರಾಚಾರಗಳನ್ನು ಆಧಾರಸಹಿತ ಬಯಲುಗೊಳಿಸಿದರೂ ಅದರ ಬಗ್ಗೆ ಇದ್ದಕ್ಕಿದ್ದಂತೆ ಪತ್ರಿಕಾವಲಯದಲ್ಲಿ ಒಂದು ಸ್ಮಶಾನ ಮೌನ ಎದುರಾಗುತ್ತದೆ. ಅದರ ಬಗ್ಗೆ ಮುಖ್ಯವಾಹಿನಿ ವ್ಯಾಪಾರಿ ಪತ್ರಿಕೆಗಳಲ್ಲಿ ವರದಿಯಾಗುವುದಿಲ್ಲ ಅಥವಾ ಅಂಥಾ ಸುದ್ದಿಯನ್ನು ಬೆಂಬತ್ತಿ ತನಿಖೆಯನ್ನೂ ಮುಂದುವರೆಸುವುದಿಲ್ಲ. ಇಲ್ಲಿ ಪತ್ರಿಕಾಧರ್ಮವೆಂಬುದು ಸೆರೆಯಲ್ಲಿದೆಯೇ ವಿನಃ ಸ್ವತಂತ್ರವಾಗಿಲ್ಲ. ಹೀಗಾಗಿ ಒಂದು ಆಧಾರಸಹಿತವಾದ ಅಧಿಕೃತ ತನಿಖಾ ಪತ್ರಿಕೋದ್ಯಮವು ನನ್ನ ಒಡೆಯರ ಮತ್ತು ದೊಡ್ಡ ದೊಡ್ಡ ಪ್ರಭಾವಿಗಳ ಮತ್ತು ಸಿರಿವಂತರ ನಡುವೆ ಘರ್ಷಣೆಯನ್ನು ತಂದೊಡ್ಡುವುದಂತೂ ಖ

ಆದರೆ ಇಲ್ಲಿ ಇನ್ನೊಂದು ವಿಷಯವ ಗಮನದಲ್ಲಿಟ್ಟುಕೊಳ್ಳಲೇಬೇಕು. ಈ ಮಧ್ಯೆ ಯಾ ತನಿಖಾ ಪತ್ರಿಕೋದ್ಯಮ ಎಂದು ಚಾಲ್ತಿಯಲ್ಲಿ ಅದರಲ್ಲಿನ ಬಹುಪಾಲು ವಿಷಯಗಳು ಸರ್ಕಾರದಲ್ಲಿ ಉದ್ಯಮಸಂಸ್ಥೆಯಲ್ಲಿರುವ ಮಾಹಿತಿದಾರರು ಮಾಡಿದ ಮಾಹಿತಿಗಳ ವರದಿಗಳಷ್ಟೇ ಆಗಿರ ವಿಷಯಗಳ ಸತ್ಯಾಸತ್ಯತೆಯ ಬಗ್ಗೆ ವಿವಾದ ಪತ್ರಕರ್ತರು ನಿಜದ ಆಳ ತಿಳಿಯಲು ಬ ಸುರಿಸಬೇಕಾಗುತ್ತದೆ. ಆದರೆ ಬಹಳಷ್ಟು ಪತ್ರಕರ್ತರು ಶ್ರಮವನ್ನೇ ತೆಗೆದುಕೊಳ್ಳುವುದಿಲ್ಲ, ಆದರೆ ನಾವು ಅ ತನಿಖಾ ಪತ್ರಿಕೋದ್ಯಮ ನಡೆಸಲು ಬೇಕಿರುವ ಹಣ ಸಂಪನ್ಮೂಲವನ್ನು 'ಲಾಭದ ಉದ್ದೇಶವಿಲ್ಲದ ಉದ್ಯಮ ಒಕ್ಕೂಟ' (ನಾನ್ ಪ್ರಾಫಿಟ್ ಕಾರ್ಪೊರ ಕಾಂಪ್ಲೆಕ್ಸ್)ವೆಂದು ಈಗ ಖ್ಯಾತವಾಗಿರುವ ಸಂಸ್ಥೆ ಪಡೆದುಕೊಂಡೆವು. ಆ ಸಂಸ್ಥೆಯ ಬಗ್ಗೆ ಇಲ್ಲಿ ಒಂದ ಮಾತುಗಳನ್ನು ಹೇಳಲೇಬೇಕು. ಇತರ ಎಲ್ಲಾ ಉದಾ ಪ್ರಗತಿಪರ ಸರ್ಕಾರೇತರ ಸಂಸ್ಥೆಗಳ ರೀತಿ ನಾನೂ ನನ್ನ ವೆಚ್ಚದ ಒಂದಷ್ಟು ಭಾಗವನ್ನು ಈ 'ಲಾಭೋದ್ದೇಶ ಉದ್ಯಮಪತಿಗಳ ಒಕ್ಕೂಟ'ದ ಅತಿ ಸಿರಿವಂತ ಪಡೆದುಕೊಳ್ಳುತ್ತಿದ್ದೇನೆ. ಆದರೆ ಈ ಉದ್ಯಮಪತಿಗಳ ನನ್ನಲ್ಲಿ ಆಳವಾಗಿ ಬೇರೂರಿ ಮುಂದುವ ಕೊಂಡುಬಂದಿರುವ ಕ್ರಾಂತಿಕಾರಿ ಧೋರಣೆಗ ಕ್ರಮೇಣವಾಗಿ ಮೊಂಡುಗೊಳಿಸುತ್ತಾ ನನ್ನನ ವ್ಯವಸ್ಥೆಯೊಳಗೆ ಸೆಳೆದುಕೊಂಡುಬಿಡುತ್ತದೆ ಎಂಬ ಆತಂಕವೂ ನನ್ನನ್ನು ಕಾಡುತ್ತಿದೆ.


ಜಾಕ್: ರೋಸ್, ಭಾರತದ ನಾಗರಿಕ ಮತ್ತು ಪ್ರಜಾತಾಂತ್ರಿಕ ಹಕ್ಕುಗಳ ಸಂಘಟ ಬಹಳಷ್ಟು ಸ್ವತಂತ್ರ ತನಿಖೆಗಳನ್ನು ಶೋಧನೆಗಳನ್ನು ನಡೆಸುತ್ತಾ ಬಂದಿವೆ. ಅದು ಭಾರತದ ಪ್ರಭುತ್ವಗಳೇ ಕ್ರೂರವಾಗಿ, ವ್ಯವಸ್ಥಿ ಮಾನವಹಕ್ಕುಗಳ ಉಲ್ಲಂಘನೆಯನ್ನು ನಡೆಸಿ ಮತ್ತು ಅಂಥಾ ಸಂದರ್ಭಗಳಲ್ಲಿ ಅಸ್ತಿತ್ವದ ಕಾನೂನು ವ್ಯವಸ್ಥೆಗಳು ನ್ಯಾಯವನ್ನು ಒದಗ ವಿಫಲವಾದಾಗ ಈ ನಾಗರಿಕ ಹಕ್ಕುಗಳ ಸಂ ಸ್ವತಂತ್ರ ಮತ್ತು ನಿಖರವಾದ ಸಂಶೋಧನೆ ನಡೆಸಿ ಸತ್ಯವನ್ನು ಹೊರತಂದಿವೆ. ಸತ್ಯಶೋಧನೆಗಳು ಭಾರತ ಪ್ರಭುತ್ವದ ಸ್ವೇಚ ಮತ್ತು ಕಾನೂನುಬಾಹಿರಗಳ ವಿ ಅಭಿಪ್ರಾಯವನ್ನು ಮತ್ತು ಅಂತಸ್ಸಾಕ್ಷಿ ರೂಪಿಸುವ ಕೆಲಸವನ್ನು ಮಾಡಿವೆ. ಉದಾಹ 1984ರ ನವೆಂಬರ್‌ನಲ್ಲಿ ಸಿಖ್ ಸಮುದಾ ಮೇಲೆ ಪ್ರಭುತ್ವದ ಬೆಂಬಲದೊಂದಿಗೆ ದಾಳಿಗಳ ಬಗ್ಗೆ ಪೀಪಲ್ಸ್ ಯೂನಿಯನ್ ಡೆಮಾಕ್ರಾಟಿಕ್ ರೈಟ್ಸ್ (ಪಿಯುಡಿಆರ್) ಪೀಪಲ್ಸ್ ಯೂನಿಯನ್ ಫಾರ್ ಸಿ ಲಿಬರ್ಟೀಸ್ (ಪಿಯುಸಿಎಲ್) ಸಂಸ್ಥೆಗಳು ಜಂಟಿ ಹೊರತಂದ 'ಹೂ ಆರ್ ದಿ ಗಿಲ್ಟಿ?' (ತಪ್ಪಿತಸ್ಥರು ಯ ಎಂಬ ವರದಿಯು ಅಂಥ ಆಳವಾದ ಮತ್ತು ನಿಖ ಸತ್ಯಶೋಧನೆಯ ಫಲಿತವಾಗಿತ್ತು. ಅದರ ಕರಡು ಪತ್ರಿಕೆಯಲ್ಲೂ ಪ್ರಕಟವಾಗಿತ್ತು. ಅಂಥಾ ಪ್ರಬಲವಾದ ಗಟ್ಟಿಯಾದ ತನಿಖಾ ವರದಿಗಳನ್ನು ನೀನು ಈ ಪ್ರಕಟಿಸಬೇಕೆಂದು ನಾನು ಬಯಸುತ್ತೇನೆ. ತನ್ನ ಗಟ್ಟಿ ಸತ್ಯಶೋಧನೆ ಮತ್ತು ಸುಸಂಬದ್ಧ ಹಾಗೂ ತಕ ವಾದಗಳಿಂದಾಗಿ ಈಗಲೂ 'ಹೂ ಆರ್ ದಿ ವರದಿಯು ಅತ್ಯುತ್ತಮ ತನಿಖಾ ವರದಿಯ ಮಾದರಿಯ

ರೋಸ್: ಹೌದು ಜಾಕ್. ಖಂಡಿತಾ ನಾವ ಮಾಡುತ್ತೇವೆ. ಆ ವಿಷಯದಲ್ಲಿ ನಾನು ಅದೃಷ್ಟ ಏಕೆಂದರೆ ನನ್ನ ಲೇಖಕರು ಸರ್ಕಾರದ ನೀತಿಗಳ ವಿಮರ್ಶೆ ಮಾಡುವಾಗ ಅವು ಅಲ್ಪಸಂ ಆಳುವವರ್ಗಗಳ ಮತ್ತು ದೊಡ್ಡ ಉದ್ಯಮಪ ಆಸಕ್ತಿಗಳಿಗೆ ಎಷ್ಟು ಪ್ರಯೋಜನಕಾರಿಯಾಗಿದೆ ಎಂಬು ಹೆಚ್ಚಾಗಿ ಬಹುಸಂಖ್ಯಾತ ಜನತೆಯ ಬದುಕಿನ ಏನು ಪರಿಣಾಮ ಬೀರುತ್ತಿದೆ ಎಂಬುದನ್ನು ಅ ತೀರ್ಮಾನಕ್ಕೆ ಬರುತ್ತಾರೆ. ಆದರೆ ಅದರ ಜೊತೆಗೆ ನವ ಉದಾರವಾದಿ ಯುಗದಲ್ಲಿ ಆರೋಗ್ಯ ವಿಮೆ ಬದುಕುವುದೆಂದರೇನು ಎಂಬ ಬಗ್ಗೆ, ಸರಿಯಾದ ಸೌಲಭ್ಯಗಳಿಲ್ಲದಿರುವುದರ ಬಗ್ಗೆ ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳಿಸಬೇಕಾದ ಅನಿವಾರ್ಯತೆಯ ಕ ಅಥವಾ ಸದಾ ಬಡತನ ಮತ್ತು ತೀವ್ರ ಸಂಕಷ್ಟದ ಭೀತಿ ನಡೆಸಬೇಕಾಗಿರುವ ಬದುಕಿನ ಬಗ್ಗೆ ಆ



▶▶

ನೆಹರೂ ಕುಟುಂಬದ ವಿರುದ್ಧ ಹಳಸಿದ ಮಸಾಲೆ ಸಾಕು



ಒಂದು ಪತ್ರ

'ಗಾಂಧೀ' ಎಂಬ ಕುಲನಾಮ ಇಂದಿರಾ ಗಾಂಧಿಗೆ ಅವರ ಪಾರ್ಸಿ ಗಂಡ ಫಿರೋಜ್ ಗಾಂಧಿಯಿಂದ ಬಂದಿದ್ದು ಎಂದು ಎಲ್ಲಾ ಭಾರತೀಯರಿಗೆ ಗೊತ್ತಿದೆ. ಆದರೆ ಈ ನಿಜಸಂಗತಿ ಸಂಘಿಗಳ ಕೊಳಕು ಬುದ್ಧಿಗೆ ಅಪಥ್ಯವಾಗಿದೆ. ಅದಕ್ಕಾಗಿ ಕುತ್ಸಿತ ಸಂಘಿಗಳು ದುರುದ್ದೇಶದಿಂದ ಜವಾಹರಲಾಲ್ ನೆಹರೂ ಇವರ ಹಿರಿಯರ ಕುಲನಾಮ 'ಖಾನ್' ಆಗಿತ್ತು ಎಂಬ ನೀಚ ಕಥೆ ಕಟ್ಟಿ ತಮ್ಮ ಕೇಸರಿ ಮೀಡಿಯಾದಲ್ಲಿ ಹರಡುತ್ತಿದ್ದಾರೆ. ನೆಹರೂ ಬಗ್ಗೆ ಸಂಘಿಗಳಿಗೆ ಇಷ್ಟೊಂದು ದ್ವೇಷಕ್ಕೆ ಮೂಲ ಕಾರಣವೇನೆಂದರೆ- ಮಹಾತ್ಮಾ ಗಾಂಧೀಜಿಯನ್ನು ನತ್ತೂರಾಮ್ ಘೋಡ್ಸೆ ಕೊಂದ ಮೇಲೆ ಆಗಿನ ಪ್ರಧಾನಿ ನೆಹರೂ ಮತ್ತು ಗೃಹಮಂತ್ರಿ ಸರ್ದಾರ್ ಪಟೇಲ್ ಆರೆಸ್ಸೆಸ್ಸನ್ನು ನಿಷೇಧಿಸಿದರು. ಈ ನಿಷೇಧದಿಂದ ಸ್ವಾತಂತ್ರ್ಯದ ನಂತರ ಇಪ್ಪತ್ತು ವರ್ಷಗಳೊಳಗೆ ಭಾರತವನ್ನು ಹಿಂದೂತ್ವ ರಾಷ್ಟ್ರ ಮಾಡಬೇಕೆಂಬ ಆರೆಸ್ಸೆಸ್ ಕುಯೋಜನೆ ವಿಫಲವಾಯಿತು. ತಮ್ಮ ಆ ನೀಚ ಗುರಿ ವಿಫಲದ ಕಿಚ್ಚು ಚೆಡ್ಡಿಗಳ ಅಂತರಾಳದಲ್ಲಿ ಇಂದಿಗೂ ಉರಿಯುತ್ತಿದೆ. ಅದಕ್ಕಾಗಿ ನೆಹರೂ ಮನೆತನದ ಹೆಸರ ಮೇಲೆ ಕೆಸರು ಎರಚಿ ನೆಹರೂರವರ ಚಾರಿತ್ರ್ಯಹನನ ಮಾಡಿ ಅವರ ಹಿರಿಯರು ಮುಸ್ಲಿಮರಾಗಿದ್ದರು ಹಾಗೂ ಕುಲನಾಮ 'ಖಾನ್' ಆಗಿತ್ತು ಎಂದು ಸುಳ್ಳು ಕಥೆ ಕಟ್ಟಿ ಚೆಡ್ಡಿಗಳು ನೆಹರೂ ಕುಟುಂಬದ ಮೇಲೆ ಈಗಲೂ ಸೇಡು ತೀರಿಸಿ ವಿಕೃತ ಆನಂದಪಡುತ್ತಿದ್ದಾರೆ ಅಷ್ಟೇ.

ಗಾಂಧೀಜಿ ಹತ್ಯೆಯ ನಂತರ ಆರೆಸ್ಸೆಸ್ಸನ್ನು ನಿಷೇಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಸರ್ದಾರ್ ಪಟೇಲರು. ಆದರೆ ಸರ್ದಾರ್ ಪಟೇಲರ ಬಗ್ಗೆ ಆರೆಸ್ಸೆಸ್ಸಿಗರಲ್ಲಿ ಸೇಡು ಭಾವನೆ ಇದ್ದರೂ ಅದನ್ನು ಬಹಿರಂಗವಾಗಿ ತೋರಿಸುವ ಧೈರ್ಯವಿಲ್ಲ. ಕಾರಣ ನೆಹರೂರಂತೆ ಸರ್ದಾರ್ ಪಟೇಲರ ಚಾರಿತ್ರ್ಯಹನನ ಮಾಡಲು ಚೆಡ್ಡಿಗಳು ಪ್ರಯತ್ನಿಸಿದರೆ ಗುಜರಾತಿನ ಪ್ರಬಲ ಪಾಟಿದಾರ್ ಪಟೇಲ್ ಜನಾಂಗದವರು ಸಂಘಿಗಳನ್ನು ಗುಜರಾತ್ ರಾಜ್ಯದಿಂದಲೇ ಒದ್ದು ಓಡಿಸುವರು ಎಂಬ ಭಯ ಸಂಘಿಗಳಿಗೆ ಈಗಲೂ ಇರುವುದರಿಂದ ಅವರು ಸರ್ದಾರ್ ಪಟೇಲರ ಮೇಲೆ ಸೇಡು ತೀರಿಸುವ ಕುತ್ಸಿತ ಯೋಚನೆ ಮಾಡುತ್ತಿಲ್ಲ.

ಮುಂಬೈ ಹಾಗೂ ಗುಜರಾತಿನಲ್ಲಿ ನೆಲೆ ನಿಂತಿರುವ ಪಾರ್ಸಿಗಳ ಕುಲನಾಮದ ಬಗ್ಗೆ ದಕ್ಷಿಣ ಭಾರತೀಯರಿಗೆ ಜ್ಞಾನ ತುಂಬಾ ಕಡಿಮೆ. 1958ರ ಸುಪ್ರಸಿದ್ಧ ಬೀಮಲ್ ರಾಯ್ ನಿರ್ದೇಶನದ ಹಿಂದಿ ಚಲಚಿತ್ರ 'ಯಹೂದಿ' ನಿರ್ಮಿಸಿ ಅದರಲ್ಲಿ ಮುಖ್ಯ ಪಾತ್ರ ಮಾಡಿರುವವರು ಸೊಹ್ರಾಬ್ ಮೋದಿ ಎಂಬ ಪಾರ್ಸಿ. ಇವರು ತಮ್ಮ ಸಹೋದರ ಕೇಕಿ ಮೋದಿ ಜತೆ ಕೂಡಿ 26 ಹಿಂದಿ ಚಿತ್ರ ನಿರ್ಮಿಸಿ ಅದರಲ್ಲಿ ಮುಖ್ಯ ಪಾತ್ರ ವಹಿಸಿದ್ದಾರೆ. ಸೊಹ್ರಾಬ್ ಮೋದಿ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ವಿಜೇತರು. ಇವರ ಹೆಚ್ಚಿನ ಚಿತ್ರಗಳಲ್ಲಿ ದಿಲೀಪ್ ಕುಮಾರ್ ಮತ್ತು ಮೀನಾಕುಮಾರಿ ನಟಿಸಿರುವರು. ಹಾಗಾದರೆ ಈ ಪಾರ್ಸಿ ಸೊಹ್ರಾಬ್ ಮೋದಿ ಚೆಡ್ಡಿಗಳ 'ಫೇಕು ಮೋದಿಯ' ದೊಡ್ಡಪ್ಪನೇ?

ಇಂದಿರಾ ಗಾಂಧಿ, ರಾಜೀವ್, ರಾಹುಲ್ ಇವರು 'ನಕಲಿ ಗಾಂಧಿ' ಎಂದು ಚೆಡ್ಡಿಗಳು ಗೇಲಿ ಮಾಡುತ್ತಾರೆ. ಹಾಗಾದರೆ ಫೇಕು ನರೇಂದ್ರ ಸಹ 'ನಕಲಿ ಮೋದಿ' ಆದಂತಾಯಿತು ತಾನೇ. ಆದರೆ ತಮ್ಮದೇ ಪಕ್ಷದ ಮೇನಕಾ ಮತ್ತು ವರುಣ್ ಇವರಿಗೆ 'ನಕಲಿ ಗಾಂಧಿ' ಎಂದು ಚೆಡ್ಡಿಗಳು ಲೇವಡಿ ಮಾಡದಿರುವುದು ವಿರೋಧಾಭಾಸ.

ದಾದಾಭಾಯಿ ನವರೋಜಿ, ದೀನಷಾ ಮೆಹತಾ, ರುಸ್ತುಮ್ ಸಿಧ್ವಾ, ಫಿರೋಜ್ ಗಾಂಧೀ, ಶಾಪುರ್ಜಿ ಸಕ್ಲತವಾಲ, ಭಿಕಾಜಿ ಕಾಮ, ವೀರ್ ಖುರ್ಷಿದ್ ನಾರಿಮನ್, ಫೋಪಿಬೆನ್ ಮೋದಿ, ಪೇರಿಬೆನ್ ಶಾಹಾ, ಆದಿಲ್ ಪಟೇಲ್ ಇವರು ಹಿರಿಯ ಪಾರ್ಸಿ ಸ್ವಾತಂತ್ರ್ಯ ಹೋರಾಟಗಾರರು. ಇವರಲ್ಲಿ ಹೆಚ್ಚಿನವರ ಕುಲನಾಮ ಗುಜರಾತಿ ಹಿಂದೂಗಳಲ್ಲೂ ಇದೆ. ಹಾಗಾದರೆ ಈ ಪಾರ್ಸಿಗಳೆಲ್ಲ ನಕಲಿ ಹೆಸರು ಇಟ್ಟುಕೊಂಡಿದ್ದೇ? ನಮ್ಮ ಸೇನಾ ದಂಡನಾಯಕ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಇವರು ಚೆಡ್ಡಿಗಳ ನಕಲಿ ಎನ್ಕೌಂಟರ್ ಸ್ಪೆಷಿಯಲಿಸ್ಟ್ ಅಮಿತ್ ಶಾನ ಚಿಕ್ಕಪ್ಪ ಇರಬಹುದೇ? ಮಹಾನ್ ವಿಜ್ಞಾನಿ ಹೋಮಿ ಭಾಭಾ ಇವರು ರಾಮದೇವ್ ಬಾಬಾನ ಮಾವ ಇರಬಹುದೇ? ಪಾರ್ಸಿ ಟೆಸ್ಟ್ ಕ್ರಿಕೆಟಿಗರಾದ ನಾರಿ ಕಾಂಟ್ರ್ಯಾಕ್ಟರ್, ಫಾಲಿ ಉಮ್ರಿಗಾರ್, ಫಾರೂಕ್ ಇಂಜಿನಿಯರ್, ರೂಸಿ ರುಸ್ತುಂಜಿ ಮೋದಿ, ರೂಸಿ ಪಟೇಲ್, ರೂಸಿ ಸೂರ್ತಿ ಇವರೆಲ್ಲಾ ಗುಜರಾತಿನ ಬನಿಯಾ ಮತ್ತು ಜೈನರ ಅಪ್ಪಂದಿರಿರಬಹುದೇ? ರೂಸಿ ರುಸ್ತುಂಜಿ ಮೋದಿ 1946 ರಿಂದ 1952 ವರೆಗೆ ಭಾರತೀಯ ಟೆಸ್ಟ್ ಕ್ರಿಕೆಟ್ ಟೀಮಿನಲ್ಲಿ ಆಡಿದ್ದಾರೆ. ಜೀವನದಲ್ಲಿ ಎಂದೂ ಕ್ರಿಕೆಟ್ ಬ್ಯಾಟ್ ಹಿಡಿಯದ ಫೇಕು ಮೋದಿ ರೂಸಿ ಮೋದಿಯವರ ಸಂಬಂಧಿಕರೇ? ಉದ್ಯಮಿ ಅರ್ದೇಶಿರ್ ಮರ್ಚೆಂಟ್ ಮತ್ತು ಕ್ರಿಕೆಟಿಗ ವಿಜಯ್ ಮರ್ಚೆಂಟ್ ಇವರಿಬ್ಬರೂ ಅಣ್ಣ ತಮ್ಮಂದಿರೇ? ಕ್ರಿಕೆಟಿಗ ರೂಸಿ ಪಟೇಲ್ ಮತ್ತು ಉದ್ಯಮಿ ಜೇಮ್ಷೆಡ್ ಪಟೇಲ್ ಇವರು ಬಿಜೆಪಿಯ ಆನಂದಿಬೆನ್ ಪಟೇಲರ ಭಾವಂದಿರೇ? ಕರ್ನಾಟಕದ ಈಗಿನ ರಾಜ್ಯಪಾಲ ವಜುಬಾಯ್ ವಾಲಾ ಇವರು ಸ್ವಾತಂತ್ರ್ಯ ಹೋರಾಟಗಾರ ಶಾಪೂರ್ಜಿ ಸಕ್ಲಾತ್ ವಾಲಾ ಇವರ ಸಂಬಂಧಿಕರೇ?

ಕುಲನಾಮದ ಜಾಡು ಹಿಡಿದುಹೋದರೆ ಸುಳ್ಳಿನ ಸರದಾರ ನರೇಂದ್ರ ಮೋದಿ ಮತ್ತು ನಕಲಿ ಎನ್ಕೌಂಟರ್ ವೀರ ಅಮಿತ್ ಶಾ ಇಬ್ಬರೂ ವಿದೇಶಿ ಪರ್ಶಿಯನ್ ರಕ್ತದವರೇ ಎಂದಾಯಿತು ಅಲ್ಲವೇ? ಗುಜರಾತಿ ಬನಿಯಾ ಮತ್ತು ಜೈನರ ಕುಲನಾಮಗಳಾದ - ಮೆಹತಾ, ಶಾಹ, ಶಾ, ಗಾಂಧೀ, ಮೋದಿ, ರೂಪಾನಿ, ಅಂಬಾನಿ, ಅದಾನಿ ಇವೆಲ್ಲಾ ಉಪನಾಮ ಪಾರ್ಸಿಗಳಲ್ಲೂ ಇವೆ. ಪಟೇಲ್ ಎಂಬ ಉಪನಾಮ ಸಹ ಪಾರ್ಸಿಗಳಲ್ಲಿ ದೊಡ್ಡ ಸಂಖ್ಯೆಯಲ್ಲಿದೆ. ಹತ್ತನೇ ಶತಮಾನದಲ್ಲಿ ಅರಬಿ ದಾಳಿಕೋರರು ಇರಾನ್ ಮೇಲೆ ದಾಳಿ ಮಾಡಿದಾಗ ಜರೋಷ್ಟ್ರೀಯನ್ ಧರ್ಮದ ಅಗ್ನಿಪೂಜಕ ಪಾರ್ಸಿಗಳು ಇರಾನಿನಿಂದ ತಪ್ಪಿಸಿಕೊಂಡು ಹಲವಾರು ಮೀನುಗಾರರ ದೋಣಿಗಳಲ್ಲಿ ಭಾರತದ ಗುಜರಾತ್ ತೀರಕ್ಕೆ ಬಂದು ಇಳಿದಾಗ ಅಲ್ಲಿಯ 'ರಾಣಾ' ಎಂಬ ಹಿಂದೂ ಅರಸ ಅವರಿಗೆ "ನವಸಾರಿ" ಮತ್ತು 'ಸೂರತ್' ಎಂಬಲ್ಲಿ ನೆಲೆ ಕಲ್ಪಿಸಿ ಕೇವಲ ಮೂರು ನಿಬಂಧನೆ ವಿಧಿಸುತ್ತಾನೆ. ಅವೆಂದರೆ "ಮೊದಲನೆಯದಾಗಿ ನೀವು ನಿಮ್ಮ ಪರ್ಶಿಯನ್ ಭಾಷೆ ತೊರೆದು ನಮ್ಮ ಗುಜರಾತಿ ಭಾಷೆ ಮಾತನಾಡಬೇಕು. ಎರಡನೆಯದಾಗಿ ನಿಮ್ಮ ಹೆಂಗಸರು ಮತ್ತು ಗಂಡಸರು ನಮ್ಮಲ್ಲಿಯ ರೀತಿಯಲ್ಲಿ ಬಟ್ಟೆ ಧರಿಸಬೇಕು. ಮೂರನೆಯದಾಗಿ ನೀವು ವಜ್ರದ ವ್ಯಾಪಾರಿಗಳಾದ್ದರಿಂದ ಗುಜರಾತಿನ ವ್ಯಾಪಾರಿ-ಬನಿಯಾಗಳ ಕುಲನಾಮ ಧರಿಸಬಹುದು" ಎಂಬುದಾಗಿ. ಹಾಗಾಗಿ ಬಹಳಷ್ಟು ಪಾರ್ಸಿಗಳಿಗೆ ಬನಿಯಾ-ಜೈನರ ಕುಲನಾಮ ಇದೆ. ನವಸಾರಿಯಲ್ಲಿ ಪಾರ್ಸಿಗಳು ಒಂದು ಸಾವಿರ ವರ್ಷ ಹಿಂದೆ ಭಾರತದಲ್ಲಿ ನೆಲೆಯೂರಿದಾಗ ಕಟ್ಟಿದ ಮೊಟ್ಟಮೊದಲ ಅಗ್ನಿ ದೇವಾಲಯ ಇಂದಿಗೂ ಇದ್ದು ಅಲ್ಲಿ ಪಾರ್ಸಿಗಳು ಇರಾನಿನಿಂದ ತಂದ ಮೂಲ ಪವಿತ್ರ ಅಗ್ನಿ ಇಂದಿಗೂ ಉರಿಯುತ್ತಿದೆ, ಅಂದರೆ ಸರಣಿಯಲ್ಲಿ ಗಂಧದ ಕಟ್ಟಿಗೆ ಹಾಕಿ ಅದು ಆರದಂತೆ ಕಾಪಾಡಿಟ್ಟಿದ್ದಾರೆ! ನವಸಾರಿ ಮತ್ತು ಸೂರತ್‌ನಲ್ಲಿ 1000 ವರ್ಷಗಳ ಹಿಂದೆಯೇ ವಜ್ರದ ಉದ್ಯಮ ಮೊಟ್ಟ ಮೊದಲು ಸ್ಥಾಪಿಸಿದ್ದು ಪಾರ್ಸಿಗಳೇ. ಇವತ್ತಿಗೂ ಸೂರತಿನ ಪಾರ್ಸಿಗಳಲ್ಲಿ ಗಾಂಧೀ ಮೋದಿ ಶಾ ಮೆಹತಾ ಎಂಬ ಕುಲನಾಮದ ಅನೇಕ ಕುಟುಂಬಗಳಿವೆ. ಆದರೆ ಬ್ರಿಟಿಷರು ಬಂದಮೇಲೆ ಅವರ ಪ್ರಭಾವದಿಂದ ಮುಂಬೈಯಲ್ಲಿ ನೆಲೆಸಿದ ಅನೇಕ ಪಾರ್ಸಿಗಳು ತಮ್ಮ ಕುಲನಾಮವನ್ನು ತಮ್ಮ ಹೊಸ ವೃತ್ತಿಗೆ ಅನುಗುಣವಾಗಿ ಇಂಗ್ಲಿಷಿನಲ್ಲಿ - ಇಂಜಿನಿಯರ್, ಕಾಂಟ್ರ್ಯಾಕ್ಟರ್, ಮರ್ಚೆಂಟ್ ಅಥವಾ ತಮ್ಮ ಊರಿನ ಹೆಸರಾದ ಸೂರತ್‌ವಾಲಾ, ಬರೋಡಾವಾಲಾ, ಬಿಲಿಮೋರಿಯಾ, ಬಲ್ಸಾರ್‌ವಾಲಾ ಎಂದು ಬದಲಾಯಿಸಿದರು. ನಾನೇ ನವಸಾರಿ ಮತ್ತು ಬಲ್ಸಾರ್(ವಲ್ಸಾಡ್)ನಲ್ಲಿ ಬ್ಯಾಂಕ್ ಉದ್ಯೋಗದಲ್ಲಿದ್ದಾಗ ಹಿಂದೂ ಬನಿಯಾ ಹೆಸರಿನ ಅನೇಕ ಪಾರ್ಸಿಗಳು ನಮ್ಮ ಬ್ಯಾಂಕಿನ ಗ್ರಾಹಕರಾಗಿದ್ದರು.

ಭಾರತದಲ್ಲಿ ಪಾರ್ಸಿ ಜನಾಂಗದ ವಲಸೆಯ ಇತಿಹಾಸ ಮತ್ತು ನಮ್ಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಅವರ ಕೊಡುಗೆ ಹಾಗೂ ಬೃಹತ್ ಪಾರ್ಸಿ ಉದ್ಯಮಿಗಳಾದ ಟಾಟಾ, ಗೋದ್ರೇಜ್, ವಾಡಿಯಾ, ಕೂಪರ್ ಇವರ ಅದ್ವಿತೀಯ ಕೊಡುಗೆ ಬಗ್ಗೆ ಮಾಹಿತಿ ಬೇಕಾದರೆ ಗೂಗಲ್‌ನಲ್ಲಿ ಸುಲಭವಾಗಿ ಸಿಗುತ್ತದೆ. ಜತೆಗೆ ಅದರಲ್ಲಿ ಪಾರ್ಸಿಗಳ ಕುಲನಾಮಗಳ ಮಾಹಿತಿಯೂ ಸಿಗುತ್ತದೆ.

ನನಗೆ ಗೊತ್ತು ನಾನು ಮೇಲೆ ಬರೆದಿದ್ದೆಲ್ಲಾ ನೀರಿನಲ್ಲಿ ಹೋಮ ಎಂದು. ಕಾರಣ ಕುತ್ಸಿತ ಚೆಡ್ಡಿಗಳಿಗೆ ನೈಜ ಇತಿಹಾಸ ಯಾವತ್ತಿಗೂ ಬೇಡ. ಅವರಿಗೆ ಕೇವಲ ನೆಹರೂ ಕುಟುಂಬದ ವಿರುದ್ಧ ಹಾಗೂ ಮುಸ್ಲಿಮರ ವಿರುದ್ಧ ಇತಿಹಾಸ ತಿರುಚಿ ಏನಾದರೂ ಕೊಳಕು ಸುದ್ದಿ ಸಾಮಾಜಿಕ ಜಾಲತಾಣದಲ್ಲಿ ಹಬ್ಬಿಸಲು ಹಳಸಿದ ಮಸಾಲೆ ಸಿಕ್ಕರೆ ಅಷ್ಟೇ ಸಾಕು!

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

12 ◀◀

ಮಾನವಶಾಸ್ತ್ರಜ್ಞ(ಎಕಾನಾಮಿಕ್ ಆಂಥ್ರೋಪಾಲಜಿಸ್ಟ್)ರ ಹೊಸಬಗೆಯ ವಿಶ್ಲೇಷಣಾತ್ಮಕ ಲೇಖನಗಳನ್ನೂ ಪ್ರಕಟಿಸಬೇಕಾಗುತ್ತದೆ. ಶೋಷಕ ಮತ್ತು ದಮನಕಾರಿ ಸಾಮಾಜಿಕ ಸಂಬಂಧಗಳಿಂದಾಗಿಯೇ ಇಂಥಾ ದುರ್ಭರ ಪರಿಸ್ಥಿತಿಗಳು ಹುಟ್ಟಿಕೊಂಡಿವೆ.

ಜಾಕ್: ರೋಸ್, ಆಗಿನಿಂದಲೂ ನಾವು ಈ ಸಾಪ್ತಾಹಿಕದ ಅರ್ಧಭಾಗವಾದ ಪತ್ರಿಕೋದ್ಯಮಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸುತ್ತಿದ್ದೇವೆ. ಆದರೆ ಇದರ ಮತ್ತರ್ಧ ಭಾಗವಾದ ಶೈಕ್ಷಣಿಕ ವಿದ್ವತ್ತಿನ ವಿಷಯಗಳ ಬಗ್ಗೆಯೂ ಅಷ್ಟೇ ಗಮನಕೊಡಬೇಕೆಂದು ನೀನು ಭಾವಿಸುವುದಿಲ್ಲವೇ?

ರೋಸ್: ಹೌದು ಅದು ಎಂಥಾ ಸಂಪಾದಕರಿಗೂ ದೊಡ್ಡ ಸವಾಲಿನ ವಿಷಯವೇ. ಅದೇರೀತಿ ತನಿಖಾ ಪತ್ರಿಕೋದ್ಯಮದ ಹಿನ್ನೆಲೆಯಿಂದ ಬಂದ ಸಂಪಾದಕರಿಗೂ ಇದು ಸವಾಲಿನ ವಿಷಯವೇ. ಹಾಗೆ ನೋಡಿದರೆ ಇತಿಹಾಸ, ಸಮಾಜಶಾಸ್ತ್ರ ಅಥವಾ ರಾಜಕೀಯ ಶಾಸ್ತ್ರಗಳ ವಿದ್ವತ್ತಿನ ಅಗತ್ಯಗಳನ್ನು ಪೂರೈಸಬಲ್ಲ ಸಾಮರ್ಥ್ಯವು ಅರ್ಥಶಾಸ್ತ್ರದ ಬಗ್ಗೆ ವಿದ್ವತ್ತುಳ್ಳ ಸಂಪಾದಕರಿಗೂ ಇಲ್ಲದೇ ಹೋಗಬಹುದು. ಅಂಥಾ ಸಂದರ್ಭಗಳಲ್ಲಿ ಹೊಸ ಸಂಪಾದಕರು ಏನು ಮಾಡಬಹುದೆಂದರೆ ತನ್ನ ಮಿತಿಗಳನ್ನು ಅರ್ಥಮಾಡಿಕೊಂಡು ಸಮಾಜವಿಜ್ಞಾನದ ಪ್ರತಿಯೊಂದು ಶಾಖೆಗಳ ಸಂಪಾದಕೀಯ ಸಲಹೆಗಾರರ ಸಲಹೆಗಳನ್ನು ಆಧರಿಸಿ ತೀರ್ಮಾನಗಳನ್ನು ತೆಗೆದುಕೊಳ್ಳಬಹುದು. ಆದರೆ ಈ ಪ್ರತಿಯೊಂದು ಶಾಖೆಗಳ ವಿದ್ವಾಂಸರ ಜೊತೆ ಸಂಪಾದಕರು ರೂಢಿಸಿಕೊಳ್ಳುವ ವಿಶ್ವಾಸಾತ್ಮಕ ಮತ್ತು ಬೌದ್ಧಿಕ ಸಂಬಂಧಗಳು ಮಾತ್ರ ಪತ್ರಿಕೆಯ ವಿದ್ವತ್ತಿನ ಗುಣಮಟ್ಟದ ಮುಂದುವರಿಕೆಯನ್ನು ಖಾತರಿಪಡಿಸಬಲ್ಲದು. ಇದಲ್ಲದೆ ಸಂಪಾದಕರು ಖಂಡಿತವಾಗಿ ಭಾರತದ ಬೌದ್ಧಿಕ ವಲಯದ 'ಹಿನ್ನೀರಾಗಿ' ಉಳಿದುಕೊಂಡಿರುವ ಯುವ ಮತ್ತು ಪ್ರತಿಭಾಶಾಲಿ ವಿದ್ವಾಂಸರನ್ನು ಗುರುತಿಸುವ, ಪ್ರೋತ್ಸಾಹಿಸುವ ಮತ್ತು ಬೆಳೆಸುವ ಕೆಲಸವನ್ನು ಮಾಡುತ್ತಾ ಅವರ ಅತ್ಯುತ್ತಮ ಬರಹಗಳನ್ನು ಪತ್ರಿಕೆಗೆ ನೀಡಲು ಮನಒಲಿಸುವ ಕೆಲಸವನ್ನೂ ಮಾಡಬೇಕಾಗುತ್ತದೆ.

ಜಾಕ್: ರೋಸ್, ನಿನ್ನ ಮುಂದಿನ ಸಂಪಾದಕರಲ್ಲಿ ನೀನು ಏನೇನನ್ನು ನಿರೀಕ್ಷಿಸುತ್ತೀಯಾ?

ರೋಸ್: ಅತ್ಯಂತ ಮುಖ್ಯವಾಗಿ ಲಿಬರಲ್ (ಉದಾರವಾದಿ) ಚಿಂತನೆಯುಳ್ಳವರಾಗಿರಬೇಕು. ಆದರರ್ಥ ಅವರು ಎಡಪಂಥೀಯ ಚಿಂತನೆಯುಳ್ಳವರೇ ಆಗಿರಬೇಕು ಎಂದೇನಲ್ಲ, ನನ್ನ ಮಟ್ಟಿಗೆ ಲಿಬರಲ್ ಸಂಪಾದಕರೆಂದರೆ ಒಂದು ಸಾಧಾರ ಮತ್ತು ಅಧಿಕೃತ ಇತಿಹಾಸ ಪ್ರಜ್ಞೆಯ ಆಧಾರದಲ್ಲಿ ಯಾವುದೇ ಭೀತಿ ಅಥವಾ ಪ್ರೀತಿಯಿಲ್ಲದೆ ಸತ್ಯವನ್ನು ಪ್ರತಿಪಾದನೆ ಮಾಡಬಲ್ಲ ನಿಷ್ಕಳಂಕ ಬದ್ಧತೆ ಇರುವವರು; ವೈಜ್ಞಾನಿಕ ವಿಧಾನಗಳನ್ನು ಎತ್ತಿಹಿಡಿಯುವವರು ಮತ್ತು ಜಗತ್ತಿನ ವಿದ್ಯಮಾನಗಳನ್ನು ಪ್ರಶ್ನಿಸುವ ಮತ್ತು ವಿಮರ್ಶಾತ್ಮಕವಾಗಿ ನೋಡುವ ಧೋರಣೆಯುಳ್ಳವರು. ನನಗೆ ನನ್ನ ಸಂಸ್ಥಾಪಕ ಸಂಪಾದಕರಾದ ಸಚಿನ್ ಚೌಧರಿಯವರ ನೆನಪು ಬರುತ್ತದೆ. ಎರಡನೆಯದಾಗಿ ಅವರು ತಮ್ಮ ಅಂತಃಸಾಕ್ಷಿಗೆ ಬದ್ಧವಾಗಿ ವರ್ತಿಸಬೇಕು ಮತ್ತು ಹಾಗೆ ಮಾಡುವಾಗ ತನ್ನ ಕ್ರಿಯೆಗಳು ತನ್ನ ಸಹವರ್ತಿಗಳ ಮೇಲೆ ಎಂಥಾ ಪರಿಣಾಮಗಳನ್ನು ಬೀರಬಹುದೆಂಬುದರ ಬಗ್ಗೆ ಸಂಪೂರ್ಣ ಎಚ್ಚರವನ್ನು ಹೊಂದಿರಬೇಕು. ಅಂದರೆ ಪ್ರತಿಯೊಬ್ಬ ವ್ಯಕ್ತಿಯೂ ಮುಖ್ಯರಾದವರೇ ಎಂಬ ಧೋರಣೆ ಉಳ್ಳವರಾಗಿರಬೇಕು...ಅಂಥ ವ್ಯಕ್ತಿಗಳು ಮಾತ್ರ ಕೃಷ್ಣರಾಜ್ ಮತ್ತು ರಜನಿ ಎಕ್ಸ್ ದೇಸಾಯಿಯಂಥವರು ಹುಟ್ಟುಹಾಕಿ ಸಿ.ರಾಮಮನೋಹರ ರೆಡ್ಡಿಯಂಥವರು ಜೀವಂತವಾಗಿ ಮುಂದುವರೆಸಿಕೊಂಡು ಹೋಗಲು ಶ್ರಮಿಸಿದಂಥಾ ಪ್ರಜಾತಾಂತ್ರಿಕ ಮತ್ತು ಆದರ್ಶಮಯ ಶ್ರಮ ಸಂಸ್ಕೃತಿಯನ್ನು ಮತ್ತೆ ಪುನರ್‌ಸ್ಥಾಪಿಸಲು ಶಕ್ತರಾಗುತ್ತಾರೆ. ಒಂದು ದೂರಗಾಮಿ ದೃಷ್ಟಿಯಿಂದ ನೋಡಿದರೆ ನಾನು ಒಂದು ದೊಡ್ಡ ಸಂಸ್ಥೆಯಾಗಿದ್ದೇನೆ. ಹೆಚ್ಚೆಚ್ಚು ಅಸಮಾನತೆಗಳು ಮತ್ತು ಶ್ರೇಣೀಕರಣಗಳು ಸಂಸ್ಥೆಯೊಳಗೆ ಕಾಲಿಟ್ಟಿವೆ. ಹಾಗಿದ್ದಾಗಲೂ ರಾಮಮನೋಹರ್ ಅವರು ಕೆಲಸದ ಜಾಗದಲ್ಲಿ ಪ್ರಜಾತಾಂತ್ರಿಕ ಸಂಸ್ಕೃತಿಯನ್ನು ಜೀವಂತವಾಗಿಟ್ಟಿದ್ದರು. ಒಬ್ಬ ಅಧಿಕಾರಶಾಹಿ ಮತ್ತು ಸ್ವಕೇಂದ್ರಿತ ವ್ಯಕ್ತಿತ್ವವುಳ್ಳವರು ನಾಯಕತ್ವ ವಹಿಸಿದಾಗ ಮಾತ್ರ ಅಂಥಾ ಶ್ರಮಸಂಸ್ಕೃತಿಯು ನಾಶವಾಗುತ್ತದೆ.

ಮೂರನೆಯದಾಗಿ EPWನಲ್ಲಿರುವ ಎಕಾನಾಮಿಕ್ (ಆರ್ಥಿಕ) ಅಂಶವು ಪೊಲಿಟಿಕಲ್ (ರಾಜಕೀಯ) ಮತ್ತು ಸಮಾಜಶಾಸ್ತ್ರೀಯ ಅಂಶಗಳಿಂದ ಮೂಲೆಗುಂಪಾಗಿಬಿಟ್ಟಂತೆ ಕಾಣುತ್ತದೆ. ಆ ಸಮತೋಲನವನ್ನು ಮರುಸ್ಥಾಪಿಸಬೇಕೆಂದರೆ ಭಿನ್ನಶಿಸ್ತಿನ ಹಾಗೂ ಅಸಾಂಪ್ರದಾಯಿಕ (ಹೆಟೆರೋಡಾಕ್ಸ್) ಅರ್ಥಶಾಸ್ತ್ರಜ್ಞರೊಬ್ಬರು ಸಂಪಾದಕರಾಗಬೇಕಾಗುತ್ತದೆ. ?ಹೆಟೆರೋಡಾಕ್ಸ್ ಎಂದರೆ ನವ ಉದಾರವಾದಿ (ನಿಯೋ ಕ್ಲಾಸಿಕಲ್) ಅಲ್ಲದ ಇತರ ಎಲ್ಲಾ ಅರ್ಥಶಾಸ್ತ್ರದ ಧೋರಣೆಗಳನ್ನು ಸೂಚಿಸುವ ಒಂದು ಸಮಾಸ ಪದ?. ಹಾಗೂ 'ಓಪನ್ ವೇಯ್ನ್ಸ್ ಆಫ್ ಲ್ಯಾಟಿನ್ ಅಮೆರಿಕ' ಎಂಬ ಪ್ರಖ್ಯಾತ ಪುಸ್ತಕದ ಕರ್ತೃ, ಉರುಗ್ವೆಯ ಲೇಖಕ ಎಡ್ವರ್ಡ್ ಗೆಲಿಯಾನೋ ಒಮ್ಮೆ ಹೇಳಿದಂತೆ: "ಬರವಣಿಗೆಯನ್ನು ಪ್ರಾಮಾಣಿಕತೆಯಿಂದ ಮಾಡಬೇಕು. ನಮ್ಮ ಮಾತುಗಳ ಮೂಲಕವೇ ನಾವು ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುತ್ತೇವೆ. ನಾನಾಡುವ ಮಾತೇ ನಾನಾಗಿರುತ್ತೇನೆ. ಹೀಗಾಗಿ ಮಾತು ಕೊಟ್ಟರೆ ನನ್ನನ್ನೇ ನಾನು ಕೊಟ್ಟಂತೆ.

ಜಾಕ್: ಓ ನನ್ನ ಪ್ರೀತಿಯ ರೋಸ್. ಅದ್ಭುತ. ನಿನ್ನನ್ನು ನೀನು ಮರುಸ್ಥಾಪಿಸಿಕೊಳ್ಳಲೇ ಬೇಕು. ನೀನು ಮುನ್ನುಗ್ಗಲೇಬೇಕು ರೋಸ್. ಈ ಕರಾಳ ಸಂದರ್ಭದಲ್ಲಿ ನಿನ್ನನ್ನು ನೀನು ಸಾಯಗೊಡಲಾರೆ ಎಂದು ನಾನು ಬಲ್ಲೆ. ನಾನು ನಿನ್ನ ಕಡೆ ಸೆಳೆಯಲ್ಪಟ್ಟದ್ದು ನನ್ನ ಜೀವನದಲ್ಲಿ ಸಂಭವಿಸಿದ ಅತ್ಯುತ್ತಮ ಘಟನೆ. ನಾನು ಅದಕ್ಕಾಗಿ ಕೃತಜ್ಞನಾಗಿದ್ದೇನೆ.

ರೋಸ್: ಜಾಕ್. ಈ ಅನಗತ್ಯ ಬೆಳವಣಿಗೆಗಳ ಮುನ್ಸೂಚನೆಗಳು ನನಗೆ ದೊರೆಯುತ್ತಿದ್ದರೂ ನಾನು ಪರಿಗಣಿಸಲಿಲ್ಲ. ಆದರೆ ಅದು ನನ್ನನ್ನು ಉಳಿಸಿ ಪೋಷಿಸುತ್ತಿದ್ದ ನನ್ನ ಅಸ್ತಿತ್ವದ ತಳಪಾಯವನ್ನು, ತೊಲೆಗಂಬವನ್ನೂ ಮತ್ತು ಸೂರನ್ನೂ ಸಹ ನಾಶಮಾಡಲು ಪ್ರಾರಂಭಿಸಿತ್ತು. ನಿನ್ನ ಮತ್ತು ನನ್ನ ಇಡೀ ಸಂಪಾದಕೀಯ ತಂಡದ ಬೆಂಬಲವಿಲ್ಲದಿದ್ದಲ್ಲಿ ನಾನು ಸಂಪೂರ್ಣವಾಗಿ ನಾಶವಾಗುತ್ತಿದ್ದೆ. ಅದಕ್ಕಾಗಿ ನಾನು ನನ್ನ ಇಡೀ ತಂಡವನ್ನೇ ಅಭಿನಂದಿಸಬೇಕು.

ಜಾಕ್: ಖಂಡಿತಾ. ಆದರೆ ನೀನು ನನಗೆ ಒಂದು ಭರವಸೆಯನ್ನಟ್ಟು ನೀಡಲೇಬೇಕು. ಸಂದರ್ಭವು ಎಷ್ಟೇ ನಿರಾಶಾದಾಯಕವಾಗಿದ್ದರೂ, ಎಂಥದೇ ಗಂಡಾಂತರಗಳು ಎದುರಾದರೂ ನೀನು ಕೈ ಚೆಲ್ಲದೇ ಎದುರಿಸಿ ಯಶಸ್ವಿಯಾಗಿ ಮುಂದುವರೆಯುತ್ತೇನೆ ಎಂದು ಮಾತು ಕೊಡಬೇಕು.

ರೋಸ್: ಇಲ್ಲ ಜಾಕ್. ಖಂಡಿತಾ ನಾನು ಕೈ ಚೆಲ್ಲುವು ದಿಲ್ಲ, ಸಮಸ್ಯೆಯನ್ನು ಎದುರಿಸದೇ ಓಡಿಹೋಗುವುದಿಲ್ಲ. ಮಾತು ಕೊಡುತ್ತೇನೆ.

(ಟೈಟಾನಿಕ್ ಚಿತ್ರಕಥೆಯ ಕೆಲವು ಭಾಗಗಳನ್ನು ಇಲ್ಲಿ ಬಳಸಿಕೊಂಡಿದ್ದೇನೆ. ಆದರೆ ಈ ಬರಹಕ್ಕೂ ಮತ್ತು ಆ ಸಿನಿಮಾಗೂ ಇದಕ್ಕಿಂತ ಹೆಚ್ಚಿನ ಸಾಮ್ಯತೆಗಳಿಲ್ಲ) ■

ಪೇಜಾವರ ಸ್ವಾಮಿಗಳ ಆಪದ್ಧರ್ಮ


ಬ್ರಾಹ್ಮಣ ವರ್ಗವನ್ನು ದುರುಳ ಚಿಂತನೆಯವರು, ಬೇರೆಯವರು ಬೆವರುಸುರಿಸಿ ಬೆಳೆದ ಫಲವನ್ನು ಸುಲಭವಾಗಿ ಉಣ್ಣಲು ಹವಣಿಸುವವರು ಎಂದೆಲ್ಲಾ ಸಾರಾಸಗಟಾಗಿ ತೀರ್ಪುಕೊಟ್ಟುಕೊಂಡರೆ ಅದೊಂದು ಬೆಲೆಯಿಲ್ಲದ ಮೂರ್ಖತನದ ತೀರ್ಮಾನವೆನಿಸುವುದು ಖಂಡಿತ. ಯಾಕೆಂದರೆ, ಬಹಳ ಹಿಂದಿನಿಂದಲೂ ಸಾಮಾಜಿಕ ನ್ಯಾಯಗಳ ಪರವಾಗಿ ತಮ್ಮ ಸಮಾಜವನ್ನು ಎದುರು ಹಾಕಿಕೊಂಡು ಅಪಮಾನವನ್ನು ಎದುರಿಸಿ ಆರೋಗ್ಯಪೂರ್ಣ ಸಮಾಜಕ್ಕಾಗಿ ದುಡಿದವರಲ್ಲಿ ಬ್ರಾಹ್ಮಣ ವರ್ಗದ ಹೆಸರೇ ಮುಂಚೂಣಿಯಲ್ಲಿರುವುದು ಅಲ್ಲಗಳೆಯಲಾಗದ ಸತ್ಯ. ಅದು ಸಮಾಜಸುಧಾರಕ ರಾಜಾರಾಮ್ ಮೋಹನ ರಾಯ್ ಆಗಿರಬಹುದು; ಫುಲೆ, ಪೆರಿಯಾರ್‌ಗಳಂತಹ ಮಹನೀಯರುಗಳಾಗಿರಬಹುದು; ಭೂಮಸೂದೆ ಕಾನೂನನ್ನು ಪ್ರಾಮಾಣಿಕವಾಗಿ ಜಾರಿಗೆ ತಂದ ನೆರೆಯ ರಾಜ್ಯದ ನಂಬೂದರಿಪ್ಪಾಡ್‌ರಂತವರುಗಳಾಗಿರಬಹುದು; ದಲಿತರ ಶಿಕ್ಷಣಕ್ಕಾಗಿ ಬದುಕನ್ನು ಮುಡುಪಾಗಿಟ್ಟ ಕುದ್ಮುಲ್ ರಂಗರಾಯರುಗಳಾಗಿರಬಹುದು.

ಅಷ್ಟೇ ಅಲ್ಲದೇ, ಬ್ರಿಟಿಷರಿಂದ ಸ್ವಾತಂತ್ರ ಸಿಕ್ಕ ಚೊಚ್ಚಲ ವರ್ಷದಲ್ಲಿ ದೇಶವನ್ನು ಯಾವ ದಿಕ್ಕಿಗೂ ಕೊಂಡೊಯ್ಯುವ ಸಾಮರ್ಥ್ಯವಿದ್ದರೂ ತಮ್ಮ ವೈಚಾರಿಕತೆಯನ್ನು ಎಲ್ಲೂ ಬಿಟ್ಟುಕೊಡದೇ ಭಾರತದ ಭವಿಷ್ಯವನ್ನು ಸಂಪ್ರದಾಯವಾದಿಗಳ ಕೈಗೆ ಕೊಟ್ಟು ಇದನ್ನು ಪಾಕಿಸ್ತಾನದ ಕಾಪಿಯಾಗದಂತೆ ಜತನವಾಗಿ ನೋಡಿಕೊಂಡ ಕಾಶ್ಮೀರಿ ಪಂಡಿತ್ ಕುಟುಂಬದ ನೆಹರೂರಂತವರೂ ಇಲ್ಲಿ ಸ್ಮರಣೀಯರೆನಿಸುತ್ತಾರೆ.

ಇಂತಹ ಎಷ್ಟೋ ಮಹನೀಯರುಗಳ ನಡುವೆ ಇವತ್ತಿಗೂ ಸಂಪ್ರದಾಯವಾದಿಗಳ ಪ್ರತಿರೋಧ ಬೆದರಿಕೆಗಳನ್ನೆದುರಿಸಿ ಸಮಾಜಸುಧಾರಣೆ ಹಾಗು ಸಮಾನತೆಗಾಗಿಯೇ ತುಡಿಯುವಂತಹ ಬ್ರಾಹ್ಮಣ ವರ್ಗದ ಅನೇಕಾನೇಕ ಮಹನೀಯರು ನಮ್ಮ ನಡುವೆಯೇ ಇದ್ದಾರೆ. ವಿಶೇಷವೆಂದರೆ ಇಂತವರುಗಳಿರುವುದರಿಂದಲೇ (ಅವರ ಸಂಖ್ಯೆ ಸಣ್ಣದಿದ್ದರೂ ಅದು ಮಹತ್ವದ್ದೇ) ಭಾರತದಲ್ಲಿ ಇನ್ನೂ ಕೂಡ ಉಸಿರಾಡುವಂತಹ ವಾತಾವರಣವಿದೆ ಹಾಗು ಫ್ಯಾಸಿಸ್ಟ್ ಶಕ್ತಿಗಳ ಆಟ ಸುಲಭದಲ್ಲಿ ನಡೆಯುತ್ತಲೂ ಇಲ್ಲವೆನ್ನುವುದು ಅಕ್ಷರಶಃ ಸತ್ಯ.

ಇವತ್ತು ತಾವು ಅಥವ ತಮ್ಮ ಮಕ್ಕಳು ಅತ್ಯುನ್ನತ ಶಿಕ್ಷಣ ಪಡೆದು ಸಾಫ್ಟ್ ವೇರ್ ಇಂಜನಿಯರೋ ಅಥವ ವಿಜ್ಞಾನಿಯಂತಹ ಅತ್ಯುನ್ನತ ಹುದ್ದೆಯಲ್ಲಿದ್ದು ಅಮೆರಿಕಾ ಆಸ್ಟ್ರೇಲಿಯಾದಂತಹ ಆಧುನಿಕ ಬದುಕಿಗೆ ತೆರೆದುಕೊಂಡಂತಹ ದೇಶಗಳಲ್ಲಿ ದುಡಿಯುತ್ತಿದ್ದರೂ ಊರಿಗೆ ಬಂದಾಗ ಜಿಗುಟು ಸಂಪ್ರದಾಯಗಳನ್ನು ಬಿಡದಂತವರು ಇವತ್ತಿಗೂ ಕಾಣಸಿಗುತ್ತಾರೆ. ಅದೇರೀತಿ ಬಹಿರಂಗದಲ್ಲಿ ಸುಧಾರಣಾವಾದದ ಪೋಸು ನೀಡುತ್ತಾ ಅಂತರಂಗದಲ್ಲಿ ಸಂಪ್ರದಾಯದ ಪರ ವಕಾಲತ್ತಿಗೆ ನಿಲ್ಲುವ ದ್ವಂದ್ವವಾದಿಗಳೂ ಇದ್ದಾರೆ. ಅಂತವರಲ್ಲಿ ಮುಂಚೂಣಿಯ ಹೆಸರೆಂದರೆ ಅದು ಉಡುಪಿಯ ಪೇಜಾವರರದ್ದು.


ಪೇಜಾವರರಂತವರು ದಲಿತ ಕೇರಿಗೂ ಪ್ರಯಾಣ ಮಾಡಿ ತಮ್ಮದು ಎಲ್ಲರೂ ಒಂದೇ ಎಂಬ ಭಾವದ ಸಮಾನತಾವಾದ ಎಂದು ತಮ್ಮನ್ನು ತಾವೇ ಬಿಂಬಿಸಿಕೊಳ್ಳುವುದರ ಜೊತೆಜೊತೆಗೇ ಇಡೀ ದೇಶದ ಹಿಂದೂತ್ವದ ಪರವಾಗಿ ಅದಾಗಬೇಕು ಇದಾಗಬೇಕೆಂದು ದೇಶದ ಉನ್ನತ ಸ್ಥಾನದಲ್ಲಿದ್ದವರೊಂದಿಗೆ ತಾಕೀತು ಮಾಡುವ "ಪವರಿನ" ಪೇಜಾವರರು ತಮ್ಮದೇ ಮಠದಲ್ಲಿನ



ಪಂಕ್ತಿಭೇದದ ಬಗ್ಗೆ ನನಗೇನೂ ಮಾಡಲಾಗುವುದಿಲ್ಲ ನಾನು ಅಸಹಾಯಕ ಎಂದು ಕೈಚೆಲ್ಲಿ ಇಬ್ಬಂದಿತನ ತೋರುತ್ತಾರೆ. ನಿಜ ಹೇಳಬೇಕೆಂದರೆ, ಪೇಜಾವರರಂತಹ ಪ್ರಭಾವಿಗಳು ಮನಸ್ಸು ಮಾಡಿದರೆ, ಅಮಾನವೀಯ ಪಂಕ್ತಿಭೇದ, ಮಡೆಸ್ನಾನ, ಇನ್ನಿತರ ಅಸ್ಪೃಶ್ಯತಾ ಆಚರಣೆಗಳನ್ನು ತಮ್ಮದೇ ರೀತಿಯಲ್ಲಿ ದೂರೀಕರಿಸುವುದು ಕಷ್ಟವೇನಲ್ಲ. ಆದರೆ ವೈದಿಕತೆಯ ಸಾಂಪ್ರದಾಯಿಕ ಕಪಿಮುಷ್ಠಿಯಿಂದ ಬಿಡಿಸಿಕೊಳ್ಳಲು ಯಾವ ಆಸಕ್ತಿಯೂ ಇರದ ಹಾಗು ಅದಕ್ಕಾಗೇ ತುಡಿಯುವ ಪೇಜಾವರರು ಇದಕ್ಕೆಲ್ಲ ಸಿದ್ಧವಿಲ್ಲವಾದರೂ ಮೊನ್ನೆ ಸಂಪ್ರದಾಯಕ್ಕೆ ವಿರುದ್ಧವಾಗಿ ತಾವೇ ಆಪದ್ಧರ್ಮ ಪಾಲಿಸಿ ಸುದ್ದಿಯಾದರು.

ಹೌದು, ಉಡುಪಿ ಮಠದಲ್ಲಿ ಪರ್ಯಾಯ ಪೀಠವನ್ನೇರಿದ ಯತಿ ತನ್ನ ಅವಧಿ ಮುಗಿಯುವವರೆಗೆ ರಥಬೀದಿಗಿಂತಲು ಹೊರಗೆ ಕಾಲಿಡಬಾರದೆಂಬ ನಿಯಮವನ್ನು ಮಠ ಇಲ್ಲಿಯತನಕ ಪಾಲಿಸಿಕೊಂಡು ಬಂದಿತ್ತು. ವಾದಿರಾಜರಿಗೂ ಹಿಂದೆ ಈ ಪರ್ಯಾಯ ಎಂಬ ಪೂಜಾ ಕೈಂಕರ್ಯ ಕೇವಲ ಎರಡು ತಿಂಗಳಿಗಷ್ಟೇ ಸೀಮಿತವಿದ್ದ ಕಾರಣ ಈ ನಿಯಮಾವಳಿ ಆವತ್ತು ಸಮಸ್ಯೆಯೆನಿಸಿದ್ದಿರಲಿಲ್ಲ. ಆದರೆ ಅದು ಎರಡು ವರ್ಷಕ್ಕೊಂದು ಬದಲಾದ ಬಳಿಕ ಕಠಿಣವೆನಿಸಿತ್ತು. ತನ್ನ ಪರ್ಯಾಯಾವಧಿಯಲ್ಲಿ ಕೂಗಳತೆಯ ದೂರದಲ್ಲಿ ರಾಜಗೋಪುರ ಕಟ್ಟಿಸಿದ್ದ ಸ್ವಾಮಿಯೊಬ್ಬರು ತಾನೇ ಕಟ್ಟಿಸಿದ ಆ ಗೋಪುರವನ್ನು ಕಂಡದ್ದು ಮಾತ್ರ ತನ್ನ ಪರ್ಯಾಯಾವಧಿ ಮುಗಿದ ಬಳಿಕವಷ್ಟೇ. ಇದೇ ಕಾರಣಕ್ಕೆ ಪೇಜಾವರ ಸ್ವಾಮಿಗಳು ತನ್ನ ಪೀಠಾರೋಹಣದ ಹಿಂದಿನ ದಿವಸ ರಘುಪತಿಭಟ್ಟರ ಪಬ್ ಒಂದನ್ನು ಮಣಿಪಾಲದ ಸಮೀಪದಲ್ಲಿ ತರಾತುರಿಯಲ್ಲಿ ಉದ್ಘಾಟಿಸಿ ಬಂದಿದ್ದರು. ಇಲ್ಲವಾದಲ್ಲಿ ಪೇಜಾವರರ ಡೇಟ್‌ಗೆ ಮತ್ತೆರಡು ವರ್ಷ ಭಟ್ಟರು ಕಾಯಬೇಕಿತ್ತು ಪಾಪ.

ವೈದಿಕರ ಶಾಸ್ತ್ರಗಳಲ್ಲಿ 'ಆಪದ್ಧರ್ಮ' ಎಂಬ ವಿಭಾಗವೊಂದಿಗೆ ಅಂದರೆ ಆಪತ್ ಧರ್ಮ ಅರ್ಥಾತ್ ಆಪತ್ತಿನಲ್ಲಿರುವಾಗ ಅನುಸರಿಸಬಹುದಾದ ಅನುಕೂಲಶಾಸ್ತ್ರ ಎಂದು. ನೀವು ಶೂದ್ರವರ್ಗವನ್ನು ಮುಟ್ಟುವಂತಿಲ್ಲ ಆತನಲ್ಲಿ ಉಣ್ಣುವಂತಿಲ್ಲವಾದರೂ ಜೀವ ಹೋಗುವಂತಹ ಅಥವ ಆಸೆ ತೀರಿಸಿಕೊಳ್ಳಲೇ ಬೇಕಾದಂತಹ 'ಆಪತ್ ಕಾಲ'ದಲ್ಲಿ "ಉಂಡ" ಬಳಿಕ ಅದಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡಿಕೊಂಡರೆ ಸಾಕು ಎಲ್ಲಾ ಸಲೀಸು. ಉದಾಹರಣೆಗೆ ಕರಾವಳಿಯ ದೇಗುಲಕ್ಕೆ ಆದರ ಬ್ರಹ್ಮಕಲಶ ಜೀರ್ಣೋದ್ಧಾರ ಅದೂ ಇದೂ ಎಂದು ಶೂದ್ರರ ಲಾರಿಗಟ್ಟಲೆ ಹೊರೆಕಾಣಿಕೆ ಬರುತ್ತದೆ. ಎಲ್ಲೆಲ್ಲಿಂದಲೋ ಯಾರ್ಯಾರಿಂದಲೋ ಬರುವ ಅವೆಲ್ಲದರ ಮೂಲ ಯಾವುದೋ ಯಾರಿಗ್ಗೊತ್ತು? ದೇವರ ಹಾಗು ಬ್ರಾಹ್ಮಣರ ಮಡಿಮೈಲಿಗೆಗೆ ಇವು ನಿಜಕ್ಕೂ ಸಮಸ್ಯೆಯೇ ತಾನೇ? ಹಾಗಾಗಿ, ಇವನ್ನೆಲ್ಲ ಶುದ್ಧೀಕರಿಸುವ



ಹೊಗಳಿಕೆ ತೆಗಳಿಕೆ

ಕಾರ್ಯ ನಡೆಸಲೇಬೇಕಾಗುತ್ತದೆ. ಅಂದರೆ ಸರಿ... ನೀರಿನಿಂದ ತಿಕ್ಕಿ ತೊಳೆದು ಅಲ್ಲ, ಹೊರೆ ಕಾಣಿಕೆ... ಗುಡ್ಡೆ ಹಾಕಿ ವೈದಿಕರು ಅದರ ಬಳಿ ಮಂತ್ರ ಹೇ... ಸಂಪ್ರೋಕ್ಷಿಸುವುದರ ಮೂಲಕ ಅದು ಏರಿ... ಡಿಟರ್ಜೆಂಟ್ ನಿಂದ ತೊಳೆದಷ್ಟೇ ಕ್ಲೀನಾಗಿ ಬರ... (ಮಾನಸಿಕವಾಗಿ ಅದರ ಕೊಳಕನ್ನು ದೂರೀಕರಿಸಿದ... ಬರುತ್ತದೆ).


ಅಮೆರಿಕಾಕ್ಕೆ ಹೋದ ಪುತ್ತಿಗೆ ಶ್ರೀ... ಪೀಠವೇರಲೇಬಾರದೆಂದು ಆವತ್ತು ಸಂಪ್ರದಾಯದ... ಭಾರೀ ಜಿಗುಟುತನ ತೋರಿ ಸುದ್ದಿ ಮಾಡಿದ್ದ ಪೇಜಾ... ಮೊನ್ನೆ ದೈಹಿಕ ಕಾರಣಗಳಿಗಾಗಿ ಮಠದ ... ಸಂಪ್ರದಾಯವೊಂದನ್ನು ಮುರಿದು ಆಪದ್ಧರ್ಮ... ಪಾಲಿಸಲೇಬೇಕಾಗಿ ಬಂತು. ಅದು ತನ್ನ ಹರ್ನಿಯಾ... ಚಿಕಿತ್ಸೆಗಾಗಿ ರಥಬೀದಿ ದಾಟಿ ಮಣಿಪಾಲ ಆಸ್ಪತ್ರೆ... ದಾಖಲಾಗಿದ್ದದ್ದು. ಈ ರೀತಿಯಾಗಿ ಸಂಪ್ರದಾಯ ಮುರಿ... ಕೃಷ್ಣ ಮಠದಲ್ಲಿ ಯಾವುದೇ ಪ್ರಳಯಗಳಾ... ಅನಾಹುತಗಳಾಗಲೀ ಸಂಭವಿಸಲೇ ಇಲ್ಲ. ಸಂಪ್ರದಾಯ... ನಾವೇ ರಚಿಸಿಕೊಂಡಂತದ್ದು ಅವಶ್ಯಕತೆಗಳಿಗೆ ತಕ್ಕಂತೆ ... ಮುರಿಯುವುದರಲ್ಲಿ ಯಾವ ತಪ್ಪುಗಳೂ ಇಲ್ಲ ... ಸತ್ಯ ಅವರಿಗೀಗ ಅರಿವಾಗಿರಬೇಕು. ಈ ಒಂದು ದೃಷ್ಟಾ... ಮೂಲಕವಾದರೂ ಶೀಘ್ರ ಗುಣಮುಖರಾಗಿ ತಮ್ಮ... ಜಿಗುಟು ಸಂಪ್ರದಾಯಗಳಿಂದ ನಮ್ಮ ಪ್ರೀತಿಯ ಶ್ರೀ... ಹೊರಬರುವಂತಾಗಲಿ ಎಂಬುವುದೇ ನಮ್ಮೆಲ್ಲರ ಹಾ...

- ಓದುಗ, ಮಂಗಳ...

ಭಿಕ್ಷುಕಿ ಶೋಭಾಳನ್ನು ಬಂಧಿಸಬೇ...

ಕರ್ನಾಟಕದಲ್ಲಿ ಎಲ್ಲಾ ಅನುದಾನಿತ ಶಾಲೆಗಳಿಗೆ ... ಆಗುವಂತೆ ಕಲ್ಲಡ್ಕ ಪ್ರಭಾಕರ ಭಟ್ಟನ ಶಾಲೆಗೂ ...





ಆಗಸ್ಟ 23ರ ಸಂಚಿಕೆಯಲ್ಲಿ 'ನನ್ನ ಕೂಸು ಕನ್ನಯ್ಯ ಮನೆಗೆ ಬಂದಾಗ' ಎಂಬ ಲೇಖನ ಓದಿದಾಗ ಗೌರಿ ಅವರ ಮನದಾಳದಲ್ಲಡಗಿದ ತಾಯ ಮಮತೆ ಹೇಗೆ ಉಕ್ಕಿತು ಎಂದು ಗೊತ್ತಾಯಿತು.

ಅಳ್ವಾಸ್‌ನವರು ಶಿಕ್ಷಣ ಕ್ಷೇತ್ರವನ್ನು ಆಳಲು ಹೊರಟ ಹೆಜ್ಜೆಗಳ ದುರಂತ ಕಥನವನ್ನು ಲೇಖನದ ಮೂಲಕ ಜನರಿಗೆ ಚೆನ್ನಾಗಿ ತಿಳಿಸಿದ್ದೀರಿ... ಹಾಗೆಯೇ ರಾಷ್ಟ್ರೀಯವಾದದ ಹುಸಿ ಕಲ್ಪನೆ ಬಿತ್ತುವ ಶಿವಸುಂದರ್ ಅವರ ಇಪಿಡಬ್ಲ್ಯು ಅನುವಾದವೂ ಚೆನ್ನಾಗಿದೆ...


ಹೋದವಾರ ಗೋರಖ್‌ಪುರದಲ್ಲಿ ಮಡಿದ ಮಕ್ಕಳ ನೆನಪಿನಲ್ಲಿ ನನ್ನದೊಂದು ಕವಿತೆ ಇಲ್ಲಿದೆ...

ಮಕ್ಕಳು ಮೆರವಣಿಗೆ ಹೊರಟಿವೆ

ಮೆರವಣಿಗೆ ಹೊರಡಿಸಿವೆ....

ಮನೆಯ ಕವಾಟಗಳ ಬಾಗಿಲಲಿ
ಉಸಿರಾಡುತ್ತಾ ಎದೆಗೆ ಹತ್ತಿರವಾಗಿ
ಒಳಮನೆಯಲಿ ಅರಳಿದ ಮುದ್ದಾದ ಹೂಗಳಿವು..
ಎತ್ತಿಕೊಂಡು ಹೆಗಲ ಮೇಲೆ ಹಾಕಿಕೊಂಡು
ಕುರಿಮರಿ ಆಟ ಆಡಲು ಕಾದ ಹೂಗಳಿಂದು
ತಮ್ಮ ಇರವ ಮರೆತು
ಮೆರವಣಿಗೆ ಹೊರಟಿವೆ
ಸಿಗದ ಉಸಿರ ಹುಡುಕುತ್ತಾ...

ನಳನಳಿಸಿ ಅರಳಬೇಕಾದ ಮೊಗ್ಗುಗಳು
ಮಾತು ಮರೆತು
ಘಮದ ವಾಸನೆಯ ಚೆಲ್ಲಿ ಮೌನವಾಗಿವೆ.



ತ್ರಿವರ್ಣದ ಸಂಭ್ರಮದಲ್ಲಿ
ನಗುತ ಅರಳಿ ಆಡಬೇಕಾದ ಹೂಗಳಿಂದು
ಉಸಿರು ಸಿಗದೆ ಹೂದೋಟ ಮರೆತು
ಮೆರವಣಿಗೆ ಹೊರಟಿವೆ
ಪ್ರಾಣಕ್ಕೆ ಸಿಗದ ಪ್ರಾಣವಾಯು ಹುಡುಕುತ್ತಾ...

ಹಸುಗಲ್ಲಗಳೆಂಬ ಮುದ್ದಾದ ಹೂಗಳು
ಎತ್ತಿಕೊಂಡು ಆಡಿಸಬೇಕಾದ ಕೈಗಳಲಿ
ಹಕಳೆಗಳಾಗಿ ಉದುರಿ ಉಸಿರುಗಟ್ಟಿವೆ
ಮನದ ಸೂತಕವ ಕಳೆವ ಹೂಗಳು
ಸೂತಕದ ಮೆರವಣಿಗೆಗೆ ಸಜ್ಜಾಗಿವೆ
ಸಿಗದ ಉಸಿರು ಹುಡುಕುತ್ತಾ
ಅಪ್ರಮಾಣಿಕತೆಯ ಉತ್ಸವದಲಿ
ಪ್ರಾಣವಾಯುವಿನ ಜೊತೆ ಗುದ್ದಾಡುತ್ತಾ...

ಹೂಗಳನ್ನು ಎತ್ತಿ ಮುದ್ದಾಡುತ್ತಿದ್ದರೆ
ಬದುಕಿನ ಸಂಕಟ ಸತ್ತು ಹೋಗುತ್ತಿತ್ತು
ಆದರಿಂದು,
ಬೆಳಕಿರುವ ಕತ್ತಲಕೋಣೆಯಲಿ ಕಣ್ಣುಮುಚ್ಚಿ
ಜಗದ ಆನಂದಗಳ
ಹುಟ್ಟಿಸಿದವಳ ಉಡಿಯಲಿ ಬಿಟ್ಟು
ಕನಸುಗಳ ಕಮರಿಸುತ್ತಾ
ಹೂಗಳು
ಮೈಮೇಲೆ ಹೂಹಾಕಿಕೊಂಡು
ಮೆರವಣಿಗೆ ಹೊರಟಿವೆ
ಹೂಗಳು
ಕಣ್ಣೀರಿನ ಮೆರವಣಿಗೆ ಹೊರಡಿಸಿವೆ...

■ ರಮೇಶ ಗಬ್ಬೂರ್, ಗಂ...

ಸರಕಾರ ಮಧ್ಯಾಹ್ನದ ಬಿಸಿಯೂಟ ಮಂಜೂರು ಮಾಡಿತ್ತು. ಆದರೆ ಆ ಊಟವನ್ನು ಕೆಳಜಾತಿಯವರು ತಯಾರಿಸುವುದರಿಂದ ತಮ್ಮ ಶಾಲೆಯ ಹೆಚ್ಚಿನ ಮೇಲ್ಜಾತಿ ವಿದ್ಯಾರ್ಥಿಗಳ ಪಾಲಕರಿಗೆ ಅದು ಸಮ್ಮತವಿಲ್ಲ, ಹಾಗಾಗಿ ಈ ಸರಕಾರಿ ಊಟ ತಮಗೆ ಬೇಕಿಲ್ಲ ಎಂದು ಕಲ್ಲಡ್ಕ ಭಟ್ಟ ಸರಕಾರಿ ಯೋಜನೆಯನ್ನು ನಿರಾಕರಿಸಿದ್ದನು. ಮಂಗಳೂರಿನಲ್ಲಿ ಎಲ್ಲೆಡೆ ಹರೆಕೃಷ್ಣ-ಇಸ್ಕಾನ್‌ನವರು ಶಾಲೆಗಳಿಗೆ ಈರುಳ್ಳಿ-ಬೆಳ್ಳುಳ್ಳಿ-ಮೊಟ್ಟೆ ಇಲ್ಲದ ಮಧ್ಯಾಹ್ನದ ಬಿಸಿ ಊಟದ ಸರಕಾರಿ ಗುತ್ತಿಗೆ ಪಡೆದಿರುವಂತೆ ತನ್ನ ಕಲ್ಲಡ್ಕದ ಶಾಲೆಗೂ ಹರೆಕೃಷ್ಣದವರು ಆಹಾರ ಪೂರೈಸಿದರೆ ಅದು ತಮಗೆ ಸಮ್ಮತ ಎಂದು ಹೇಳಿ ಪ್ರಭಾಕರ ಭಟ್ಟ ಹದಿನಾಲ್ಕು ವರ್ಷಗಳ ಹಿಂದೆಯೇ ತನ್ನ ಮೇಲ್ಜಾತಿ ಕೊಳಕು ಮನಸ್ಸನ್ನು ತೋರಿಸಿದ್ದನು. ಆದರೆ ಆಗ ಮಂಗಳೂರಿನ ಹರೆಕೃಷ್ಣದವರು ಅಷ್ಟು ದೂರ ತಮ್ಮಿಂದ ಊಟ ಪೂರೈಸಲು ಆಗುವುದಿಲ್ಲ ಎಂದು ಹೇಳಿದ್ದರಿಂದ ಸರಕಾರಿ ಯೋಜನೆಯನ್ನು ಕಲ್ಲಡ್ಕ ಶಾಲೆಯವರೇ ಖುದ್ದು ಪಡೆಯಲಿಲ್ಲ.

ಕಲ್ಲಡ್ಕ ಭಟ್ಟನ ಆಗಿನ ಮನುವಾದಿ ಮನಸ್ಥಿತಿಯನ್ನು ಮರೆತು ಈಗ ಬೇಬಿ ಕರಂದ್ಲಾಜೆ ಭಿಕ್ಷೆಯ ನಾಟಕ ಆಡುತ್ತಿರುವುದು ಪಕ್ಕಾ ಢೋಂಗಿತನ ಅಷ್ಟೇ. ಬೇಬಿ ಕರಂದ್ಲಾಜೆ ಉಡುಪಿ-ಚಿಕ್ಕಮಗಳೂರಿನ ಸಂಸದೆಯಾಗಿ ಮೂರು ವರ್ಷವಾಯಿತು. ಸಂಸದರ ನಿಧಿಯಿಂದ ಪ್ರತಿಯೊಬ್ಬ ಸಂಸದರಿಗೂ ವಾರ್ಷಿಕ ನಾಲ್ಕು ಕೋಟಿಯಂತೆ ಒಟ್ಟು 12 ಕೋಟಿ ರೂಪಾಯಿ ಈಗಾಗಲೇ ಅವಳಿಗೆ ಸಿಕ್ಕಿದೆ. ಈ ಹನ್ನೆರಡು ಕೋಟಿಯಲ್ಲಿ ಶೋಭಾ ತನ್ನ ಉಡುಪಿ ಕ್ಷೇತ್ರಕ್ಕಾಗಿ ಮೂರು ವರ್ಷದಲ್ಲಿ ಒಂದು ರೂಪಾಯಿಯೂ ಖರ್ಚು ಮಾಡಿಲ್ಲ. ಯಾವಾಗ ನೋಡಿದರೂ ಅವಳು ಇರುವುದು ನೆರೆಯ ಕ್ಷೇತ್ರದ ಕಲ್ಲಡ್ಕ-ಪುತ್ತೂರಿನಲ್ಲಿ ಅಥವಾ ಶಿವಮೊಗ್ಗದಲ್ಲಿ. ಹಾಗಾಗಿ ಉಡುಪಿ ಮತದಾರರು ಅವಳನ್ನು ಗೆಲ್ಲಿಸಿದ್ದಕ್ಕಾಗಿ ತಲೆ ಚಚ್ಚಿಕೊಳ್ಳುತ್ತಿದ್ದಾರೆ.

ಮೇಲಾಗಿ ಕರ್ನಾಟಕ ಭಿಕ್ಷಾಟನಾ ನಿಷೇಧ ಕಾಯ್ದೆ 1975 ರ ಅನ್ವಯ ರಾಜ್ಯಾದ್ಯಂತ ಭಿಕ್ಷಾಟನೆ ನಿಷೇಧಿಸಲಾಗಿದೆ. ಭಿಕ್ಷಾಟನೆಯಲ್ಲಿ ತೊಡಗಿದ ಅಪರಾಧಕ್ಕಾಗಿ ಗರಿಷ್ಠ 3 ವರ್ಷಗಳ ಸಶ್ರಮ ಬಂಧನದ ಶಿಕ್ಷೆಯಿದೆ. ಭಿಕ್ಷುಕರನ್ನು ಕಂಡರೆ ಸರಕಾರದ ಒಂದು ಟೋಲ್ ಫ್ರೀ ನಂಬರಿಗೆ ಫೋನ್ ಮಾಡಿದರೆ ಪೊಲೀಸರು ಬಂದು ಭಿಕ್ಷುಕರನ್ನು ಬಂಧಿಸಿ ಕೊಂಡೊಯ್ಯುತ್ತಾರೆ. ನರಸತ್ತ ಕಾಂಗ್ರೆಸ್ಸಿನವರು ಈ ಕಾನೂನಿನಡಿ ಭಿಕ್ಷುಕಿ ಶೋಭಾಳನ್ನು ಹಿಡಿದು ಜೈಲಿಗೆ ಹಾಕಿಸುವ ಸುವರ್ಣ ಅವಕಾಶ ತಪ್ಪಿಸಿಕೊಂಡರು.

- ರಾಮಕೃಷ್ಣ ಎ.ಕೆ. ಮಂಗಳೂರು

ಹೆಣ್ಣೇಕೆ ಗಂಡನ ಬಲಗಡೆಗೆ ನಿಲ್ಲಬಾರದು?

ಉತ್ತರ ಪ್ರದೇಶದಲ್ಲಿ ಒಂದು ಶಾಲೆಯ ಮುಸ್ಲಿಂ ಪ್ರಿನ್ಸಿಪಾಲರು ಮೊನ್ನೆ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭ ಪಾದರಕ್ಷೆ ತೊಟ್ಟುಕೊಂಡೇ ಧ್ವಜಾರೋಹಣ ಮಾಡಿದ್ದಕ್ಕಾಗಿ ಅವರನ್ನು ಸಂಘಿ ಕಾರ್ಯಕರ್ತರು ಮಾರಣಾಂತಿಕವಾಗಿ ಥಳಿಸಿದರು. ಆದರೆ ಅದೇ ದಿನ ನಮ್ಮ ದೇಶದ ಪ್ರಧಾನಿ ಮೋದಿಯವರು ತಮ್ಮ ವಿದೇಶಿ ಬೂಟು ತೊಟ್ಟುಕೊಂಡೇ ಕೆಂಪುಕೋಟೆಯಲ್ಲಿ ಧ್ವಜಾರೋಹಣ ಮಾಡಿದರು. ಅದರಂತೆ ದಿಲ್ಲಿಯ ಬಿಜೆಪಿ ಕಚೇರಿಯಲ್ಲಿ ಅಮಿತ್ ಶಾ ಹಾಗೂ ಇನ್ನೊಂದೆಡೆ ಗೃಹಮಂತ್ರಿ ರಾಜನಾಥ್ ಸಿಂಗ್ ಸಹ ಪಾದರಕ್ಷೆ ತೊಟ್ಟುಕೊಂಡೇ ಧ್ವಜಾರೋಹಣ ಮಾಡಿರುವ ದೃಶ್ಯ ಟಿವಿಗಳು ಬಿತ್ತರಿಸಿವೆ.

ಬಿಜೆಪಿಯವರು ಸ್ವತಃ ತಮ್ಮ ನೇತಾರರೇ ಪಾದರಕ್ಷೆ ಧರಿಸಿಕೊಂಡು ಧ್ವಜಾರೋಹಣ ಮಾಡಿರುವಾಗ ಬೇರೆ ಯಾವುದೋ ಒಂದು ಸಣ್ಣ ಊರಿನ ಶಾಲೆಯ ಮುಖ್ಯೋಪಾಧ್ಯಾಪಕರು ಪಾದರಕ್ಷೆ ತೊಟ್ಟು ಧ್ವಜಾರೋಹಣ ಮಾಡಿದರೆಂದು ಮಾರಣಾಂತಿಕವಾಗಿ ಥಳಿಸಿರುವುದು ವಿಪರ್ಯಾಸವಲ್ಲದೆ ಇನ್ನೇನು. ಒಂದು ವೇಳೆ ಆ ಮುಖ್ಯೋಪಾಧ್ಯಾಪಕರು ಮುಸ್ಲಿಂ ಆಗಿರದೇ ಹಿಂದೂ ಆಗಿದ್ದರೆ ಅವರನ್ನು ಸಂಘಿ ಗೂಂಡಾಗಳು ಥಳಿಸುತ್ತಿದ್ದರೇ?


ಹಾಗೆ ನೋಡಿದರೆ ಜಗತ್ತಿನ ಎಲ್ಲಾ ದೇಶಗಳಲ್ಲೂ ಅವರವರ ದೇಶದ ಧ್ವಜಾರೋಹಣ ಮಾಡುವಾಗ ಪಾದರಕ್ಷೆ ಧರಿಸಿಯೇ ಧ್ವಜ ಹಾರಿಸುತ್ತಾರೆ. ಆದರೆ ಭಾರತದಲ್ಲಿ ಹಿಂದೆಂದೂ ಇರದ ಪಾದರಕ್ಷೆಯ ಅನಗತ್ಯ ಮಡಿವಂತಿಕೆ ಈಗ ಯಾಕೆ ಒಮ್ಮೆಲೇ ಉದ್ಭವಿಸಿದೆ? ಒಟ್ಟಾರೆ ಮುಸ್ಲಿಮರನ್ನು ಹಿಂಸಿಸಲು ಏನಾದರೂ ಒಂದೇ ಕಳ್ಳ ನೆಪ ಬೇಕು ಅಲ್ಲವೇ? ಅದೇ ಉತ್ತರ ಪ್ರದೇಶದ ಒಂದು ನೆರೆ ಹಾವಳಿಗೊಳಗಾಗಿದ್ದ ಊರಿನ ಶಾಲೆಯಲ್ಲಿ ಸಣ್ಣ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಪ್ರವಾಹಕ್ಕೆ ಹೆದರದೇ ಎದೆಮಟ್ಟದ ನೀರಿನಲ್ಲಿ ನಿಂತು ಧ್ವಜಾರೋಹಣ ಮಾಡಿದರು. ಇದರ ವಿಡಿಯೋ ವೈರಲ್ ಆಗಿದೆ. ಈ ಬಗ್ಗೆ ಸಂಘಿಗಳಿಂದ ಒಂದಕ್ಷರ ಶ್ಲಾಘನೆಯಿಲ್ಲ. ಹಾಗಾದರೆ ಎಂತಹ ವಿಕಾರ ದೇಶಭಕ್ತಿ ಸಂಘಿಗಳದ್ದು?

ನಮ್ಮ ಭಾರತೀಯ ಸಂಸ್ಕೃತಿ ಮತ್ತು ಆಚಾರಗಳಲ್ಲಿ ಎಡಗೈಯಿಂದ ಯಾವುದೇ ಪವಿತ್ರ ಕೆಲಸ ಮಾಡುವುದು ನಿಷೇಧವಿದೆ. ದೇವಸ್ಥಾನಗಳಲ್ಲಿ ಸಣ್ಣ ಮಕ್ಕಳು ತಿಳಿಯದೇ ಪ್ರಸಾದಕ್ಕಾಗಿ ಎಡಗೈ ಚಾಚಿದರೆ ಅರ್ಚಕರು ಮಕ್ಕಳಿಗೆ ಯಾಕೆ ಶಿಷ್ಟಾಚಾರ ಕಲಿಸಿಲ್ಲ ಎಂಬ ರೀತಿಯಲ್ಲಿ ಮಕ್ಕಳ ತಂದೆ-ತಾಯಿಯನ್ನು ಕೆಕ್ಕರಿಸಿ ನೋಡುತ್ತಾರೆ. ಪೆಟ್ರೋಲ್ ಬಂಕಿನಲ್ಲಿಯೂ ವಾಹನ ಸವಾರ ಎಡಗೈಯಲ್ಲಿ ಹಣ ಕೊಟ್ಟರೆ ಅದನ್ನ ಸ್ವೀಕರಿಸಲು ಪೆಟ್ರೋಲ್ ತುಂಬಿಸುವ ಹುಡುಗರು ಹಿಂದೆಮುಂದೆ ನೋಡುತ್ತಾರೆ. ಮಂಗಳೂರಿನಲ್ಲಿಯೇ ಒಮ್ಮೆ ಒಂದು ಬ್ಯಾಂಕಿನಲ್ಲಿ ಕ್ಯಾಶಿಯರ್ ಎಡಗೈಯಲ್ಲಿ ಹಣ ಕೊಟ್ಟಿದ್ದಕ್ಕೆ ಒಬ್ಬ ಮಹಿಳಾ ಗ್ರಾಹಕಿ ದೊಡ್ಡ ರಂಪಾಟ ಮಾಡಿದ್ದನ್ನು ನಾನು ಕಂಡಿದ್ದೇನೆ.

ಆದರೆ ನಮ್ಮ ದೇಶದ ಪ್ರಧಾನ ಮಂತ್ರಿ ಮೋದಿ ಎಲ್ಲಾ ಕೆಲಸಗಳನ್ನೂ ಎಡಗೈಯಲ್ಲಿಯೇ ಮಾಡುತ್ತಾರೆ. ಅವರು ಹುಟ್ಟಿನಿಂದ ಎಡಚ ಇರಬಹುದು ಆದರೆ ಕಡೇಪಕ್ಷ ಕೆಲವು ಪವಿತ್ರ ಕೆಲಸಗಳನ್ನಾದರೂ ಅವರು ಬಲಗೈಯಿಂದ ಮಾಡಬೇಕು. ಮೊನ್ನೆ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಅವರು ದಿಲ್ಲಿಯ ಕೆಂಪು ಕೋಟೆಯಲ್ಲಿ ದೇಶದ ಧ್ವಜ ಅರಳಿಸಲು ಬಳಸಿದ್ದು ಎಡಗೈ. ಅದೇ ಪ್ರಕಾರ ಅವರು ಬೇರೆಡೆ ಸ್ವಾತಂತ್ರ್ಯ ಹೋರಾಟಗಾರರ ಸಮಾಧಿಯ ಮೇಲೆ ಅಥವಾ ಫೋಟೋಗಳ ಮೇಲೆ ಪುಷ್ಪಾರ್ಚನೆ ಮಾಡಲು ಬಳಸುವುದು ಎಡಗೈ. ನಮ್ಮ ಬಸವ ಜಯಂತಿಯಂದು ಮೋದಿ ದಿಲ್ಲಿಯಲ್ಲಿ ಬಸವೇಶ್ವರರ ಪ್ರತಿಮೆಯ ಮೇಲೆ ಹೂಹಾಕಿದ್ದು ಎಡಗೈಯಲ್ಲಿ. ಮೋದಿ ವಿದೇಶಕ್ಕೆ ಹೋದಾಗ ಎಡಗೈ ಬೀಸಿ ಅಲ್ಲಿಯ ಜನರಿಗೆ ಶುಭಾಶಯ ಕೋರುತ್ತಾರೆ. ವಿದೇಶದವರೂ ಎಡಗೈ ಬೀಸಿ ಜನರಿಗೆ ಶುಭಾಶಯ ಕೋರುವುದನ್ನು ಸಾರ್ವಜನಿಕ ಶಿಷ್ಟಾಚಾರದ ವಿರುದ್ಧ ಎಂದು ಪರಿಗಣಿಸುತ್ತಾರೆ. ಒಂದುವೇಳೆ ಬೇರೆ ಪಕ್ಷದ ಪ್ರಧಾನ ಮಂತ್ರಿ ಹೀಗೆ ಪವಿತ್ರ ಕೆಲಸಗಳಿಗೆ ಎಡಗೈ ಬಳಸಿದ್ದರೆ ಇಷ್ಟೊತ್ತಿಗೆ ಹಿಂದೂತ್ವವಾದಿಗಳು ಮತ್ತು ಮೋದಿಯ ಚೇಲಾ ಮಾಧ್ಯಮಗಳು "ಭಾರತದ ಪ್ರಧಾನಿಯಿಂದಲೇ ಭಾರತೀಯ ಸಂಸ್ಕೃತಿಗೆ ಘೋರ ಅವಮಾನ" ಎಂದು ಬೊಬ್ಬಿರಿಯುತ್ತಿದ್ದವು!

ವೈಯಕ್ತಿಕವಾಗಿ ನನಗೆ ಯಾರೂ ದೇವರ ಪೂಜೆ ಸಹಿತ ಯಾವ ಕೆಲಸಕ್ಕೂ ಎಡಗೈ ಬಳಸುವುದಕ್ಕೆ ಆಕ್ಷೇಪಣೆಯಿಲ್ಲ. ಅದು ಪ್ರಕೃತಿದತ್ತವಾಗಿ ಬಂದಿರುವುದು. ಅದನ್ನು ಬದಲಾಯಿಸಬೇಕಾಗಿಯೇ ಇಲ್ಲ. ಅಂತಹ ಮಕ್ಕಳ ಅಭ್ಯಾಸವನ್ನು ಹೆತ್ತವರು ಒತ್ತಾಯದಿಂದ ಬದಲಿಸುವುದೂ ಸರಿಯಲ್ಲ ಎಂದು ಮನೋವಿಜ್ಞಾನಿಗಳೇ ಹೇಳುತ್ತಾರೆ. ಹುಟ್ಟಿನಿಂದ ಎಡಗೈ ಬಳಸುತ್ತಿದ್ದ ಮಕ್ಕಳನ್ನು ಬಲವಂತದಿಂದ ಬಲಗೈ ಉಪಯೋಗಿಸುವಂತೆ ಮಾಡುವುದರಿಂದ ಅವರ ಕ್ರಿಯಾಶೀಲತೆ ಕಡಿಮೆಯಾಗಿ ಕ್ರೀಡೆ-ಕಲೆ-ಬರವಣಿಗೆ ಸಹಿತ ಎಲ್ಲಾ ಕ್ಷೇತ್ರದಲ್ಲೂ ಅವರ ಸಾಮರ್ಥ್ಯ ಮತ್ತು ದಕ್ಷತೆ ತುಂಬಾ ಕಡಿಮೆಯಾಗುತ್ತದೆಯೆಂದು ಮನಶಾಸ್ತ್ರಜ್ಞರ ಅಂಬೋಣ. ಜಗತ್ತಿನೆಲ್ಲೆಡೆ ಪ್ರತಿ ನೂರು ಜನರಲ್ಲಿ ಇಬ್ಬರಾದರೂ ಎಡಗೈ ಬಳಸುವವರು ಇರುತ್ತಾರೆ. ಅವರನ್ನು ಅವರ ಇಷ್ಟದಂತೆ ಯಾವ ಕೈಬೇಕಾದರೂ ಬಳಸಲು ಬಿಡಬೇಕು. ಆದರೆ ನಮ್ಮ ದೇಶದಲ್ಲಿ ಇತ್ತೀಚಿನ ಕೆಲವು ವರ್ಷಗಳಿಂದ ಏನಾದರೂ ಪಿಳ್ಳೆ ನೆವದಲ್ಲಿ ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆಯಾಗಿದೆ ಎಂದು ಕಿರುಚುತ್ತಾ ಬೀದಿಗಿಳಿದು ದಾಂಧಲೆ ಮಾಡಲು ಕೇಸರಿ ಗೂಂಡಾಪಡೆ ಹಾಗೂ ಮೋದಿಯ ಭಕ್ತಗಣ ತುದಿಗಾಲಲ್ಲಿ ಸಿದ್ಧವಾಗಿರುವುದರಿಂದ ನಾನು ಮೋದಿಯವರ ಎಡಗೈ ಪ್ರವರ ಹೇಳಬೇಕಾಯಿತು ಅಷ್ಟೇ. ಮನುಸ್ಮೃತಿಯ ಪ್ರಕಾರವೂ ಹೆಣ್ಣು ಗಂಡಿಗಿಂತ ನಿಕೃಷ್ಟಳೆಂದು ಪರಿಗಣಿಸಿ ಅದರ ಸಂಕೇತವಾಗಿ ಅವಳು ಗಂಡನ ಎಡಗಡೆಗೇ ನಿಲ್ಲಬೇಕು ಎಂಬ ನಿಯಮ ವಿಧಿಸಲಾಗಿದೆ. ಶಿವ-ಪಾರ್ವತಿ, ರಾಮ-ಸೀತೆ, ವಿಷ್ಣು-ಲಕ್ಷ್ಮಿ, ಈ ಎಲ್ಲಾ ದಂಪತಿ ದೇವರ ಚಿತ್ರಗಳಲ್ಲೂ ಹೆಂಡತಿ ಎಡಬದಿಗೆ ನಿಂತಿರುವಂತೆಯೇ ಚಿತ್ರಿಸಲಾಗುತ್ತದೆ. (ಕೇವಲ ಎರಡೆರಡು ಹೆಂಡಿರಿರುವ ಕಾರ್ತಿಕೇಯ ಅಥವಾ ಗಣಪತಿ ಇವರ ವಿಷಯದಲ್ಲಿ ಮಾತ್ರ ಚಿತ್ರಕಾರರಿಗೆ ಪಕ್ಷಪಾತ ಮಾಡಲು ಆಗುತ್ತಿಲ್ಲ ಅಷ್ಟೇ). ಮಹಿಳಾ ಪರ ಸಾಹಿತಿಗಳು ಈ ಅನ್ಯಾಯವನ್ನು ಯಾಕೆ ಎತ್ತಿ ತೋರಿಸುತ್ತಿಲ್ಲ? ಹೆಣ್ಣೇಕೆ ಗಂಡನ ಬಲಗಡೆಗೆ ನಿಲ್ಲಬಾರದು ಎಂದು ಯಾಕೆ ಯಾರೂ ಕೇಳುತ್ತಿಲ್ಲ?

- ಕ್ಷಿತಿಜ್ ಕೆ ಹೆಗಡೆ, ಮಂಗಳೂರು




ಗೋರಖ್‌ಪುರ ದುರಂತ, ಹಸುವಿನ ಆಕ್ಸಿಜನ್

ಕೇರಳದಲ್ಲಿ ರೌಡಿಗಳ ಮಾರಾಮಾರಿಯಲ್ಲಿ ಸತ್ತ ಒಬ್ಬ ಆರೆಸ್ಸೆಸ್ ಕಾರ್ಯಕರ್ತನ ಮನೆಗೆ ಮೊನ್ನೆ ಕೇಂದ್ರ ವಿತ್ತಮಂತ್ರಿ ಅರುಣ್ ಜೇಟ್ಲಿ ಹೋದಾಗ ಅದಕ್ಕೆ ತಗುಲಿದ ಸರಕಾರಿ ಖರ್ಚು ರೂ. 72 ಲಕ್ಷವಂತೆ. ಆದರೆ ಗೋರಖಪುರದಲ್ಲಿ ಅವನದೇ ಬಿಜೆಪಿ ಸರಕಾರ ಆಕ್ಸಿಜನ್ ಪೂರೈಕೆದಾರನಿಗೆ ಕೇವಲ ರೂ. 65 ಲಕ್ಷದ ಬಿಲ್ಲನ್ನು ಐದು ತಿಂಗಳಿಂದ ಬಾಕಿ ಮಾಡಿ ಕೊನೆಗೆ 105 ಮಕ್ಕಳ ಮರಣಕ್ಕೆ ಕಾರಣವಾಗಿದೆ. ಮಂತ್ರಿಗಳ ಹಾರಾಟಕ್ಕೆ ಕೋಟಿ ಕೋಟಿ ಸುರಿಯಲಾಗುತ್ತದೆ, ಆದರೆ ಸರಕಾರೀ ಆಸ್ಪತ್ರೆಯ ಆಕ್ಸಿಜನ್ ಪೂರೈಕೆದಾರನಿಗೆ ಐದು ತಿಂಗಳಿಂದ ಬಿಲ್ ಕೊಡಲು ಹಣವಿಲ್ಲವಂತೆ. ಹೊಟ್ಟೆಯಲ್ಲಿ ಕರುಳಿಲ್ಲದಿದ್ದರೂ ಜುಟ್ಟಿಗೆ ನಕಲಿ ದೇಶಭಕ್ತಿ.

ಕೆಲವೇ ದಿನಗಳ ಹಿಂದೆ ಯೋಗಿ ಆದಿತ್ಯನಾಥನೇ ಹೇಳಿದ್ದು- ಭಾರತೀಯ ತಳಿಯ ಗೋವು "ಆಕ್ಸಿಜನ್ ಉಸಿರಾಡಿ ಆಕ್ಸಿಜನನ್ನೇ ಹೊರಬಿಡುವ ಜಗತ್ತಿನ ಏಕೈಕ ಸಸ್ತನಿ ಪ್ರಾಣಿ" ಹಾಗೂ ಹಸುವಿನ ತುಪ್ಪ, ಮೂತ್ರ ಮತ್ತು ಸೆಗಣಿ ಮಿಕ್ಸ್ ಮಾಡಿ ಯಜ್ಞಕುಂಡದ ಬೆಂಕಿಯಲ್ಲಿ ಉರಿಸಿದರೆ ಅದರಿಂದಲೂ ಭಾರಿ ಆಕ್ಸಿಜನ್ ವಾತಾವರಣದಲ್ಲಿ ಬಿಡುಗಡೆ ಆಗುತ್ತದೆಯಂತೆ. ಜತೆಗೆ ಶುದ್ಧ ಚಿನ್ನವೂ ದೊರೆಯುತ್ತದಂತೆ. ಗೋವಿನ ಸೆಗಣಿ ತಿಂದರೆ ಕ್ಯಾನ್ಸರ್ ಮತ್ತು ಏಡ್ಸ್ ಗುಣವಾಗುತ್ತದಂತೆ. ದಿನಾ ಬೆಳಗ್ಗೆ ಹಸುವಿನ ಬೆನ್ನ ಮೇಲೆ ಹತ್ತು ನಿಮಿಷ ಕೈಯಿಟ್ಟು ನಾವು ನಿಂತುಕೊಂಡರೆ ನಮ್ಮ ಬ್ಲಡ್ ಪ್ರೆಷರ್ ಮತ್ತು ಶುಗರ್ ನಾರ್ಮಲ್ ಆಗುತ್ತದೆಯಂತೆ. ಇದನ್ನೆಲ್ಲಾ ನಾಸಾದವರು ಪ್ರಯೋಗ ಮಾಡಿ ನೋಡಿ ಖಚಿತ ಪಡಿಸಿದ್ದಾರೆಂದು ಯುಪಿಯ ಯೋಗಿ ಮತ್ತು ಕರ್ನಾಟಕದ ಗೋಸ್ವಾಮಿ ಮಠದವರು ಹೇಳಿದ್ದಾರೆ. (ಅಲ್ಲಾ, ಸಾರ್, ಈ ಅಮೆರಿಕದ ನಾಸಾದವರು ಬಾಹ್ಯಾಕಾಶ ಪ್ರಯೋಗಗಳನ್ನು ಮಾಡುವುದನ್ನು ಬಿಟ್ಟು ಭಾರತದ ಮೌಢ್ಯಗಳ ಗುಡಾಣವಾದ ಹಸುವಿನ ಉಸಿರು ಮೂತ್ರ ಹೂಸು ಸೆಗಣಿಯನ್ನು ಎಂದಿನಿಂದ ಪರೀಕ್ಷೆ ಮಾಡಲು ಶುರುಮಾಡಿದರು?) ಇದು ಯುನೆಸ್ಕೋದವರು ಮೋದಿಯನ್ನು ಜಗತ್ತಿನ ಬೆಸ್ಟ್ ಪ್ರಧಾನಿ ಎಂದು ಘೋಷಿಸಿದಷ್ಟೇ ಸತ್ಯ ಬಿಡಿ. ಆದರೂ ನಮ್ಮ ಸಂಘಿ ಮೀಡಿಯಾದವರು ಗೋವಿನ ಉಸಿರು ಉಚ್ಚೆ ಹೂಸು ಸೆಗಣಿ ತುಪ್ಪ ಎಲ್ಲದರಲ್ಲಿಯೂ ಆಕ್ಸಿಜನ್ ಇದೆಯೆಂದು ಘೋಷಿಸಿರುವುದರಿಂದ, ಗೋರಖಪುರದ ಆಸ್ಪತ್ರೆಯಲ್ಲಿ ಈ ಗೋವಿನ ಮೂಗಿಗೆ ಮತ್ತು ಹಿಂಬದಿಗೆ ಪೈಪ್ ಜೋಡಿಸಿ ಮಕ್ಕಳಿಗೆ ಆಕ್ಸಿಜನ್ ಪೂರೈಸಿದ್ದರೆ ಬಹುಶ ಎಲ್ಲಾ ನೂರಾ ಐದು ಮಕ್ಕಳೂ ಬದುಕಿರುತ್ತಿದ್ದರೇನೋ ಪಾಪ. ಆ ಆಸ್ಪತ್ರೆಯ ಸಮೀಪದಲ್ಲಿಯೇ ಇರುವ ಯೋಗಿ ಆದಿತ್ಯನಾತನ ಮಠದಲ್ಲಿಯೇ ಸುಮಾರು ಇನ್ನೂರು ಗೋವುಗಳಿವೆಯಂತೆ. ಹಾಗಾಗಿ ಆ ಮಠದಿಂದಲೇ ಪೈಪ್ ಲೈನ್ ಹಾಕಿ ಆಸ್ಪತ್ರೆಯ ವಾರ್ಡುಗಳಿಗೆ ನೇರ ಕನೆಕ್ಷನ್ ಕೊಟ್ಟು ಮಕ್ಕಳನ್ನು ಬದುಕಿಸಬಹುದಿತ್ತು! ಜತೆಗೆ ಆಸ್ಪತ್ರೆಯ ಹಣವೂ ಉಳಿತಾಯವಾಗುತ್ತಿತ್ತು.

ಈಗಿನ ತಾಜಾ ಸುದ್ದಿಯೇನೆಂದರೆ ಬಾಬಾ ರಾಮದೇವ್ ಪತಂಜಲಿ ಆಕ್ಸಿಜನ್ ಸಪ್ಲಯ್ ಕಂಪನಿ ಶುರು ಮಾಡಿದ್ದಾನಂತೆ. ಆದರೆ ಅದು ಶುದ್ಧ ವೈದ್ಯಕೀಯ ಆಕ್ಸಿಜನ್ನೋ ಅಥವಾ ಗೋವಿನ ಉಸಿರು ಹೂಸಿನ ಆಕ್ಸಿಜನ್ನೋ ಎಂಬುದನ್ನು ಬಾಬಾ ರಾಮ್‌ದೇವ ಹೇಳಿಲ್ಲ.


■ ಮಲ್ಲಿಕಾರ್ಜುನ ಶೆಟ್ಟರ್, ಬೆಳಗಾವಿ



Registered No.RNP/KA/BGS/2036/2017-19 Posted at BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 06-09-2017 RNI No. KARKAN



ಕಿರಿಕ್ ಪಾರ್ಟಿ ರಕ್ಷಿತ್ ಶೆಟ್ಟಿ, ಕಿಚ್ಚ ಸುದೀಪ್ ಜೋಡಿಯಲ್ಲಿ ಮೂಡಿ ಬರುತ್ತೆ ಎನ್ನಲಾಗಿದ್ದ 'ಥಗ್ಸ್ ಆಫ್ ಮಾಲ್ಗುಡಿ' ಚಿತ್ರಕ್ಕೆ ಅದ್ಯಾಕೊ ಸ್ಟಾರ್ಟಿಂಗ್ ಟ್ರಬಲ್ಲಂತೆ. ಚಿತ್ರ ಮಾಡೋದಾಗಿ ರಕ್ಷಿತ್ ಶೆಟ್ಟಿ ಅನೌನ್ಸ್ ಮಾಡಿ ಅಜಮಾಸು ಮೂರು ವರ್ಷಗಳೇ ಸವೆಯುತ್ತಾ ಬಂದವು. ಮಾಲ್ಗುಡಿ ಟೈಟಲ್ ಕೇಳಿಯೇ ಸಖತ್ ಥ್ರಿಲ್ಲಾಗಿ ನಟಿಸಲು ಒಪ್ಪಿಕೊಂಡಿದ್ದ ಸುದೀಪ್‌ಗೆ ಸಿನಿಮಾ ಡಿಲೇ ಆಗುತ್ತಿರೋದ್ರಿಂದ ಸ್ಯಾನೆ ಬೇಜಾರಾಗಿದೆಯಂತೆ. ಅದಕ್ಕೆ ಸದ್ಯದ ಮಟ್ಟಿಗೆ ಥಗ್ಸ್ ಆಫ್ ಮಾಲ್ಗುಡಿ ಆಗುತ್ತೆ ಎನ್ನುವ ಭರವಸೆ ಇಲ್ಲ. ಅದು ಮುಗಿದುಹೋದ ಕಥೆ ಅಂತ ಫುಲ್‌ಸ್ಟಾಪ್ ಇಟ್ಟಿದ್ದಾರೆ. ರಕ್ಷಿತ್ ಶೆಟ್ಟಿ ತುಂಬಾ ಬ್ಯುಜಿ ಇದ್ದಾರೆ, ಹಾಗಾಗಿ ಬೆಳೆಯುವವರಿಗೆ ಬೆಳೆಯಲು ಬಿಟ್ಟು ನಾವು ಮುಂದಕ್ಕೆ ಹೋಗ್ತಿರ್ಬೇಕು ಎಂದಿರುವ ಸುದೀಪ್ ಸೈಲೆಂಟಾಗಿ ತಮ್ಮ ಅಸಮಾಧಾನ ಹೊರಹಾಕಿದರೆ ರಕ್ಷಿತ್ ಶೆಟ್ಟಿ ಮಾತ್ರ 'ಥಗ್ಸ್' ಕತೆಗೆ ಸುದೀಪ್‌ರೆ ಬೇಕು, ಅವರನ್ನು ಬಿಟ್ಟು ಮತ್ತ್ಯಾರಿಗೂ ಸ್ಕ್ರಿಪ್ಟ್ ಬರೆಯೋಲ್ಲ ಅನ್ನೊ ಪ್ರತಿಜ್ಞೆ ಹರಿಬಿಟ್ಟಿದ್ದಾರೆ. ಸದ್ಯಕ್ಕೆ 'ಅವನೇ ಶ್ರೀಮನ್ನಾರಾಯಣ' ಚಿತ್ರದ ಕೆಲಸದಲ್ಲಿ ತೊಡಗಿಸಿಕೊಂಡಿರೋ ರಕ್ಷಿತ್ ಅದು ಮುಗಿದನಂತರ 'ಥಗ್ಸ್ ಆಫ್ ಮಾಲ್ಗುಡಿ'ಗೆ ಸ್ಕ್ರಿಪ್ಟ್ ಬರೆಯಲು ಶುರು ಮಾಡುತ್ತಾರಂತೆ. ಅದಕ್ಕೂ ಮುನ್ನ ಮತ್ತೊಂದು ಸಲ ಸುದೀಪ್ ಬಳಿ ಹೋಗಿ ಕೇಳಿ ನೋಡ್ತೀನಿ, ಅವ್ರು ಒಪ್ಪಿದ್ರೆ ಸ್ಕ್ರಿಪ್ಟ್ ಕೆಲಸ ಮುಂದುವರೆಸ್ತೇನೆ ಇಲ್ಲಾಂದ್ರೆ ಬೇರೆ ಯಾರಿಗೂ ಆ ಸ್ಕ್ರಿಪ್ಟ್ ಮಾಡಲ್ಲ ಅನ್ನೋದು ಶೆಟ್ಟರ ಪ್ರತಿಜ್ಞೆ. ಅಂತೂ ಒಂದೊಳ್ಳೆ ಸಿನಿಮಾದ ನಿರೀಕ್ಷೆಯಲ್ಲಿದ್ದ ಪ್ರೇಕ್ಷಕರಿಗೆ ಇದು ಶುಭ ಸುದ್ದಿಯಂತೂ ಅಲ್ಲ. ಅಂದಹಾಗೆ, ಅತ್ತ ಬಾಲಿವುಡ್‌ನಲ್ಲಿ ವಿಜಯ್ ಕೃಷ್ಣನ್ ಆಚಾರ್ಯ ಎಂಬ ನಿರ್ದೇಶಕ ಆಮೀರ್ ಖಾನ್‌ರನ್ನು ಹೀರೊ ಆಗಿಸಿ ಹೆಚ್ಚೂಕಮ್ಮಿ ಇದೇ ಹೆಸರನ್ನು ಹೋಲುವ 'ಥಗ್ಸ್ ಆಫ್ ಹಿಂದೂಸ್ತಾನ್' ಅನ್ನೋದ ಸಿನಿಮಾ ಮಾಡುತ್ತಿದ್ದಾರೆ. ಆದರೆ ಹೆಸರಿನ ಸಾಮ್ಯತೆ ಬಿಟ್ಟರೆ ಆಮೀರ್ ಕಥೆಗೂ, ಶೆಟ್ಟರ ಕಥೆಗೂ ಏನೂ ಸಂಬಂಧವಿಲ್ಲವಂತೆ.



ರಕ್ಷಿತ್ 'ಮಾಲ್ಗುಡಿ'ಗೆ ನೋ ಅಂದ್ರಾ ಸುದೀಪ್?

ಸಿನಿಮಾ ಸುದ್ದಿ: ಗಿರೀಶ್ ತಾಳಿಕಟ್ಟೆ



ಮಳೆ ಹುಡುಗಿ ಪೂಜಾ ಗಾಂಧಿ ಈಚೀಚೆಗೆ ಸಿನಿಮಾಗಿಂತ ವಿವಾದಗಳಿಂದಲೇ ಸುದ್ದಿಯಾಗುತ್ತಿದ್ದಾಳೆ. ಸಾಲುಸಾಲು ಎಂಗೇಜ್‌ಮೆಂಟು, ಅಷ್ಟೇ ಪ್ರಮಾಣದ ಬ್ರೇಕಪ್ಪು, ಪೊಲಿಟಿಕಲ್ ಗಿರಗಿಟ್ಲೆ ಹೀಗೆ ಆಯಮ್ಮ ಸುದ್ದಿಗೆ ಆಹಾರವಾಗಿದ್ದೇ ಹೆಚ್ಚು. ನಟೋರಿಯಸ್ ದಂಡುಪಾಳ್ಯದ ನಟಿಯನ್ನು ಆವರಿಸಿಕೊಂಡು ಈಗ ಮತ್ತೊಂದು ಗಾಸಿಪ್ಪು ಹರಿದಾಡುತ್ತಿದೆ. ತೆಲುಗು ಡೈರೆಕ್ಟರ್ ಜೆಡಿ ಚಕ್ರವರ್ತಿಯ ನಿರ್ದೇಶನದಲ್ಲಿ 'ರಾವಣಿ' ಸಿನಿಮಾ ಮಾಡುತ್ತಿರೋದಾಗಿ ಮಳೆ ಹುಡುಗಿ ಗಾಂಧಿನಗರದಲ್ಲಿ ಮಿಂಚು ಹರಿಸಿದ್ದಳು. ಆಮೇಲೆ ಜೆಡಿ –ಪೂಜಾ ನಡುವೆ ಸಿನಿಮಾಗೂ ಮೀರಿದ ಅದ್ಯಾವುದೋ ಕೆಮಿಸ್ಟ್ರಿ ಕದಲಾಡುತ್ತಿದೆ ಎಂಬ ಮಾತುಗಳೂ ಕೇಳಿ ಬಂದಿದ್ದವು. ಅದನ್ನ ಸಾಬೀತು ಮಾಡುವಂತೆ ಮೊದಲ ಸಿನಿಮಾ ತೆರೆಗೆ ಬರುವ ಮೊದಲೇ ಜೆಡಿ ಚಕ್ರವರ್ತಿ ಜೊತೆ ತಾನು ಹತ್ತು ಚಿತ್ರ ಮಾಡೋದಾಗಿ ಹೇಳಿಕೊಂಡು ತಿರುಗಾಡುತ್ತಿದ್ದಳು. ಆದರೀಗ ಯಥಾ ಪ್ರಕಾರ ಪೂಜಾ ಮತ್ತು ಜೆಡಿ ಚಕ್ರವರ್ತಿಯ ನಡುವೆಯೇ ಹಳಸಿಕೊಂಡಿರೋ ಬಗ್ಗೆ ಗಾಂಧಿನಗರದ ತುಂಬಾ ಗುಲ್ಲೆದ್ದಿದೆ. ಪೂಜಾ ಗಾಂಧಿ ಮತ್ತು ಜೆಡಿ ಚಕ್ರವರ್ತಿ ಜಾಯಿಂಟ್ ವೆಂಚರ್‌ನಲ್ಲಿ ಶುರುವಾದ ಸಿನಿಮಾಗಳಲ್ಲಿ ಕೆಲಸ ಮಾಡಿದ ಕಾರ್ಮಿಕರು ಮತ್ತು ತಂತ್ರಜ್ಞರಿಗೆ ಪೂಜಾ ಪೇಮೆಂಟು ಕೊಡದೆ ಸತಾಯಿಸುತ್ತಿದ್ದಾಳಂತೆ. ಇತ್ತೀಚೆಗೆ ಸಿನಿಮಾಗೆ ಕೆಲಸ ಮಾಡಿದ್ದ ಕಾರ್ಮಿಕರೆಲ್ಲ ಕತ್ರಿಗುಪ್ಪೆಯಲ್ಲಿರುವ ಪೂಜಾಳ ಪ್ರೆಸ್ಟೀಜ್ ಫ್ಲಾಟ್‌ಗೇ ನುಗ್ಗಿದ್ದರು, ಆದರೆ ಪೂಜಾ ಗಾಂಧಿ ಯಾರ ಕೈಗೂ ಸಿಕ್ಕದೆ ನಾಪತ್ತೆಯಾಗಿದ್ದಾಳೆ ಅನ್ನೋದು ಲೇಟೆಸ್ಟ್ ಗಾಸಿಪ್ಪಿನ ಸಾರಾಂಶ. ಇದು ಎಷ್ಟು ನಿಜವೋ, ಎಷ್ಟು ಸುಳ್ಳೋ ಮಳೆಹುಡುಗಿಯೇ ಗುಡುಗಬೇಕು!



ಮಳೆಹುಡುಗಿಯ ಹೊಸ ಜಿಟಿಜಿಟಿ



ಮೊನ್ನೆ ಇದ್ದಕ್ಕಿದ್ದಂತೆ ನಮ್ಮ ಸ್ಯಾಂಡಲ್‌ವುಡ್ ಮಂದಿಯನ್ನು ಸುದ್ದಿಯೊಂದು ಬೆಚ್ಚಿ ಬೀಳಿಸಿತ್ತು. ಅದು ಪಕ್ಕದ ಟಾಲಿವುಡ್‌ನ ತೆಲುಗು ವೆಬ್‌ಸೈಟ್ ಸಿಡಿಸಿದ್ದ ಸುದ್ದಿ. 'ಟಾಕೀಸು', ಟೆಂಟು ಅಂತ ಹಾಕ್ಕೊಂಡು 'ಮಜಾ' ಮಾಡ್ಕೊಂಡಿರೊ ನಮ್ಮ ಸೃಜನ್ನು, ಅದೇ ಮಾರಾಯ್ರೆ... ಸೃಜನ್ ಲೋಕೇಶು ಅನಾಮತ್ತು ನಟಿಯೊಬ್ಬಳ ಮೇಲೆ ರೇಪ್ ಅಟೆಂಪ್ಟು ಮಾಡ್ಬಿಟ್ಟಿದೆ ಅನ್ನೋ ಸುದ್ದಿ ಅದಾಗಿತ್ತು. ವಿಷಯ ತಿಳಿದಿದ್ದೇ ತಡ ಬ್ರೇಕಿಂಗ್ ನ್ಯೂಸ್‌ಗೆ ಕನ್ನಡದ ಟೀವಿ ಚಾನೆಲ್‌ಗಳೆಲ್ಲ ಮೈಕ್ ಒರೆಸಿಕೊಂಡು ಸಜ್ಜಾಗಿಬಿಟ್ಟಿದ್ದವಂತೆ. ಆದ್ರೆ ಅಷ್ಟರಲ್ಲೆ ಅದು ಬೈ ಮಿಸ್ಟೇಕ್ ಸುದ್ದಿ ಅಂತ ಗೊತ್ತಾಗಿ ಗಿರಿಜಮ್ಮ ನಿಟ್ಟುಸಿರು ಬಿಟ್ಟರಂತೆ. ಅಷ್ಟಕ್ಕೂ ಆಗಿದ್ದಿಷ್ಟೆ.



ತೆಲುಗು ಇಂಡಸ್ಟ್ರಿಯ ಸೃಜನ್ ಎಂಬ ನಟ, ಚಲಪತಿ ಎಂಬ ನಟ ಕಂ ನಿರ್ದೇಶಕನ ಜೊತೆ ಸೇರಿಕೊಂಡು ತನ್ನ ಮೇಲೆ ಚಲಿಸುತ್ತಿರುವ ಕಾರ್‌ನಲ್ಲೇ ಲೈಂಗಿಕ ಕಿರುಕುಳ ಕೊಟ್ಟು ರೇಪ್ ಮಾಡಲು ಯತ್ನಿಸಿದರು ಅಂತ ತೆಲುಗಿನ ಉದಯೋನ್ಮುಖ ನಟಿಯೊಬ್ಬಳು ವಿಜಯವಾಡ ಪೊಲೀಸರಿಗೆ ಕಂಪ್ಲೆಂಟ್ ಕೊಟ್ಟಿದ್ದಳು. ಆ ಸುದ್ದಿಯನ್ನು ಬಿತ್ತರಿಸುವ ಭರಾಟೆಯಲ್ಲಿ ಸಿನಿ ವೆಬ್‌ಸೈಟ್‌ಗಳು ತೆಲುಗಿನ ಸೃಜನ್ ಜಾಗದಲ್ಲಿ ನಮ್ ಟಾಕೀಸಿನ ಸೃಜನ್ ಲೋಕೇಶ್ ಹೆಸರು ಮುದ್ರಿಸಿದ್ದಲ್ಲದೆ ಸೃಜನ್ ಲೋಕೇಶ್ ಫೋಟೊ ಹಾಕಿ ಪ್ರಮಾದ ಎಸಗಿದ್ದವು. ಆಮೇಲೆ ತಪ್ಪು ಅರ್ಥವಾಗಿ ಕಣ್ತಪ್ಪನ್ನು ಸರಿ ಮಾಡಿಕೊಂಡವು. ಅಷ್ಟಕ್ಕೂ ಈ ಚಲಪತಿ ಬಗ್ಗೆ ಕೆಟ್ಟ ಮಾತುಗಳು ತೂರಿ ಬರುತ್ತಿರೋದು ಇದೇ ಮೊದಲೇನಲ್ಲ. ತೆಲುಗು ಇಂಡಸ್ಟ್ರಿಯ ಸೀನಿಯರ್ ನಟ–ನಿರ್ದೇಶಕನಾಗಿ ಈತ ಮಾಡಿಕೊಂಡ ಯಡವಟ್ಟುಗಳು ಸಾಕಷ್ಟಿವೆ. ಅದೊಮ್ಮೆ ಖ್ಯಾತ ನಟ ನಾಗಾರ್ಜುನ್‌ರ ಮಗ ನಾಗ ಚೈತನ್ಯನ ಸಿನಿಮಾ ಪ್ರಮೋಷನ್ ಸಮಾರಂಭವೊಂದರಲ್ಲಿ ಚೆಂಗಲು ಆ್ಯಂಕರಮ್ಮ 'ಹುಡುಗೀರು ಮಾನಸಿಕ ಆರೋಗ್ಯಕ್ಕೆ ಹಾನಿಕಾರವಾ?' ಅನ್ನೋ ಪ್ರಶ್ನೆ ಕೇಳಿದಾಗ 'ಹುಡುಗೀರು ಆರೋಗ್ಯಕ್ಕೆ ಹಾನಿಕಾರವೊ ಇಲ್ಲವೋ ನನಗೆ ಗೊತ್ತಿಲ್ಲ, ಆದ್ರೆ ಕರೆದರೆ ಹಾಸಿಗೆಯಲ್ಲಿ ಕೆಲಸಕ್ಕೆ ಬರ್ತಾರೆ' ಎಂಬ ಪೋಲಿ ಹೇಳಿಕೆ ಕೊಟ್ಟು ಇಡೀ ಇಂಡಸ್ಟ್ರಿಯಿಂದ ಧಿಕ್ಕಾರ ಕೂಗಿಸಿಕೊಂಡಿದ್ದ. ಬಹುಭಾಷಾ ನಟಿ ಭಾವನಾಳ ಮೇಲೆ ಇದೇರೀತಿ ಚಲಿಸುತ್ತಿರುವ ಕಾರ್‌ನಲ್ಲಿ ಲೈಂಗಿಕ ಕಿರುಕುಳ ಕೊಟ್ಟ ಪ್ರಕರಣ ಮಲಯಾಳಂ ಇಂಡಸ್ಟ್ರಿಯನ್ನು ಇನ್ನೂ ಅಲುಗಾಡಿಸುತ್ತಲೇ ಇರುವಾಗ ಟಾಲಿವುಡ್ ಕೂಡಾ ಇಂತದ್ದೇ ಯಡವಟ್ಟಿಗೆ ಸಿಲುಕಿಕೊಂಡಿದೆ. ಸೃಜನಶೀಲ ಕ್ಷೇತ್ರವಾಗಬೇಕಿದ್ದ ಸಿನಿಮಾ ರಂಗದಲ್ಲಿ ಇಂಥಾ ವಿಕೃತರು ಹೆಚ್ಚಾಗುತ್ತಿರೋದು ಮಾತ್ರ ವಿಪರ್ಯಾಸ. ಅದೆಲ್ಲಾ ಒತ್ತಟ್ಟಿಗಿರಲಿ, ಸುದ್ದಿವೀರರು ಮಾಡಿದ ಯಡವಟ್ಟಿಗೆ, ಪಾಪದ ನಮ್ಮ ಟಾಕೀಸ್ ಸೃಜನ್ನು ಗಾಬರಿಬಿದ್ದು 'ನಾನವನಲ್ಲ, ನಾನವನಲ್ಲ' ಅಂತ ಸಿಕ್ಕಸಿಕ್ಕವರಿಗೆಲ್ಲ ಸ್ಪಷ್ಟೀಕರಣ ಕೊಡುವಂತಾಯ್ತಲ್ಲ ಮಾರಾಯ್ರೆ....



ಟಾಕೀ ಸೃಜನ ರೇಪ್ ಮಾಡ್ ಮಾರ್ರೆ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com